ಕರ್ನಾಟಕ ಸರ್ಕಾರ

# ವೃಕ್ಷ ಮಾತೆ ಸಾಲುಮರದ ತಿಮ್ಮಕ್ಕ


ಡಾ. ನೆಲ್ಲಿಕಟ್ಟೆ ಎಸ್. ಸಿದ್ದೇಶ್




ಕನ್ನಡ ಪುಸ್ತಕ ಪ್ರಾಧಿಕಾರ

ಮಕ್ಕಳಿಲ್ಲದ ಚಿಕ್ಕಯ್ಯ-ತಿಮ್ಮಕ್ಕ ದಂಪತಿಗಳು ಸಾಲುಮರಗಳನ್ನು ನೆಡುವ ಕಾರ್ಯವನ್ನು ಕೈಗೊಂಡು ಆ ಮಾತಿಗೆ ಅರ್ಥವಂತಿಕೆಯನ್ನು ತುಂಬಿದವರು. ಮಕ್ಕಳಿಲ್ಲದ ಈ ದಂಪತಿಗಳು ೨೮೪ ಆಲದ ಮರಗಳ ಮಾತಾಪಿತರಾಗಿದ್ದು ರೋಚಕ, ಅದ್ಭುತ. ತೀರಾ ಬಡತನದ ಹಿನ್ನೆಲೆಯಲ್ಲಿಂದ ಬಂದರೂ, ಬಾಲ್ಯದಿಂದಲೇ ಕೊಡುಗೈ ದಾನಿಯಾಗಿದ್ದ ತಿಮ್ಮಕ್ಕ, ಸಮಾಜ ತನ್ನನ್ನು ಗುರುತಿಸಿದ ಸಂದರ್ಭದಲ್ಲಿ ದೊರೆತ ಹಣದಲ್ಲಿ ಹಳ್ಳಿಯ ಹೆರಿಗೆ ಆಸ್ಪತ್ರೆಗೆ ಒಂದು ಲಕ್ಷ ರೂ. ನೀಡಿರುವುದನ್ನು ನೋಡಿದರೆ ಆ ಹಿಮಾಲಯದೆತ್ತರದ ವ್ಯಕ್ತಿತ್ವ ವಿಸ್ಮಯ ಉಂಟುಮಾಡುತ್ತದೆ.

ಡಾ. ಸಿದ್ಧಲಿಂಗಯ್ಯ
ಅಧ್ಯಕ್ಷರು

ಬೆಲೆ: ರೂ. ೫೦/-


ಕನ್ನಡ ಪುಸ್ತಕ ಪ್ರಾಧಿಕಾರ



ISBN : 81-7713-292-x

ಪರಿಸರ ಮಾತೆ

# ಸಾಲುಮರದ ತಿಮ್ಮಕ್ಕ

ಡಾ. ನೆಲ್ಲಿಕಟ್ಟೆ ಎಸ್.ಸಿದ್ದೇಶ್

ಕನ್ನಡ ಪುಸ್ತಕ ಪ್ರಾಧಿಕಾರ
ಕನ್ನಡ ಭವನ, ಜೆ.ಸಿ.ರಸ್ತೆ
ಬೆಂಗಳೂರು

**PARISARA MATHE SALUMARADA THIMMAKKA** (A Life History of Salumarada Thimmakka) A book Written by **Dr. Nellikatte S. Siddesh,** M.A., M.Ed., Ph.d., Lecturer in Kannada, Govt. P.U. College, Yalagodu-577 521, Chitradurga Tq & Dist. Phone 9986353410, http://nellikatte.blogspot.com, e-mail: nellikattesiddesh@gmail.com. Published by Ashok N. Chalavadi, Administrative Officer, Kannada Pustaka Pradhikara, Kannada Bhavana, J.C.Road, Bangalore

Pages: viii + 86 First Impression : 2008 Price: **Rs. 70/-**

© Author

*Cover page Design:* C.M.Ashok. Nellikatte
*Inner page photo's:* B.V.Govindappa

*Printed by:* **ILA Mudrana**
#36, 40 Feet Road, Raghavanagara
New Timberyard Layout, Bangalore-560 026

**ಪರಿಸರಮಾತೆ ಸಾಲುಮರದ ತಿಮ್ಮಕ್ಕ**
(ಸಾಲುಮರದ ತಿಮ್ಮಕ್ಕನವರ ಜೀವನ ಮತ್ತು ಸಾಧನೆ)

*ಲೇಖಕರು:*
**ಡಾ. ನೆಲ್ಲಿಕಟ್ಟೆ ಎಸ್. ಸಿದ್ದೇಶ್,** ಎಂ.ಎ., ಎಂ.ಇಡಿ., ಪಿಎಚ್.ಡಿ.
ಕನ್ನಡ ಉಪನ್ಯಾಸಕರು
ಸರ್ಕಾರಿ ಪದವಿ ಪೂರ್ವ ಕಾಲೇಜು, ಯಳಗೋಡು,
ಚಿತ್ರದುರ್ಗ ತಾ: ಮತ್ತು ಜಿಲ್ಲೆ–೫೭೭೫೨೧, ದೂ. ಸಂಖ್ಯೆ: ೯೯೮೬೩೫೩೪೧೦
http://nellikatte.blogspot.com, e-mail: nellikattesiddesh@gmail.com.

ಪುಟಗಳು: viii + ೮೬
ಬೆಲೆ : **ರೂ. ೭೦–೦೦**
ಹಕ್ಕುಗಳು : ಲೇಖಕರದು
ಪ್ರಥಮ ಮುದ್ರಣ : ೨೦೦೮
ಮುಖಪುಟ ವಿನ್ಯಾಸ : **ಸಿ.ಎಂ.ಅಶೋಕ್ ನೆಲ್ಲಿಕಟ್ಟೆ**
ಒಳ ಪುಟದ ಫೋಟೋಗಳು : **ಬಿ.ವಿ. ಗೋವಿಂದಪ್ಪ**

*ಪ್ರಕಾಶಕರು:*
**ಅಶೋಕ ಎನ್. ಚಲವಾದಿ**
ಆಡಳಿತಾಧಿಕಾರಿಗಳು, ಕನ್ನಡ ಪುಸ್ತಕ ಪ್ರಾಧಿಕಾರ
ಕನ್ನಡ ಭವನ, ಜೆ.ಸಿ.ರಸ್ತೆ, ಬೆಂಗಳೂರು–೧೦

ಮುದ್ರಣ:
**ಇಳಾ ಮುದ್ರಣ**
೩೬, ೪೦ ಅಡಿರಸ್ತೆ, ರಾಘವನಗರ
ನ್ಯೂ ಟಿಂಬರ್‌ಯಾರ್ಡ್ ಲೇಔಟ್
ಬೆಂಗಳೂರು–೫೬೦ ೦೨೬



# ಅಧ್ಯಕ್ಷರ ಮಾತು

ಕನ್ನಡ ಪುಸ್ತಕ ಪ್ರಾಧಿಕಾರ ಕನ್ನಡ ಪುಸ್ತಕ ಲೋಕದ ಏಳಿಗೆಗಾಗಿ ದುಡಿಯುತ್ತಿರುವ ಸಂಸ್ಥೆಯಾಗಿದ್ದು, ಈವರೆಗೆ ನೂರಾರು ಪುಸ್ತಕಗಳನ್ನು ಹೊರತಂದಿದೆ. ಪ್ರಾಧಿಕಾರ ಪ್ರಕಟಣಾ ಕಾರ್ಯಕ್ಕೆ ತೊಡಗುವ ಮುಂಚೆ ಆ ಕೃತಿ ಸಮಾಜಕ್ಕೆ ಎಷ್ಟರಮಟ್ಟಿಗೆ ಉಪಯೋಗವಾಗುತ್ತದೆ. ಎಂಬುದನ್ನು ಗಮನಿಸುತ್ತದೆ. ಇಂದಿಗೂ ಕನ್ನಡದಲ್ಲಿ ಮಕ್ಕಳ ಕಥೆಗಳ ಸಂಖ್ಯೆ ಕಡಿಮೆಯೇ. ಪ್ರಾಚೀನ ಸಾಹಿತ್ಯದ ಪಂಚತಂತ್ರದ ಕಥೆಗಳಂತ ಕೆಲವೇ ಕೃತಿಗಳನ್ನು ಹೊರತು ಪಡಿಸಿದರೆ ೨೦ನೇ ಶತಮಾನದವರೆಗೆ ಮಕ್ಕಳಿಗಾಗಿ ರಚಿತವಾದ ಕೃತಿಗಳ ಸಂಖ್ಯೆ ಬೆರಳೆಣಿಕೆಯಷ್ಟು ಅಥವಾ ಇಲ್ಲವೇ ಇಲ್ಲ ಎನ್ನುವಷ್ಟು ವಿರಳವಾಗಿದೆ. ೨೦ನೇ ಶತಮಾನದ ಪ್ರಾರಂಭದಿಂದ ಕನ್ನಡದ ಕೆಲ ಹಿರಿಯರು ಈ ಕ್ಷೇತ್ರದಲ್ಲಿ ಕೆಲಸ ಮಾಡಿದ್ದಾರೆ. ಆಂಗ್ಲಭಾಷೆಯಲ್ಲಿ ಮಕ್ಕಳಿಗಾಗಿ ಸಾವಿರಾರು ವರ್ಣಮಯ ಪುಸ್ತಕಗಳು ಹೊರಬರುತ್ತಿದ್ದು, ಕನ್ನಡದ ಮಕ್ಕಳು ಆ ಸೌಲಭ್ಯದಿಂದ ವಂಚಿತರಾಗಿದ್ದಾರೆ. ಶ್ರೀ ಕಂಚ್ಯಾಣಿ ಶರಣಪ್ಪ ಅವರು ಹಲವಾರು ವರ್ಷಗಳಿಂದ ಈ ಕ್ಷೇತ್ರದಲ್ಲಿ ದುಡಿಯುತ್ತಿದ್ದಾರೆ ಅವರ 'ಪರಿಸರ ಮಾತೆ ಸಾಲುಮರದ ತಿಮ್ಮಕ್ಕ' ಸಂಕಲನದಲ್ಲಿ ೨೫ ಕಥೆಗಳಿದ್ದು, ಬಹಳ ಸರಳವಾಗಿ ಮಕ್ಕಳ ಮನಸ್ಸನ್ನು ಸೆಳೆಯುವಂತಿದೆ. ಈ ಕೃತಿಯನ್ನು ಹೊರತರಲು ಸಮ್ಮತಿ ನೀಡಿದ ಅವರಿಗೆ ಅಭಾರಿಯಾಗಿದ್ದೇನೆ.

ಈ ಗ್ರಂಥವನ್ನು ಹೊರತರಲು ಸಹಕರಿಸಿದ ಪ್ರಾಧಿಕಾರದ ಆಡಳಿತಾಧಿಕಾರಿಗಳಾದ ಶ್ರೀ ಅಶೋಕ ಎನ್. ಚಲವಾದಿ, ನನ್ನ ಆಪ್ತ ಕಾರ್ಯದರ್ಶಿ ಶ್ರೀ ಕೆ. ಮುಕುಂದನ್, ಸಂಯೋಜನಾಧಿಕಾರಿ ಶ್ರೀ ಜೆ.ಎನ್. ಶಾಮರಾವ್, ಪ್ರಾಧಿಕಾರದ ಎಲ್ಲಾ ಸದಸ್ಯರು ಹಾಗೂ ಸಿಬ್ಬಂದಿವರ್ಗದವರಿಗೆ ನನ್ನ ಕೃತಜ್ಞತೆಗಳು. ಕನ್ನಡ ನಾಡಿನ ಮಕ್ಕಳು ಈ ಕೃತಿಯ ಉಪಯೋಗವನ್ನು ಪಡೆಯುತ್ತಾರೆಂದು ಆಶಿಸುತ್ತೇನೆ.

**ಡಾ|| ಸಿದ್ಧಲಿಂಗಯ್ಯ**
ಅಧ್ಯಕ್ಷರು

## ಲೇಖಕರ ನುಡಿ

**ವೃ**ಕ್ಷಮಾತೆ ಸಾಲುಮರದ ತಿಮ್ಮಕ್ಕ ಅವರ ಜೀವನ ಮತ್ತು ಸಾಧನೆಯನ್ನು ದರ್ಶಿಸುವ ಸೌಭಾಗ್ಯ ಒದಗಿದ್ದು ನನ್ನ ಪುಣ್ಯ. ಅವರ ಒಡಲೊಳಗಿನ ಮಾತುಗಳ ಜಾಡನ್ನೇ ಹಿಡಿದು ಅಧ್ಯಯನ, ಚಿಂತನ–ಮಂಥನ, ತರ್ಕ, ಚರ್ಚೆ, ಅವಲೋಕನ, ಸಂದರ್ಶನ ಮೊದಲಾದ ವಿಧಾನಗಳ ಮೂಲಕ ಮಾಹಿತಿ ಸಂಗ್ರಹಿಸಿದೆ. ಆ ತ್ಯಾಗಜೀವಿಯ ಜೀವನ, ಸಾಧನೆ ಮತ್ತು ವ್ಯಕ್ತಿತ್ವವನ್ನು ಓದುಗ ಮಹಾಶಯರ ಹೃನ್ಮನಕ್ಕೆ ಒಪ್ಪಿಸಿರುವೆ. ಓದುಗರನ್ನು ಪ್ರಕೃತಿಸಿರಿಯ ಸಂವರ್ಧನೆಗೆ ಪ್ರವೃತ್ತರಾಗುವಂತೆ ಈ ಕೃತಿ ಕಿಂಚಿತ್ ಪ್ರಭಾವ ಬೀರಿದರೆ, ಈ ನನ್ನ ಶ್ರಮ ಸಾರ್ಥಕವೆಂದು ಭಾವಿಸುವೆ.

**ಕೃಜ್ಞತೆಗಳು:**

* ಮಹಾಮಾತೆ ಸಾಲುಮರದ ತಿಮ್ಮಕ್ಕನವರಿಗೆ
* ಕೃತಿ ರಚನೆಗೆ ಪ್ರೇರೇಪಕರೂ ಹಾಗೂ ಬೆನ್ನುಡಿ ಬರೆದು ಹಾರೈಸಿರುವ ಶ್ರೀ ಅಶೋಕ ಎನ್.ಚಲವಾದಿ ಅವರಿಗೆ,
* ಮುನ್ನುಡಿ ಬರೆದಿರುವ ಡಾ. ಸಿದ್ಧಲಿಂಗಯ್ಯ ಸರ್ ಅವರಿಗೆ
* ಈ ಕೃತಿ ಪ್ರಕಟಿಸಿರುವ ಕನ್ನಡ ಪುಸ್ತಕ ಪ್ರಾಧಿಕಾರದ ಪದಾಧಿಕಾರಿಗಳಿಗೆ
* ಸಂದರ್ಶನದ ಸಮಯದಲ್ಲಿ ಸಹಕರಿಸಿದ ಪೂಜ್ಯ ಶ್ರೀ ಬಸವನಾಗಿದೇವ ಶರಣರಿಗೆ, ಬಿ.ವಿ. ಗೋವಿಂದಪ್ಪ ಅವರಿಗೆ, ವಿದ್ಯಾಗುರುಗಳಾದ ಡಾ. ಕುಮಾರಚಲ್ಯ, ಡಾ. ಬಿ.ರಾಜಶೇಖರಪ್ಪ, ಬೇದ್ರೆ ಎನ್.ಮಂಜುನಾಥ್ ಅವರಿಗೆ.

  ಹಿತೈಷಿಗಳಾದ ಡಾ. ಸುಭಾಷ್ ಭರಣಿ, ನೆಹರೂ ಬಲೇಕಾರ, ಬಿ.ಡಿ.ಸಾವಕ್ಕನವರ್, ಶ.ಮಂಜುನಾಥ್, ಪ್ರಹ್ಲಾದ್ ಜೆ.ನಾಡಿಗ್, ಪಿ.ಚಂದ್ರಶೇಖರಯ್ಯ, ಎನ್.ರಾಮಚಂದ್ರಪ್ಪ ಪಿ.ಮಂಜುನಾಥ್, ಬ.ಸಣ್ಣಪ್ಪ ಅವರಿಗೆ, ನನ್ನಮ್ಮ ನೆಲ್ಲಿಕಟ್ಟೆ ಮಾರಕ್ಕ, ಅವರಿಗೆ,

  ಮುಖಪುಟ ವಿನ್ಯಾಸಕರಾದ ಸಿ.ಎಂ.ಅಶೋಕ್‌ನೆಲ್ಲಿಕಟ್ಟೆ ಅವರಿಗೆ, ಇಳಾ ಮುದ್ರಣದ ಮಾಲೀಕರಾದ ಶ್ರೀ ಬಿ.ಗುರುಮೂರ್ತಿ ಮತ್ತು ಸಿಬ್ಬಂದಿ ವರ್ಗದವರಿಗೆ ಹೃದಯಪೂರ್ವಕ ಕೃತಜ್ಞತೆಗಳು

ತಾ॥ ೧೭–೧೧–೨೦೦೮

**ಡಾ. ನೆಲ್ಲಿಕಟ್ಟೆ ಎಸ್. ಸಿದ್ದೇಶ್**
ಎಂ.ಎ., ಎಂ.ಇಡಿ., ಪಿಎಚ್.ಡಿ
ಕನ್ನಡ ಉಪನ್ಯಾಸಕರು, ಸರ್ಕಾರಿ ಪದವಿ ಪೂರ್ವ ಕಾಲೇಜು
ಯಳಗೋಡು, ಚಿತ್ರದುರ್ಗ ತಾ, ಜಿಲ್ಲೆ



## ಪರಿವಿಡಿ

| | | |
|---|---|---|
| ೧. | ಮಮತೆಯ ಮಕುಟ: ಮರ ... ... | ೩ |
| ೨. | ಮಾದರಿ ಮಹಿಳೆಯರು ... ... | ೬ |
| ೩. | ತಿಮ್ಮಕ್ಕನವರ ಮನೆತನದ ಪೂರ್ವವೃತ್ತಾಂತ ... ... | ೧೧ |
| ೪. | ತಿಮ್ಮಕ್ಕನವರ ಜನನ ಮತ್ತು ಬಾಲ್ಯ ... ... | ೧೭ |
| ೫. | ತ್ಯಾಗಜೀವಿಗಳ ಸಂಗಮ ... ... | ೨೧ |
| ೬. | ಮರಗಳಲ್ಲಿ ಮಕ್ಕಳನ್ನು ಕಂಡ ಮಹನೀಯರು ... ... | ೩೫ |
| ೭. | ಮರೆಯಾದ ಮಹಾಶಯ ... ... | ೪೭ |
| ೮. | ಮರಗಳು ಕೊಟ್ಟ ಮಂದಹಾಸ ... ... | ೫೩ |
| ೯. | ತಿಮ್ಮಕ್ಕನವರ ವ್ಯಕ್ತಿತ್ವ ... ... | ೫೮ |
| ೧೦. | ಅಂದು ಗುಡಿಸಲು; ಇಂದು ಗುಡಿ ... ... | ೬೪ |

**ಅನುಬಂಧ**

| | | |
|---|---|---|
| ೧. | ವೃಕ್ಷಮಾತೆ ತಿಮ್ಮಕ್ಕ ಬೆಳೆಸಿರುವ ... ... | ೬೮ |
| ೨. | ಛಾಯಚಿತ್ರಗಳಲ್ಲಿ ತಿಮ್ಮಕ್ಕ ... ... | ೬೯ |
| ೩. | ಪ್ರಶಸ್ತಿ ಪತ್ರಗಳು ... ... | ೭೧ |
| ೪. | ಸನ್ಮಾನ ಪತ್ರಗಳು ... ... | ೭೪ |
| ೫. | ನೆನಪಿನ ಕಾಣಿಕೆಗಳು ... ... | ೮೪ |
| ೬. | ಗ್ರಂಥ ಋಣ ... ... | ೮೬ |

## ಪರಿಸರಮಾತೆ

# ಸಾಲುಮರದ ತಿಮ್ಮಕ್ಕ

## ೧. ಮಮತೆಯ ಮಕುಟ: ಮರ

**ಮ**ನುಕುಲದ ಚರಿತ್ರೆಯಲ್ಲಿ ಸುವರ್ಣಾಕ್ಷರಗಳಲ್ಲಿ ಬರೆದಿಡುವ ಮಹಾತ್ಮನೆಂದರೆ ಗೌತಮ ಬುದ್ಧ. ಜಗದ ಜಾಡ್ಯಗಳ ಬಗ್ಗೆ, ಮನುಕುಲದ ಸಾಮರಸ್ಯಕ್ಕೆ, ಸರ್ವೋದಯಕ್ಕೆ ಮಾರಕವಾಗಿರುವ ಸಂಪ್ರದಾಯಗಳು, ಮಲಿನ ಲೋಕರೂಢಿಗಳ ವಿರುದ್ಧ ಮೊಟ್ಟಮೊದಲ ಧ್ವನಿ ಎತ್ತಿದ ಗೌತಮ ಬುದ್ಧ, ಮಾನವನ ಮನದಲ್ಲಿನ ಮಾಲಿನ್ಯವನ್ನು ತೊಳೆದು ಬೆಳಗುವಂತೆ ಮಾಡಿದ ಮಹಾಪುರುಷ. ಪ್ರಪಂಚದಲ್ಲಿಯೇ ಪ್ರಥಮ ಸಾಮಾಜಿಕಚಿಕಿತ್ಸಕನಾದ ಬುದ್ಧ "ಅರಣ್ಯವೆಂದರೆ ಒಂದು ವಿಶಿಷ್ಟ ಜೀವಕೋಶ. ಇದರ ಔದಾರ್ಯ ನಿಸ್ಸೀಮ. ಕಲ್ಯಾಣಗುಣ ಅನಂತ. ಇದು ತನಗಾಗಿ ಏನನ್ನೂ ಬೇಡದೇ ಬೇಡಿ ಬಂದ ಎಲ್ಲರಿಗೂ ತನ್ನ ಅಸ್ತಿತ್ವವನ್ನೇ ಧಾರೆ ಎರೆಯುತ್ತದೆ. ಎಲ್ಲಾ ಜೀವಿಗಳಿಗೂ ಆಶ್ರಯ ನೀಡುತ್ತದೆ. ತನ್ನನ್ನು ಕಡಿಯಲು ಕೊಡಲಿ ತಂದವನಿಗೂ ನೆರಳು ನೀಡುತ್ತದೆ" ಎಂದಿರುವರು. ಕ್ರಿಸ್ತಪೂರ್ವದಲ್ಲೆ ಅರಣ್ಯದ ಮಹತ್ವವನ್ನು ಸಾರಿರುವ ಬುದ್ಧ, ಅರಣ್ಯವನ್ನು ಕಾಪಾಡಿಕೊಂಡು ಆನಂದಮಯವಾಗಿ ಬಾಳುವಂತಹ ಸನ್ಮಾರ್ಗವನ್ನು ತೋರಿಸಿರುವರು.

ಸೌರಮಂಡಲದಲ್ಲಿನ ಗ್ರಹಗಳಲ್ಲಿಯೇ ಅತ್ಯಂತ ವಿಶಿಷ್ಟವಾದ ಭೂಗ್ರಹ ನೀರು, ಆಮ್ಲಜನಕ, ಸಾರಜನಕಯುಕ್ತ ವಾತಾವರಣವನ್ನೊಂದಿ ಸಕಲ ಜೀವರಾಶಿಗೆ ಮೂಲಾಧಾರವಾಗಿದೆ. ಈ ಭೂಮಿಯಲ್ಲಿನ ವೈವಿಧ್ಯಮಯವಾದ ಜೀವ ಸಂಕುಲವು ಸೂಕ್ಷ್ಮ ಸಮತೋಲನದ ಪ್ರಕೃತಿಯನ್ನು ಅವಲಂಬಿಸಿದೆ. ಇಂದಿನ ಕೈಗಾರೀಕರಣ, ನಗರೀಕರಣ, ಆಧುನಿಕರಣಗಳ ಫಲವಾಗಿ ಪ್ರಕೃತಿಯು ಸಮತೋಲನ ತಪ್ಪಿದೆ. ತತ್ಪರಿಣಾಮವಾಗಿ ಉಸಿರಾಡುವ ಗಾಳಿ, ಕುಡಿಯುವನೀರು ಮಲಿನ ವಾಗುತ್ತಿವೆ. ಭವಿಷ್ಯದ ಬದುಕು ಭವ್ಯವಾಗಿರುವುದಕ್ಕೆ ಭರವಸೆಯೇ ಇಲ್ಲದಂತಾಗಿದೆ.

ಸೃಷ್ಟಿಗೂ, ಸೃಷ್ಟಿಯ ವಿಕಾಸಕ್ಕೂ ಪ್ರೇರಕಶಕ್ತಿಯಾದ ಪ್ರಕೃತಿಯನ್ನು ಪ್ರಥಮ ಆದ್ಯತೆಯಿಂದ ಕಾಪಾಡುವ ಹೊಣೆಗಾರಿಕೆ ಪ್ರತಿಯೊಬ್ಬರ ಮೇಲಿದೆ. ಪ್ರಕೃತಿಮಾತೆಯ ಮಡಿಲಲ್ಲಿ ಜೀವಿಸುತ್ತಿರುವ ಎಲ್ಲ ಜೀವಿಗಳು ಒಂದನ್ನೊಂದು ಅವಲಂಬಿಸಿ ಬಾಳುತ್ತಿವೆ. ಅವುಗಳ ಇರುವಿಕೆಗೆ ಅಗತ್ಯವಾದ ಪ್ರಕೃತಿಮಾತೆಯ ವರ್ಣನಾತೀತ ಸೌಂದರ್ಯದ ಗಿಡಮರಗಳನ್ನು ಸ್ವಾರ್ಥಪರವಾದ ಆಸೆಗೆ ಆಹುತಿ ಮಾಡುತ್ತಿರುವುದರಿಂದ ಮುಂದಿನ ಬದುಕು ದುರಂತಮಯವಾಗುವುದರಲ್ಲಿ ಸಂಶಯವಿಲ್ಲ. ಕೈಗಾರಿಕೆ, ಮರಮುಟ್ಟು, ಅಣೆಕಟ್ಟು ನಿರ್ಮಾಣ, ಗಣಿಗಾರಿಕೆ, ಸೌದೆ, ರಸ್ತೆ ನಿರ್ಮಾಣ ಮೊದಲಾದವುಗಳಿಗಾಗಿ ಇಂದು ಅರಣ್ಯವನ್ನು ನಾಶ ಮಾಡುವುದರಿಂದ ಪ್ರಾಣಿ

ಪಕ್ಷಿಗಳ ಸಂತತಿ ನಾಶವಾಗುತ್ತದೆ. ಮಳೆ ಬೆಳೆ ಕಡಿಮೆಯಾಗುತ್ತಿದೆ. ಹಾಹಾಕಾರ ಹೆಚ್ಚಾಗುತ್ತದೆ. ನಮ್ಮ ಸಮಾಧಿಯನ್ನು ನಾವೇ ತೊಡಿಕೊಂಡು ಸರ್ವನಾಶವಾಗುತ್ತೇವೆ.

ಅರಣ್ಯ ನಾಶದಿಂದ ಆಹಾರ ಸರಪಳಿಯಲ್ಲಿ ವ್ಯತ್ಯಾಸವಾಗಿ ಕ್ರಿಮಿ, ಕೀಟಗಳೇ ಹೆಚ್ಚಾಗುತ್ತವೆ. ಪ್ರವಾಹಗಳು ಹೆಚ್ಚಾಗುತ್ತವೆ. ಮಣ್ಣಿನ ಸವಕಳಿ ಉಂಟಾಗಿ ಫಲವತ್ತಾದ ಮೇಲ್ಮಣ್ಣು ನಾಶವಾಗುವುದು. ಇದರಿಂದ ಆಹಾರ ಉತ್ಪಾದನೆಯಲ್ಲಿ ಕುಸಿತವಾಗಿ ಆಹಾರಕ್ಕಾಗಿ ಹಾಹಾಕಾರ ದ್ವಿಗುಣಗೊಳ್ಳುವುದು. ಬಡತನ, ಭಿಕ್ಷಾಟನೆ, ಕಳ್ಳತನ, ಕೊಲೆ, ಸುಲಿಗೆ, ಮೋಸ, ದ್ವೇಷ, ಅಶಿಸ್ತು, ಅನೀತಿ, ಅನಾಚಾರ, ಅಕ್ರಮ ಮೊದಲಾದ ಅತಿಭಯಂಕರ ನಡತೆಗಳುಂಟಾಗುವುವು. ಉಷ್ಣತೆ ಹೆಚ್ಚಾಗಿ ಭಯಾನಕರೋಗಗಳಿಗೆ ಪ್ರಾಣಿಸಂಕುಲ ತುತ್ತಾಗುವುದು. ಒಟ್ಟಾರೆ ಮಾನವ ಸಮುದಾಯ, ಪ್ರಾಣಿಪಕ್ಷಿ ಸಮುದಾಯಗಳ ಜೀವನ ಯಾತನೆಯಿಂದ ನರಳುವುದು. ಇಂತಹ ವಿಷಮಯ ವಾತಾವರಣಕ್ಕೆ ಗಿಡಮರಗಳನ್ನು ಸಮೃದ್ಧಿಯಾಗಿ ಬೆಳೆಸದಿರುವುದರ, ಕಾಪಾಡದಿರುವುದರ ಪರಿಣಾಮವೆಂಬ ಅರಿವು ಇಳೆಯಲ್ಲಿ ಇರುವ ಎಲ್ಲರ ಮನಭೂಮಿಕೆಯಲ್ಲಿ ಚಿಗುರೊಡೆಯಬೇಕು. ಅದಷ್ಟೇ ಅಲ್ಲ ಪ್ರತಿಯೊಬ್ಬರು ಗಿಡಮರಗಳ ಮಹತ್‌ನ್ನು ಅರಿತು, ಅವುಗಳನ್ನು ಬೆಳೆಸಿ, ಆರಾಧಿಸುವುದು ಇಂದಿನ ತುರ್ತು ವ್ಯಕ್ತಿಗತ ಕರ್ತವ್ಯವಾಗಬೇಕು.

ಮರದ ಮಹತ್ವ ಅಪಾರ. ಅದರ ಹುಟ್ಟು ಬೆಳವಣಿಗೆಯ ಅರಿವು ಅತಿ ಅಗತ್ಯ ಅಲ್ಲವೇ? ಬೀಜ ಮೊಳೆತು, ಗಿಡವಾಗಿ, ಮರವಾಗಿ ಬೆಳೆದು ಬಾಳಲು ನೀರು, ಹಲವಾರು ಖನಿಜಯುಕ್ತ ಪೋಷಕಗಳು ಬೇಕು. ಇವುಗಳನ್ನು ಮರವು ಬೇರುಗಳ ಮೂಲಕ ಪಡೆಯುವುದು. ಮರದ ಜೀವಂತಕ್ಕೆ ಅದರ ಬೇರು, ಕಾಂಡ ಮತ್ತು ಎಲೆಗಳು ನೆರವಾಗುವ ಪ್ರಮುಖ ಭಾಗಗಳಾಗಿವೆ. ಮರಕ್ಕೆ 'ಬಾಯಿ'ಯಂತೆ ಇರುವ ಬೇರು ಖನಿಜಾಂಶ ಮೊದಲಾದ ಪೋಷಕಗಳನ್ನು ಭೂಮಿಯಿಂದ ಹೀರಿಕೊಂಡು ಕಾಂಡಕ್ಕೆ ರವಾನಿಸುವುದು. ಕಾಂಡವು ಆ ಪೋಷಕಾಂಶಗಳನ್ನು ಎಲೆ, ಮೊಗ್ಗು, ಹೂವು, ಕಾಯಿ, ಹಣ್ಣುಗಳಿಗೆ ರವಾನಿಸುವುದು. ಕಾಂಡದಿಂದ ರಂಬೆಕೊಂಬೆಗಳು ಕವಲೊಡೆದು ಬೆಳೆಯುತ್ತೇವೆ. ಬೇರು ಮತ್ತು ಕಾಂಡಗಳಿಂದ ಪೋಷಕಗಳನ್ನು ಪಡೆದ ಎಲೆಯು ತನ್ನಲ್ಲಿರುವ ಹರಿತ್ತಿನಿಂದ (ಕ್ಲೋರೋಫಿಲ್) ಸೂರ್ಯನ ಶಕ್ತಿಯನ್ನು ಪಡೆದುಕೊಂಡು ಪಿಷ್ಠ(ಸ್ಟಾರ್ಚ್) ಮತ್ತು ಸಸಾರಜನಕ (ಪ್ರೋಟೀನ್)ಗಳೆಂಬ ಆಹಾರವನ್ನು ಉತ್ಪಾದಿಸಿ, ಮೊಗ್ಗು ಹೂವು ಕಾಯಿ ಕಾಂಡ ಬೇರುಗಳಿಗೆ ರವಾನಿಸುವುದು. ಅದಲ್ಲದೆ ಈ ಎಲೆಗಳು ವಾತಾವರಣದಲ್ಲಿನ ಕಾರ್ಬನ್‌ಡೈಆಕ್ಸೈಡ್‌ನ್ನು ಬಳಸಿಕೊಂಡು ಆಮ್ಲಜನಕವನ್ನು ಸಕಲ ಜೀವಕುಲಕ್ಕೆ ಒದಗಿಸುತ್ತವೆ. ಹೀಗೆ ಬೇರು, ಕಾಂಡ ಮತ್ತು ಎಲೆಗಳು ತಮ್ಮದೇ ಆದ ಕರ್ತವ್ಯವನ್ನು ನಿಷ್ಠೆಯಿಂದ ನಿರ್ವಹಿಸುವ ಮೂಲಕ ಮರವನ್ನು ಮತ್ತು ಈ ಜಗತ್ತನ್ನು ಜೀವಂತವಾಗಿಡುತ್ತವೆ.

ಈ ಜೀವಜಗತ್ತು ಮರದ ಎಲೆ, ಮೊಗ್ಗು, ಹೂವು, ಕಾಯಿ, ಹಣ್ಣು, ತೊಗಟೆ, ಬೇರು, ಬೀಜ, ತೈಲ ಮೊದಲಾದವುಗಳನ್ನು ಒಂದಲ್ಲೊಂದು ರೀತಿಯಲ್ಲಿ ಉಪಯೋಗಿಸಿಕೊಂಡೇ ಬದುಕುವುದು. ಪುಟ್ಟ ಸಸಿಯಿಂದ ಹೆಮ್ಮರದವರೆಗೆ ಅದರ ಉಪಯೋಗವನ್ನು ಪಡೆಯುತ್ತೇವೆ.



ಮರವು ತನ್ನ ಅಂತ್ಯ ಕಂಡ ನಂತರವೂ ಅದರ ಉಪಯೋಗವನ್ನು ಪಡೆಯುತ್ತೇವೆ. ಹಾಗಾಗಿಯೇ ನಮ್ಮ ಹಿರಿಯರು ನಿಮ್ಮ ಬದುಕು ಹೆಮ್ಮರದಂತಾಗಲೆಂದು ಹಾರೈಸುವರು.

ಮರವೆಂದರೆ ಮನೋಹರ, ಮನೋಹರಿ, ಮನ್ಮಥ, ಮಮತೆ, ಮಧುಪರ್ಕ, ಮಕರಂದ, ಮರಕತ, ಮಕುಟ–ಎಂದೆಲ್ಲ ಹೇಳಬಹುದಲ್ಲವೇ? ಊಹೆಗೂ ನಿಲುಕದಷ್ಟು ಉಪಕರಣಗಳನ್ನು ಮರಗಳಿಂದ ಪಡೆಯುತ್ತೇವೆ. ಔಷಧಿ, ಎಣ್ಣೆ, ಬಟ್ಟೆ, ಕಾಗದ, ಊಟದೆಲೆ, ರಬ್ಬರ್, ಚೀಲ, ಗೊಬ್ಬರ, ಆಹಾರ, ಮೇವು, ಸೌದೆ, ವ್ಯವಸಾಯೋಪಕರಣ, ಪೀಠೋಪಕರಣ, ರಾಳ, ಗೋಂದು, ನಾರು, ಕೈಗಾರಿಕಾ ಕಚ್ಚಾ ಪದಾರ್ಥಗಳು–ಮೊದಲಾದವುಗಳಿಗೆ ಮರಗಳನ್ನೇ ಅವಲಂಬಿಸಿ ಬಾಳುತ್ತಿದ್ದೇವೆ. ವಾಯುಮಂಡಲವನ್ನು ಶುಚಿಗೊಳಿಸುವ ಮರಗಳು ಹಿತಕರವಾದ ವಾತಾವರಣವನ್ನು ನಿರ್ಮಾಣ ಮಾಡುತ್ತವೆ. ಮಳೆಹನಿಗಳು ರಭಸವಾಗಿ ನೆಲಕ್ಕೆ ಅಪ್ಪಳಿಸುವು ದನ್ನು ತಡೆದು ಭೂಮಿಯ ಫಲವತ್ತತೆಯನ್ನು ಕಾಪಾಡುತ್ತವೆ. ಪ್ರವಾಹಗಳನ್ನು ತಡೆಯುತ್ತವೆ. ಅದಷ್ಟೆ ಅಲ್ಲ ಪ್ರಾಣಿ–ಪಕ್ಷಿ–ಕೀಟಗಳು, ಸಂಧಿಪದಿ, ಶೀಲಿಂದ್ರಗಳು ಮೊದಲಾದವುಗಳಿಗೆ ಆಹಾರ, ಆಶ್ರಯ ಒದಗಿಸುವ ಪರೋಪಕಾರಿಗಳು.

ಆಲದಮರ ಬಹುವರ್ಷ ನಿತ್ಯಹರಿದ್ವರ್ಣದ ಹೆಮ್ಮರವಾಗಿ ಬಾಳುವುದು. ಮಾವಿನ ಮರ ಹಣ್ಣುಗಳ ರಾಜ. ಸಿದ್ದಾರ್ಥ ಬುದ್ಧನಾಗಲು ಆಶ್ರಯ ನೀಡಿದ್ದು ಬೋಧಿ ವೃಕ್ಷ ಅಥವಾ ಅರಳಿಮರ. ಹುಣಸೆಮರ ಅಡುಗೆಗೆ ಅಗತ್ಯ ಬಳಕೆಯಾಗುವ ಹಣ್ಣನ್ನು ನೀಡುವುದು. ಬೇವಿನಮರ ಕಹಿ ತುಂಬಿಕೊಂಡು, ಕಹಿಯ ಬಾಳಿಗೆ ಸಿಹಿ ನೀಡುವುದು. ನೇರಳೆಮರ ನಿತ್ಯ ಹಸಿರು ಸೂಸುವುದು. ಜಕರಾಂಡಮರ ಮನಮೋಹಕ ಹೂವುಗಳನ್ನು ಬಿಡುವುದು. ಹೊಳೆದಾಸವಾಳಮರ ಬಹುಬೆಲೆ ಬಾಳುವುದು. ಬಡವರ ಚೌಬೀನೆ ಎಂದು ಕರೆಯುವ ಬಿದಿರು, ಕಲ್ಪವೃಕ್ಷ ಎಂದೇ ಪ್ರಸಿದ್ಧವಾಗಿರುವ ತೆಂಗಿನ ಮರ, ಅತ್ಯಂತ ಬೆಲೆಬಾಳುವ ತೇಗ ಅಥವಾ ಸಾಗುವನಿಮರ, ಹೊನ್ನೆ, ನಂದಿ, ಮತ್ತಿ, ಬೀಟೆ, ಅಡಿಕೆ, ಅಶೋಕ, ಆಕಾಶಮಲ್ಲಿಗೆ, ಕೆಂಪುಕಂಚುವಾಳ, ಕೆಂಪುಬೂರುಗ, ಕೆಂಪುಹೂ ಕುಚ್ಚಿನಮರ, ಕಕ್ಕೆಮರ, ಕದಂಬ, ಕೃಷ್ಣನಮರ, ಕ್ಯಾಸರಿಕೆ, ಗ್ಲಿರಿಸಿಡಿಯ, ಗುಲ್‌ಮೊಹರ್, ಜಾಲಿ, ಜೀವತರು, ತಾಟಿನುಂಗು, ಮುತ್ತುಗ, ಸಾಸೇಜ್‌ಮರ, ಸಿಲ್ವರ್‌ಓಕ್, ಶಮಿ ಅಥವಾ ಬನ್ನಿಮರ, ಶ್ರೀಗಂಧ, ಹಲಸು, ಹಿಪ್ಪೆ, ಹೂವರಸಿ, ಹೊಂಗೆ, ದೇವರಕಣಿಗಲೆ, ನಾಗಲಿಂಗ, ನೀಲಗಿರಿ, ನುಗ್ಗೆ, ಪಾರಿಜಾತ, ಪಾಲಿವಾಣ, ಬಗಿನಿ, ಬಿಲ್ವಪತ್ರೆಮರ, ಬಿಳಿಕಂಚುವಾಳ, ಬೆಟ್ಟದ ಕಣಗಲು ಮೊದಲಾದ ಮರಗಳು ಆ ಸೃಷ್ಟಿಕರ್ತ ನಮಗೆ ಕೊಟ್ಟ ವರಗಳು. ಅಮೂಲ್ಯ ಸಂಪತ್ತು ಆದ ಮರಗಳು ಇಲ್ಲದೆ ನಾಡಿಲ್ಲ, ನರನೂ ಇಲ್ಲ. ಹಸಿರೇ ಉಸಿರು. ಜಗದ ಜೀವನಾಡಿಯಾದ ಮರಗಳು ಅಕ್ಷಯಪಾತ್ರೆ, ನಮ್ಮ ದುರ್ಬುದ್ಧಿ, ದುರಾಶೆ, ದುಂದುಗಾರಿಕೆ, ದುರಾಲೋಚನೆಗಳಿಂದ ಅಮೂಲ್ಯವಾದ ನಿಸರ್ಗ ಸಂಪತ್ತು ನಾಶವಾದರೆ; ಈ ಸುಂದರ ಭೂಮಿ, ಇಲ್ಲಿನ ಜೀವ ವ್ಯವಸ್ಥೆ ನಾಶವಾಗುವುದೆಂಬ ಎಚ್ಚರಿಕೆಯನ್ನು ಪರಿಸರವಾದಿಗಳು, ಚಿಂತಕರು, ದಾರ್ಶನಿಕರು, ಸಮಾಜಸುಧಾಕರು, ಕವಿಗಳು, ವಿಜ್ಞಾನಿಗಳು ನೀಡಿದ್ದಾರೆ.

## ೨. ಮಾದರಿ ಮಹಿಳೆಯರು

**ವೈ**ದ್ಯೆ, ಶಿಕ್ಷಣತಜ್ಞೆ, ಕವಯಿತ್ರಿ, ಆಟಗಾರ್ತಿ, ನೃತ್ಯಗಾರ್ತಿ, ದೇಶಭಕ್ತೆ, ಕಲಾವಿದೆ, ಪೊಲೀಸ್ ಅಧಿಕಾರಿ, ಸಮಾಜಸೇವಾಕರ್ತೆ, ರಾಜಕಾರಣಿ, ಪರಿಸರಪ್ರೇಮಿಯಾಗಿ ಸೇವೆ ಸಲ್ಲಿಸುವ ಮಹಿಳೆಯರು ಎಲ್ಲಾ ಕ್ಷೇತ್ರಗಳಲ್ಲಿಯೂ ಅಪೂರ್ವವಾದ ಕಾಣಿಕೆಯನ್ನು ನೀಡಿದ್ದಾರೆ. ಕುಟುಂಬದಲ್ಲಿ ತಾಯಿ, ಮಗಳು, ಸೊಸೆ, ಅತ್ತೆ, ನಾದಿನಿ, ಪತ್ನಿ, ಅಕ್ಕ, ತಂಗಿ ಮೊದಲಾದ ಪಾತ್ರಗಳನ್ನು ನಿರ್ವಹಿಸುವ ಮಹಿಳೆ ಸಾರ್ವಜನಿಕ ಕ್ಷೇತ್ರಗಳಲ್ಲಿ ಪುರುಷರಿಗೆ ಸರಿಸಾಟಿಯಾಗಿ ಸೇವೆ ಸಲ್ಲಿಸಿದ್ದಾಳೆ.

ಪುರುಷ ಪ್ರಧಾನ ಸಮಾಜದಲ್ಲಿ ತನ್ನ ಸ್ವಾತಂತ್ರ್ಯ, ಸ್ವಾಭಿಮಾನಕ್ಕೆ ದಕ್ಕೆ ಒದಗಿದಾಗ ಪ್ರತಿಭಟಿಸಿ, ವೈರಾಗ್ಯಪರಳಾಗಿ, ಆತ್ಮಸಾಕ್ಷಾತ್ಕಾರ ಪಡೆದ ಅಕ್ಕಮಹಾದೇವಿ ಧೀರ ಮಹಿಳೆ. ಅಗಾಥ ಕ್ರಿಸ್ಟಿಯ ಪತ್ತೆದಾರಿ ಕಾದಂಬರಿಗಳನ್ನು ಬರೆದು ವಿಶ್ವವಿಖ್ಯಾತಳಾದಳು. 'ಮಾನವರು ನಾವು ಏಕೆ ಜಗಳವಾಡುತ್ತೇವೆ? ಹೂವುಗಳಿಂದ ನಾವು ಒಂದಿಷ್ಟಾದರೂ ಕಲಿಯಬಾರದೇ? ಹೂವುಗಳು ಸುಂದರ. ಅವು ಎಂದೂ ಒಂದನ್ನೊಂದು ಕಂಡು ಹೊಟ್ಟೆಕಿಚ್ಚುಪಡುವುದಿಲ್ಲ' ಎಂಬ ಸಂದೇಶ ನೀಡಿದ ಅಮೃತಾಪ್ರೀತಮ್ ವಿಶ್ವವಿಖ್ಯಾತ ಲೇಖಕಿ. ವಿಶ್ವ ಪ್ರಸಿದ್ಧ ಚಿತ್ರಗಳನ್ನು ಬರೆದವಳು ಅಮೃತಾಷೇರ್‌ಗಿಲ್. ಆಂಗಸಾನ್‌ಸೂಕಿ 'ಮಾಯನ್ಮಾರ್‌ನ ಪ್ರಜಾಪ್ರಭುತ್ವ ಚಳುವಳಿಯ ತಾಯಿ' ಎಂಬ ಅಭಿದಾನಕ್ಕೆ ಪಾತ್ರಳಾಗಿ, ನೊಬೆಲ್ ಪ್ರಶಸ್ತಿ ಪುರಸ್ಕೃತಳಾದಳು. ಅನಿಬೆಸೆಂಟ್ ಇಂಗ್ಲೆಂಡಿನಲ್ಲಿ ಜನಿಸಿ ಭಾರತಕ್ಕೆ ಬಂದು, ಭಾರತದ ಸ್ವಾತಂತ್ರ್ಯಕ್ಕೆ ಹೋರಾಡಿದ ಬಹುಮುಖಪ್ರತಿಭೆ. ಡಾ. ಆಲ್‌ಬರ್ಟಿನ್‌ಗೌರ್ ಅತ್ಯುತ್ತಮ ಸಂಶೋಧಕಿ, ಲೇಖಕಿ ಎಂದು ಪ್ರಸಿದ್ಧಳು. ಜ್ಞಾನಪೀಠ ಪ್ರಶಸ್ತಿ ಪಡೆದ ಮೊದಲ ಮಹಿಳೆ ಆಶಾಪೂರ್ಣದೇವಿ ಸುಪ್ರಸಿದ್ಧ ಬಂಗಾಳಿ ಲೇಖಕಿ. ಎರಡು ಬಾರಿ ಶ್ರೇಷ್ಠ ನಟಿಯಾಗಿ ಆಸ್ಕರ್ ಪ್ರಶಸ್ತಿ ಪಡೆದು ವಿಶ್ವಪ್ರಸಿದ್ಧಿಯಾದ ಇನ್‌ಗ್ರೀಡ್‌ಬರ್ಗಮನ್ ಚಲನಚಿತ್ರ ನಟಿ. ಅಮೆರಿಕಾದ ಇಸಡೋರಾಡಂಕನ್ ಪ್ರಸಿದ್ಧ ನೃತ್ಯ ಕಲಾವಿದೆ. ಇಸ್ಮತ್‌ಚುಗ್ತಾಯಿ ಪ್ರಸಿದ್ಧ ಉರ್ದು ಕಥೆಗಾರ್ತಿ. ಪಿ.ಟಿ.ಉಷಾ ನೂರೊಂದು ಅಂತರ್‌ರಾಷ್ಟ್ರೀಯ ಪದಕಗಳನ್ನು ಪಡೆದ ವಿಶ್ವ ಪ್ರಸಿದ್ಧ ಓಟಗಾರ್ತಿ.

ಕಮಲದಾಸ್ ಮಲೆಯಾಳಂ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಕೃತಿಗಳನ್ನು ರಚಿಸಿ ಪ್ರಸಿದ್ಧಳಾದಳು. ವಿಶ್ವಮಾನ್ಯ ಸಮಾಜಸುಧಾರಕಿ ಕಮಲಾದೇವಿಚಟ್ಟೋಪಾಧ್ಯಾಯ ಭಾರತ ಸ್ವಾತಂತ್ರ್ಯ ಹೋರಾಟಗಾರ್ತಿ ಹಾಗೂ ಲೇಖಕಿ. ಕಸ್ತೂರಿ ಬಾ ಗಾಂಧಿ ಮಹಾತ್ಮ ಗಾಂಧೀಜಿಯವರ ಕಾರ್ಯಶೀಲತೆಗೆ ಬೆನ್ನೆಲಬಾಗಿದ್ದಳು. ಕನ್ನಡ ನಾಡಿನ ವೀರಮಹಿಳೆ ಕಿತ್ತೂರುರಾಣಿ ಚೆನ್ನಮ್ಮ ಮಹಾನ್ ರಾಷ್ಟ್ರಭಕ್ತೆ. ಆಶ್ರಯ ನೀಡಿದವರಿಗೆ ಆಪತ್ತು ಒದಗಿದಾಗ, ಒಂಟಿಯಾಗಿ ಶತ್ರುಗಳನ್ನು ಸದೆಬಡಿದವಳು ಚಿತ್ರದುರ್ಗದ ವೀರವನಿತೆ ಒನಕೆ ಓಬವ್ವ. ಕಿಂಕ್ಯಾಂಬೆಲ್ ಕೆನಾಡದ ಪ್ರಪ್ರಥಮ ಮಹಿಳಾ ಪ್ರಧಾನಿಯಾಗಿದ್ದಳು. ಕಿರಣ್‌ಬೇಡಿ ಭಾರತೀಯ ಮಹಿಳಾ ಐ.ಪಿ.ಎಸ್. ಅಧಿಕಾರಿಯಾಗಿ ಜೈಲನ್ನು ಆಶ್ರಮದಂಥೆ ಪರಿವರ್ತಿಸಿದ ಕಾರ್ಯದಕ್ಷೆ. ಕ್ರಿಶ್ಚನ್‌ಒಟ್ಟೊ ವಿಶ್ವವಿಖ್ಯಾತ ಈಜುಗಾರಳು. ರಕ್ತರಹಿತ ಕ್ರಾಂತಿಯ ನಾಯಕಿ ಕೋರಜನ್ ಅಕ್ವಿನೋ ಫಿಲಿಫೈನ್ಸಿನ ಅಧ್ಯಕ್ಷಣಿಯು ಆಗಿದ್ದಳು. ಅಮೆರಿಕಾದ ಕ್ರಿಸ್‌ಎವರ್ಟ್ ಲಾಯ್ಡ್ ವಿಶ್ವ ಪ್ರಸಿದ್ಧ ಟೆನಿಸ್ ಆಟಗಾರ್ತಿ. ಗೇಬ್ರಿಯಲಾ ಮಿಸ್ಟ್ರಲ್ ಚಿಲಿದೇಶದ ಪ್ರಸಿದ್ಧ ಕವಯಿತ್ರಿ. ಗೋಲ್ಡಮೀರ್ ಇಸ್ರೇಲಿನ ಪ್ರಧಾನಿಯಾಗಿದ್ದಳು. ಗ್ರೇಜಿಯಾಡೆಲಿಡಾ ಇಟಾಲಿಯನ್ ಕಥೆ ಕಾದಂಬರಿಗಾರ್ತಿಯಾಗಿ ಪ್ರಸಿದ್ಧಿಯಾಗಿದ್ದಳು. ಸ್ವೀಡಿಷ್‌ನ ಗ್ರೇಟ್ ಗಾರ್ಬೋ ಪ್ರಸಿದ್ಧ ಚಿತ್ರನಟಿ.

ಚಂದ್ರಿಕಾ ಕುಮಾರತುಂಗಾ ಶ್ರೀಲಂಕಾದ ಪ್ರಧಾನಿ. ಜೋನ್‌ಆಫ್‌ಆರ್ಕ ಫ್ರಾನ್ಸ್ ರಾಷ್ಟ್ರೀಯ ನಾಯಕಿ, ಮಹಾನ್ ದೇಶ ಭಕ್ತೆ. ಟೋನಿ ಮಾರಿಸನ್ ನೊಬೆಲ್ ಪ್ರಶಸ್ತಿ ಪಡೆದ ಕಾದಂಬರಿಕಾರ್ತಿ. ತಸ್ಲಿಮ ನಸ್ರಿನ್ ಪ್ರಸಿದ್ಧ ಬಂಗಾಳಿ ಲೇಖಕಿ. ತಾನ್ಸು ಸಿಲ್ಲರ್ ಆಧುನಿಕ ಟರ್ಕಿಯ ಸಂಕೇತ ಎಂದು ಪ್ರಸಿದ್ಧಳಾಗಿದ್ದಳು. ಪ್ರಪ್ರಥಮವಾಗಿ ದಾದಾಸಾಹೇಬ್ ಫಾಲ್ಕೆ ಪ್ರಶಸ್ತಿ ವಿಜೇತೆ ದೇವಿಕಾರಾಣಿ ಭಾರತೀಯ ಚಲನಚಿತ್ರದ ಪ್ರಥಮ ಮಹಿಳೆ. ನರ್ಗಿಸ್‌ದತ್ ಉತ್ತಮ ಸಮಾಜ ಸೇವಾಕರ್ತೆಯಾಗಿ, ಚಿತ್ರನಟಿಯಾಗಿ ಸೇವೆಸಲ್ಲಿಸಿದವರು. ನದಿಯಾಕೊಮನೇಸಿ ಪ್ರಸಿದ್ಧ ಅಂಗಸಾಧನಪಟು. ಪಶ್ಚಿಮಬಂಗಾಳದ ನಾನಿಬಾಲದೇವಿ ಅಪ್ರತಿಮ ಸ್ವಾತಂತ್ರ್ಯ ಹೋರಾಟಗಾರ್ತಿ. ಸಿಸ್ಟರ್ ನಿವೇದಿತಾ ಐರ್ಲೆಂಡಿನ ಮಹಿಳೆ, ಈಕೆಯು ಸ್ವಾಮಿವಿವೇಕಾನಂದರ ಶಿಷ್ಯೆಯಾಗಿ ಭಾರತಕ್ಕೆ ಬಂದು ಭಾರತೀಯ ಮಹಿಳಾ ವಿಮೋಚನೆಗಾಗಿ ಅಪೂರ್ವ ಸೇವೆ ಸಲ್ಲಿಸಿದ ಸಮಾಜ ಸುಧಾರಕಿ. ಪರ್ಲ್‌ಬಕ್ ವಿಶ್ವಪ್ರಸಿದ್ಧ ಕಾದಂಬರಿಗಾರ್ತಿ. ಪಾರ್ವತಿಬಾಯಿ ಆಠವಳೆ ಆದರ್ಶ ಮಹಿಳೆ. ನಿಸ್ವಾರ್ಥ ಸೇವೆಗೆ ಸ್ಫೂರ್ತಿಯ ಚಿಲುಮೆ ಫ್ಲಾರೆನ್ಸ್ ನೈಟಿಂಗೆಲ್. ಎವರೆಷ್ಟ್ ಶಿಖರವನ್ನು ಏರಿದ ಭಾರತದ ಪ್ರಥಮ ಮಹಿಳೆ ಬಚೇಂದ್ರಿಪಾಲ್ ಸಾಹಸ ಪ್ರಿಯರಿಗೆ ಸ್ಫೂರ್ತಿಯ ಸೆಲೆ. ಬಾನುಜಹಾಂಗೀರ್ ಕೋಯಾ ಸಮಾಜಸುಧಾರಕಿ. ಅಮೆರಿಕಾದ ಬಾರ್ಬರಾಕೌರ್ಟ್‌ಲ್ಯಾಂಡ್ ವಿಶ್ವಪ್ರಸಿದ್ಧ ಕಾದಂಬರಿಗಾರ್ತಿ. ಈಕೆ ೭೨೩ ಕೃತಿಗಳನ್ನು ಬರೆದಿರುವಳು. ಈಕೆಯ ಕೃತಿಗಳು ೪೦ ಭಾಷೆಗಳಿಗೆ ಅನುವಾದವಾಗಿವೆ. ೬೦೦ದಶಲಕ್ಷ ಪ್ರತಿಗಳು ಮಾರಾಟವಾಗಿವೆ. ಭರತನಾಟ್ಯವನ್ನು ವಿಶ್ವಪ್ರಸಿದ್ಧಿಗೊಳಿಸಿದವರು ಬಾಲಸರಸ್ವತಿ. ಬೆನಜಿರ್‌ಭುಟ್ಟೋ ಮುಸ್ಲಿಂರಾಷ್ಟ್ರಗಳಲ್ಲಿಯೇ ಮೊದಲ ಮಹಿಳಾ ಪ್ರಧಾನಿಯಾಗಿದ್ದರು. ಬೇಗಂ ಖಲೀದಾಜಿಯಾ ಬಾಂಗ್ಲಾದೇಶದ ಪ್ರಧಾನಿಯಾಗಿದ್ದರು. ಜಾತಿ, ಮತ, ರಾಷ್ಟ್ರ, ಭಾಷೆ ಮೀರಿ ಬಡವರ ಸೇವೆಗಾಗಿ ತಮ್ಮನ್ನು ಸಮರ್ಪಿಸಿಕೊಂಡಿರುವ ಮದರ್‌ತೆರೇಸಾರವರು ಜಗತ್ತಿನ ೧೧೫ದೇಶಗಳಲ್ಲಿ ಬಡವರ ಸೇವೆಗಾಗಿ ಸಂಘಸಂಸ್ಥೆಗಳನ್ನು ಸ್ಥಾಪಿಸಿರುವ ಮಹಾಮಾತೆ.

ಮಧುರಾ ಎಂ. ಛತ್ರಪತಿ ಅಂತರ್‌ರಾಷ್ಟ್ರೀಯ ಮಟ್ಟದಲ್ಲಿ ಕೀರ್ತಿಗಳಿಸಿದ ಮಹಿಳಾ ಉದ್ಯಮಿ. ಇವರು ಕರ್ನಾಟಕದವರಾಗಿದ್ದು, ‘ಅವೇಕ್’ ಎಂಬ ಸಂಸ್ಥೆ ಸ್ಥಾಪಿಸಿ ಮಹಿಳೆಯರಿಗೆ ತರಬೇತಿ ನೀಡುತ್ತಿದ್ದಾರೆ. ವನ್ಯಜೀವಿಗಳ ಬಗ್ಗೆ ಅಪಾರ ಕಾಳಜಿಯನ್ನೊಂದಿರುವ ಮೇನಕಾ ಗಾಂಧಿ ಪರಿಸರ ಪ್ರೇಮಿ. ಇಟಲಿಯ ಮರಿಯ ಮಾಂಟೆಸೋರಿ ಹೊಸಶಿಕ್ಷಣ ಪದ್ಧತಿಯ ಜನಕಳೆಂದೇ ಪ್ರಸಿದ್ಧಳು. ಮಹಾದೇವಿವರ್ಮ ಪ್ರಸಿದ್ಧ ಹಿಂದಿ ಕವಯಿತ್ರಿ. ಮಾರ್ಗರೇಟ್‌ಥ್ಯಾಚರ್ ಇಂಗ್ಲೆಂಡಿನ ಪ್ರಪ್ರಥಮ ಮಹಿಳಾ ಪ್ರಧಾನಿ. ಅವರು ‘ಉಕ್ಕಿನ ಮಹಿಳೆ’ ಎಂದು ಪ್ರಸಿದ್ಧರು. ಮಾರ್ಟಿನಾ ನವತ್ರಿಲೋವಾ ಆಧುನಿಕ ಕಾಲದ ವಿಶ್ವವಿಖ್ಯಾತ ಟೆನ್ನಿಸ್ ಆಟಗಾರ್ತಿ. ಮಾಧುರಿ ಬೆನ್‌ಷಾ ಉತ್ತಮ ಶಿಕ್ಷಣ ತಜ್ಞೆ. ಕರ್ನಾಟಕದವರಾದ ಮಾಯರಾವ್ ವಿಶ್ವವಿಖ್ಯಾತ ನೃತ್ಯ ಕಲಾವಿದೆ.

ಮೀರಾಬೆಹನ್ ಇಂಗ್ಲೆಂಡಿನವಳಾದರೂ, ಭಾರತಕ್ಕೆ ಬಂದು ಗಾಂಧೀಜಿಯವರ ಶಿಷ್ಯೆಯಾಗಿ ಅನುಪಮ ಸೇವೆ ಮಾಡಿದವಳು. ಮೀರಾಸಾಹಿಬಾ ಸರ್ವೋನ್ನತ ನ್ಯಾಯಾಲಯದ ಪ್ರಪ್ರಥಮ ಮಹಿಳಾ ನ್ಯಾಯಾಧೀಶೆ. ಡಾ.ಮುತ್ತುಲಕ್ಷ್ಮೀರೆಡ್ಡಿ ಭಾರತದ ಮೊದಲ ಮಹಿಳಾ ಶಾಸಕಿ ಹಾಗೂ ಮದ್ರಾಸು ವಿಶ್ವವಿದ್ಯಾನಿಲಯದಿಂದ ವೈದ್ಯಕೀಯ ಪದವಿ ಪಡೆದ ಪ್ರಥಮ ಮಹಿಳೆ. ಮಡೋನ ಪಾಪ್ ಗಾಯಕಿ. ಮೇಡಂಕಾಮ ಮೊದಲ ಬಾರಿಗೆ ಭಾರತದ ತ್ರಿವರ್ಣಧ್ವಜವನ್ನು ಹೊರದೇಶದಲ್ಲಿ ಹಾರಿಸಿದ ಧೀರೆ. ಇಂಗ್ಲೆಂಡಿನ ಮೇಡಂಟುಸಾಡ್ ಮೇಣದಿಂದ ಬೊಂಬೆಗಳನ್ನು ತಯಾರಿಸುವ ಕಲೆಯಿಂದ ವಿಶ್ವಪ್ರಸಿದ್ಧಿಯಾದ ಮಹಿಳೆ. ಮೇಧಾಪಾಟ್ಕರ್ ಪರಿಸರ ಸಂರಕ್ಷಣೆಗಾಗಿ ಹಗಲಿರುಳು ಹೋರಾಡುತ್ತಿರುವ ಧೀರಮಹಿಳೆ. ಮೇರಿಕ್ಯೂರಿ ವಿಶ್ವವಿಖ್ಯಾತ ಮಹಿಳಾ ವಿಜ್ಞಾನಿ.

ರಾಜಕುಮಾರಿ ಅಮೃತಾಕೌರ್ ಸ್ವತಂತ್ರ ಭಾರತದ ಪ್ರಥಮ ಆರೋಗ್ಯ ಸಚಿವೆಯಾಗಿದ್ದರು. ಭಾರತೀಯ ರೆಡ್‌ಕ್ರಾಸ್ ಸಂಸ್ಥೆಯ ಸ್ಥಾಪಕರಾದ ಕೌರ್ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಸಕ್ರಿಯ ಪಾತ್ರವಹಿಸಿದ ಧೀರಮಹಿಳೆ. ರಾಣಿರಾಸಮಣಿ ರಾಮಕೃಷ್ಣಪರಮಹಂಸರಿಗೆ ತಪೋಭೂಮಿಯನ್ನು ಸಿದ್ಧಗೊಳಿಸಿದ ಅನುಪಮ ಭಕ್ತೆ, ಸಮಾಜ ಸೇವಾಕರ್ತೆ. ರಿಗೊಬರ್ಟಮೆಂಚು ಗ್ವಾಟ್‌ಮಾಲದ ಸ್ವತಂತ್ರಕ್ಕಾಗಿ ಹೋರಾಡಿದ ಶಾಂತಿಪ್ರಿಯೆ. ‘ಚಿನ್ನಮೇಳಂ’ ಇಲ್ಲವೇ ‘ಸದಿರ್’ ಎಂದು ಕರೆಯುತ್ತಿದ್ದ ನೃತ್ಯ ಪ್ರಕಾರಕ್ಕೆ ‘ಭರತನಾಟ್ಯ’ ಎಂಬ ಹೆಸರಿಟ್ಟ ಪ್ರಸಿದ್ಧ ನೃತ್ಯಗಾರ್ತಿ ರುಕ್ಮಿಣಿದೇವಿ ಅರುಂಡೇಲ್ ಅಂತರರಾಷ್ಟ್ರೀಯ ಮನ್ನಣೆ ಗಳಿಸಿದ ಕಲಾವಿದೆ. ಭಾರತೀಯರಿಗೆ ದೇಶಭಕ್ತಿಯ ಅಪೂರ್ವ ಸ್ಫೂರ್ತಿಯನ್ನು ನೀಡಿದ ಝಾನ್ಸಿರಾಣಿ ಲಕ್ಷ್ಮೀಬಾಯಿ ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ನಾಯಕಿ. ಲತಾಮಂಗೇಶ್ಕರ ಇಪ್ಪತ್ತಾರು ಸಾವಿರಕ್ಕೂ ಹೆಚ್ಚು ಹಾಡುಗಳನ್ನು ಹಾಡಿ ವಿಶ್ವಪ್ರಸಿದ್ಧವಾಗಿರುವ ಹಿನ್ನಲೆ ಗಾಯಕಿ. ಸ್ವೀಡಿಶ್‌ನ ಲಾಗರ್‌ಲೋಫ್‌ಸೆಲ್ಮಾ ಪ್ರಸಿದ್ಧ ಕಾದಂಬರಿಗಾರ್ತಿ. ಅಮೆರಿಕಾದ ಲೂಸಿಲಿಬಾಲ್ ಪ್ರಸಿದ್ಧ ಹಾಸ್ಯನಟಿ. ವರ್ಜಿನಿಯಾವುಲ್ಫ್ ಖ್ಯಾತ ಆಂಗ್ಲಭಾಷಾ ಬರಹಗಾರ್ತಿ.

ರಷ್ಯದ ವ್ಯಾಲೆಂಟಿನಾ ತೆರೆಷ್ಕೋವಾ ಅಂತರಿಕ್ಷಯಾನವನ್ನು ಕೈಗೊಂಡ ಪ್ರಥಮ ಮಹಿಳೆ. ರಾಣಿವಿಕ್ಟೋರಿಯ ಬ್ರಿಟನ್ ಚಕ್ರಾಧಿಪತ್ಯವನ್ನು ದೀರ್ಘಕಾಲ ಆಳಿದ ಧೀರಮಹಿಳೆ. ಭಾರತದ



ರಾಯಭಾರಿಯಾಗಿದ್ದ ಪ್ರಥಮ ಮಹಿಳೆ ವಿಜಯಲಕ್ಷ್ಮೀಪಂಡಿತ್, ವಿಶ್ವಸಂಸ್ಥೆಯ ಜನರಲ್ ಅಸೆಂಬ್ಲಿಯ ಪ್ರಥಮ ಮಹಿಳಾ ಅಧ್ಯಕ್ಷರಾಗಿದ್ದರು. ಶಕುಂತಳಾದೇವಿ ‘ಮಾನವ ಕಂಪ್ಯೂಟರ್’ ಎಂದೇ ಪ್ರಸಿದ್ಧಳಾದ ಗಣಿತತಜ್ಞೆ. ಶಾರದಾದೇವಿ ಭಾರತದ ಶ್ರೇಷ್ಠ ಸಂತಮಾತೆ. ಹೊಯ್ಸಳ ದೊರೆ ವಿಷ್ಣುವರ್ಧನನ ಪಟ್ಟಮಹಿಷಿ ಶಾಂತಲಾ ಪ್ರಖ್ಯಾತ ನೃತ್ಯಗಾರ್ತಿ. ಫ್ರೆಂಚ್ ಮಹಿಳೆ ಮೀರಾ ಶ್ರೀ ಅರವಿಂದರ ಶಿಷ್ಯಳಾಗಿ ಶ್ರೀಮಾತೆ ಎಂದು ಪ್ರಸಿದ್ಧಿಯಾದ ಮಹಾನ್ ಸಾಧಕಿ. ಭಾರತದ ರಾಜ್ಯವೊಂದರ ಪ್ರಥಮ ಮಹಿಳಾ ರಾಜ್ಯಪಾಲರಾದ ಸರೋಜಿನಿನಾಯ್ಡು ‘ಭಾರತದ ಕೋಗಿಲೆ’ ಎಂದು ಪ್ರಸಿದ್ಧರಾಗಿದ್ದರು.

ಪ್ಯಾರಿಸಿನ ಸೌರಾ ಬರ್ನ್ಡಾರ್ಟ್ ವಿಶ್ವವಿಖ್ಯಾತ ರಂಗನಟಿ. ಸಿರಿಮಾವೋ ಬಂಡಾರನಾಯಿಕೆ ಇಡೀ ಜಗತ್ತನಲ್ಲಿಯೇ ಪ್ರಥಮ ಮಹಿಳಾ ಪ್ರಧಾನಿಯಾಗಿದ್ದವರು. ಎಂ.ಎಸ್.ಸುಬ್ಬಲಕ್ಷ್ಮೀಯವರು ತಮ್ಮ ಗಾಯನದ ಮೂಲಕ ವಿಶ್ವಪ್ರಸಿದ್ಧರಾದ ಗಾಯಕಿ. ಸುಭದ್ರಕುಮಾರಿ ಚೌಹಾನ್ ಪ್ರಗತಿಪರ ಚಿಂತಕಿ ಹಾಗೂ ಭಾರತ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸಿದ ಧೀರಮಹಿಳೆ. ಜರ್ಮನಿಯ ಸ್ಟೆಪಿಗ್ರಾಫ್ ವಿಶ್ವವಿಖ್ಯಾತ ಟೆನ್ನಿಸ್ ಆಟಗಾರ್ತಿ. ಇಟಲಿಯ ಸೋಫಿಯಾ ಲೊರೆನ್ಸ್ ಪ್ರಸಿದ್ಧ ಚಿತ್ರನಟಿ. ಕುರುಡಿಯಾದರೂ ಕುರುಡರಿಗೆ ದಾರಿದೀಪವಾದ ಹೆಲನ್‌ಕೆಲರ್ ತನ್ನ ಅಪೂರ್ವ ಸೇವೆಯಿಂದ ಜಗತ್ಪ್ರಸಿದ್ಧಳು. ಹೈದರ್ ಕುರ್ರತುಲ್‌ಐನ್ ಜ್ಞಾನಪೀಠ ಪ್ರಶಸ್ತಿ ಪಡೆದ ಉರ್ದು ಲೇಖಕಿ. ಇಂದಿರಾಗಾಂಧಿ ಸ್ವತಂತ್ರ ಭಾರತವನ್ನು ದೀರ್ಘಕಾಲ ಆಳಿದ ಧೀರೆ. ಕ್ಷಮಾರಾವ್ ಸಂಸ್ಕೃತದಲ್ಲಿ ಕೃತಿಗಳನ್ನು ರಚಿಸಿ ಪ್ರಸಿದ್ಧಳಾಗಿರುವ ಕವಯಿತ್ರಿ. ಕಲ್ಪನಾಚಾವ್ಲಾ ಬಾಹ್ಯಾಕಾಶಕ್ಕೆ ಕಾಲಿಟ್ಟ ಪ್ರಥಮ ಭಾರತೀಯ ಮಹಿಳೆ. ಇಂತಹ ವಿಶ್ವವಿಖ್ಯಾತ ಅಪೂರ್ವ ಸಾಧನೆಯ ಮಹಿಳೆಯರಲ್ಲಿ **‘ಸಾಲುಮರದ ತಿಮ್ಮಕ್ಕ’,** ಶುಕ್ರನಕ್ಷತ್ರದಂತೆ ಹೊಳೆಯುತ್ತಿದ್ದಾರೆ. ಮಕ್ಕಳಾಗಲಿಲ್ಲವೆಂದು ಕೊರಗದೆ ಪತಿಯ ಜೊತೆಗೂಡಿ ಸಾರ್ವಜನಿಕ ರಸ್ತೆಯ ಇಕ್ಕೆಲಗಳಲ್ಲಿ ಸುಮಾರು ಮೂರು ದಶಕಗಳ ಕಾಲ ಆಲದ ಕೊಂಬೆಗಳನ್ನು ನೆಟ್ಟು, ಪೋಷಿಸಿದ ಮಹಾಮಾತೆ ಸಾಲುಮರದ ತಿಮ್ಮಕ್ಕನವರು ೨೮೪ಕ್ಕೂ ಹೆಚ್ಚು ಹೆಮ್ಮರಗಳನ್ನು ಬೆಳೆಸಿ ಇಡೀ ವಿಶ್ವಕ್ಕೆ ಮಾದರಿಯಾಗಿರುವರು. ಪರಿಸರವಾದಿಗಳಾದ ಸುಂದರ್‌ಲಾಲ್ ಬಹುಗುಣ, ಮೀರಾಬೆಹನ್, ಸರಳಬೆಹನ್, ಬಾಚನೀದೇವಿ, ಮೇಧಾಪಾಟ್ಕರ್ ಮೊದಲಾದವರು ನಿಸರ್ಗ ಸಂಪತ್ತು ಉಳಿಸಿಕೊಳ್ಳಲು ಹೋರಾಡಿದ್ದಾರೆ. ಅರಿವಿನ ಆಂದೋಲವನ್ನು ಮಾಡಿದ್ದಾರೆ.

ಭಾರತೀಯ ಇತಿಹಾಸ, ಸಾಹಿತ್ಯ, ಸಂಸ್ಕೃತಿ ಪರಂಪರೆಯಲ್ಲಿ ವಿಶಿಷ್ಟ ಸ್ಥಾನಮಾನವನ್ನು ಸಂಪಾದಿಸಿಕೊಂಡಿರುವ ನಾಡು ಈ ಕರ್ನಾಟಕ. ಈ ನಾಡಿಗೆ ಭವ್ಯವಾದ ಪರಂಪರೆಯಿದೆ. ಉತ್ಕೃಷ್ಟವಾದ ಇತಿಹಾಸವಿದೆ. ಸ್ವಚ್ಛಂದವಾದ ಸಂಸ್ಕೃತಿಯಿದೆ. ವಿಶ್ವಸಾಹಿತ್ಯದಲ್ಲಿಯೇ ಮನ್ನಣೆ ಗಳಿಸಿರುವಂತಹ ಸಮೃದ್ಧವಾದ ಸಾಹಿತ್ಯದಸಿರಿಯಿದೆ. ಹಾಗೆಯೇ ಹೃದಯ ಶ್ರೀಮಂತರಿದ್ದಾರೆ. ಆದರ್ಶ ಹಾಗೂ ಅನುಕರಣೀಯವಾದ ವ್ಯಕ್ತಿತ್ವ ಸಂಪಾದಿಸಿಕೊಂಡಂತಹ ಸಹಸ್ರ ಸಹಸ್ರ ಸಜ್ಜನರು ಬದುಕಿದ್ದ, ಈಗಲೂ ಇರುವ ತಾಣವಾಗಿದೆ ಈ ನಮ್ಮ ನಾಡು. ಡಾ.ಶಿವರಾಮಕಾರಂತ, ಡಾ. ಕುಸುಮಸೊರಬ, ಸುರೇಶ್‌ಹೆಬ್ಳಿಕರ್, ಅ.ನ.ಯಲ್ಲಪ್ಪರೆಡ್ಡಿ, **ಸಾಲುಮರದ ತಿಮ್ಮಕ್ಕ**

ಮೊದಲಾದವರು ಈ ನಮ್ಮ ನಾಡಿನಲ್ಲಿ ಪರಿಸರ ಸಂರಕ್ಷಣೆಗಾಗಿ ಹೋರಾಡಿದ ಮಹಾಮಹಿಮರು.

ನಿಸರ್ಗ ಪ್ರೇಮಿ, ವೃಕ್ಷಮಾತೆ, ವನಸಿರಿ, ಪರಿಸರಪ್ರೇಮಿ ಎಂದೆಲ್ಲ ವಿಶ್ವವಿಖ್ಯಾತಿ ಪಡೆದ ಸಾಲುಮರದ ತಿಮ್ಮಕ್ಕನವರ ಜೀವನ ಯಾನದ ಅಧ್ಯಯನವು ಅನುದಿನವು ಆನಂದವಾಗಿ ಬದುಕುವಂತಹ ಸರಿದಾರಿಯನ್ನು ತೋರಿಸುವುದು. ಇಹದ ಬದುಕು ಕಹಿಯಾಗದೆ ಸಿಹಿಯಾಗಿಸುವಂತಹ ಸತ್ವಥದತ್ತ ಕರೆದ್ಯೊಯುವುದು. "ಮಾನವ ಜನ್ಮ ದೊಡ್ಡದು ಇದ ಹಾನಿ ಮಾಡಲಿ ಬೇಡಿ ಹುಚ್ಚಪ್ಪಗಳಿರಾ" ಎಂಬ ಪುರಂದರದಾಸರ ವಾಣಿಯಂತೆ ತಿಮ್ಮಕ್ಕನವರ ಘನಕಾರ್ಯ, ಘನವ್ಯಕ್ತಿತ್ವ ಈ ಇಳೆಯಲ್ಲಿ ನಮ್ಮಗಳ ಬದುಕು ಕ್ಷಕಿರಣವಾಗಿ ಹೊಳೆಯುವ, ಬೆಳಂಬೆಳಕಾಗಿ ಬೆಳಗುವಂತೆ ಜೀವನವನ್ನು ರೂಪಿಸಿಕೊಳ್ಳಲು ಧೀಶಕ್ತಿಯನ್ನು ಅಗೋಚರವಾಗಿ ಧಾರೆ ಎರೆಯುವುದು.

೯

## ೩. ತಿಮ್ಮಕ್ಕನವರ ಮನೆತನದ ಪೂರ್ವವೃತ್ತಾಂತ

**ಭಾ**ರತ ದೇಶ ಭವ್ಯ–ದಿವ್ಯ ಸಂಸ್ಕೃತಿಯ ನಾಡು; ಜ್ಞಾನ ಜ್ಯೋತಿಯಿಂದ ಬೆಳಗಿದ ದೇಶವೆಂದು ಕರೆಯುತ್ತೇವೆ. ಆದರೆ ಈ ದೇಶ ತನ್ನಲ್ಲಿಯೇ ಇರುವ ಕತ್ತಲಿಗೆ ಬೆಳಕಾಗದಿರುವುದು ಬಹುದೊಡ್ಡ ದುರಂತ. ಪ್ರಪಂಚದ ಯಾವ ದೇಶದಲ್ಲಿಯೂ ಕಂಡು ಬರದ ಜಾತಿ–ಜಾಡ್ಯ ಭಾರತಕ್ಕೆ ಅಂಟಿದ ಮಹಾರೋಗ. ಹುಲಿಯಾಗಬೇಕಾದ ಭಾರತವನ್ನು ಇಲಿಯಾಗಿಸಿ; ವಿದೇಶಿ ಬೆಕ್ಕುಗಳಿಗೆ ಬಲಿಯಾಗಿಸಿದ ಹೀನ ವ್ಯವಸ್ಥೆಯಾದ ಜಾತಿಪದ್ಧತಿ ಹಾಗೂ ಅದರೊಳಗಿನ ಅಸ್ಪೃಶ್ಯತೆಯಿಂದ "ಇಲ್ಲಿನ ಜನಸಮುದಾಯ ಇಡಿಯಾಗಿ ಮನುಷ್ಯರಾಗಿ ಅರಳುವುದಕ್ಕೆ ಸಾಧ್ಯವಾಗದೆ, ಶತಶತಮಾನಗಳಿಂದಲೂ ಅಂಗವಿಕಲವಾಗಿಯೇ ತೆವಳುತ್ತ ಬಂದಿರುವು ದರಿಂದಲೇ ದೇಶ ಒಂದು ಸಮೃದ್ಧ, ಸಂಪನ್ನ ರಾಷ್ಟ್ರವಾಗಿ ಬೆಳೆಯಲು ಸಾಧ್ಯವಾಗಿಯೇ ಇಲ್ಲ." ಅಲ್ಲದೆ ಜಾತಿಯ ಕಿಚ್ಚಿನಿಂದ ಕೊಚ್ಚೆಯಲ್ಲಿ ಬದುಕುತ್ತಿರುವುದು ನಾಶವಾಗದೆ ಇಂದಿಗೂ ಇರುವುದು ಇಲ್ಲಿನ ಅಪೂರ್ಣ ಬೌದ್ಧಿಕತೆಗೆ ಹಿಡಿದ ಕನ್ನಡಿಯಾಗಿದೆ.

"ಮನುಷ್ಯನು ಹುಟ್ಟುವಾಗ ಒಂದೇ ರೀತಿಯಲ್ಲಿ ಹುಟ್ಟುತ್ತಾನೆ. ಸಾಯುವಾಗ ಮಾತ್ರ ನಾನಾ ರೀತಿಯಲ್ಲಿ ಸಾಯುತ್ತಾನೆ. ಹುಟ್ಟು–ಸಾವುಗಳ ಮಧ್ಯೆ ನಾನಾ ಜಾತಿಗಳನ್ನು ಕಲ್ಪಿಸಿಕೊಂಡು ಬಾಧೆ ಪಡುತ್ತಾನೆ. ಒಬ್ಬ ಮನುಷ್ಯನು ಬ್ರಾಹ್ಮಣ ಅಥವಾ ಅಸ್ಪೃಶ್ಯ ಎಂದು ಖಚಿತವಾಗಿ ತಿಳಿಯಬೇಕಾದರೆ ಅವನ ಗುರುತು ಪರಿಚಯ ಇದ್ದರೆ ಮಾತ್ರ ಸಾಧ್ಯವಾಗುತ್ತದೆ. ಗುರುತು ಇಲ್ಲವಾದರೆ ಬ್ರಾಹ್ಮಣ ಅಸ್ಪೃಶ್ಯನಾಗಬಹುದು. ಅಸ್ಪೃಶ್ಯನು ಬ್ರಾಹ್ಮಣನಾಗಬಹುದು" ಅಲ್ಲವೇ? ಹಾಗಾಗಿ ಅಸಹಜವಾದ ಈ ಭಿನ್ನ ಭೇದವನ್ನು ಸ್ವಾರ್ಥಿಗಳು, ಪಾಪಿಷ್ಠರು ಬಿತ್ತಿ ಬೆಳೆಸಿದರು. ಈ ವಿಷಬೀಜ ವೃಕ್ಷವನ್ನು ಕಡಿದುರುಳಿಸಲು ಬುದ್ಧ, ಬಸವಣ್ಣ, ಅಂಬೇಡ್ಕರ್ ಮೊದಲಾದ ಮಹಾಪುರುಷರು ಬಹುಪ್ರಯಾಸ ಪಟ್ಟಿದ್ದಾರೆ. ಆದರೆ ಆ ವಿಷವೃಕ್ಷದ ಕೊಂಬೆ–ರಂಬೆಗಳು ಮಾತ್ರ ಮುಕ್ಕಾಗಿವೆ ವಿನಹ ಬೇರು ಸಹಿತ ಉರುಳಿಸಲು ಸಾಧ್ಯವಾಗಿಲ್ಲ. ಇಂತಹ ಜಾತಿ ವ್ಯವಸ್ಥೆಯೊಳಗೆ ಸಾಕಷ್ಟು ಅವಮಾನ, ಅಪಮಾನ, ಶೋಷಣೆಗಳನ್ನು ಅನುಭವಿಸಿದವರೇ ಈ ನಾಡಿಗೆ, ಈ ರಾಷ್ಟ್ರಕ್ಕೆ ಅಪೂರ್ವ ಕಾಣ್ಕೆಗಳನ್ನು ನೀಡಿರುವುದನ್ನು ಇತಿಹಾಸ, ಪುರಾಣಗಳಲ್ಲಿ ಓದಿದ್ದೇವೆ.

ಪುರಾಣಗಳಲ್ಲಿ ಉಲ್ಲೇಖಿಸಿರುವಂತೆ ಸಂಗೀತ ಪ್ರವೀಣ ಛಲದಂಕಮಲ್ಲ, ೧೨ನೇ

ಶತಮಾನದಲ್ಲಿ ಬಾಳಿಬೆಳಗಿದ ವಚನಕಾರ ಶಿವಭಕ್ತ ಛಲವಾದಿಶಿವನಾಗಮಯ್ಯ, ಚಿತ್ರದುರ್ಗ ಕೋಟೆಯನ್ನು ರಕ್ಷಿಸಿದ ಧೀರ ಮಹಿಳೆ ಒನಕೆ ಓಬವ್ವ, ಸಂವಿಧಾನಶಿಲ್ಪಿ ಡಾ. ಬಿ.ಆರ್. ಅಂಬೇಡ್ಕರ್, ಅನುಭಾವಿ ಕವಿ ಚಲವಾದಿ ಚಂದಪ್ಪ ಮೊದಲಾದ ಚಾರಿತ್ರಿಕ ವ್ಯಕ್ತಿಗಳ ಉನ್ನತ ಚಾರಿತ್ರ್ಯದ ಪರಂಪರೆಯನ್ನೊಂದಿರುವ ಛಲವಾದಿ ಜನಾಂಗದವರಾದ ಚಿಕ್ಕರಂಗಯ್ಯ–ವಿಜಿಯಮ್ಮ ದಂಪತಿಯ ದ್ವಿತೀಯ ಸುಪುತ್ರಿಯೇ **ಸಾಲುಮರದ ತಿಮ್ಮಕ್ಕ** ಅವರು 'ವೃಕ್ಷಮಾತೆ' 'ವನಸಿರಿ' 'ನಿಸರ್ಗಪ್ರೇಮಿ' 'ವೃಕ್ಷಪ್ರೇಮಿ' 'ಪರಿಸರಪ್ರೇಮಿ' ಎಂಬೆಲ್ಲ ಬಿರುದಿಗೆ ಪಾತ್ರರಾದ ಮಹಾಮಾತೆ.

ಸಾಲುಮರದ ತಿಮ್ಮಕ್ಕನವರ ಜೀವನ ಮತ್ತು ಅವರ ಅಪ್ಪ, ಅಮ್ಮ, ಅಜ್ಜ–ಅಜ್ಜಿ, ಮುತ್ತಜ್ಜ–ಮುತ್ತಜ್ಜಿಯವರ ಜೀವನ ಒಂದು ರೀತಿ ಜನಪದ ಮಹಾಕಾವ್ಯವಿದ್ದಂತೆ, ಆ ಜೀವ ಕಾವ್ಯದರ್ಶನ ಮಾಡೋಣ. ನಾಗಯ್ಯ–ಈರವ್ವ ದಂಪತಿಗಳ ಸುಪುತ್ರ ತೋಪನಯ್ಯ. ಈಗಿನ ತುಮಕೂರು ಜಿಲ್ಲೆ ಗುಬ್ಬಿ ತಾಲೂಕಿನ ಕಕ್ಕೇನಹಳ್ಳಿ ಗ್ರಾಮದವರು.

ಉತ್ತರಕ್ಕೆ ಆಂಧ್ರಪ್ರದೇಶದ ಅನಂತರಪುರ ಜಿಲ್ಲೆ, ಪಶ್ಚಿಮಕ್ಕೆ ಚಿತ್ರದುರ್ಗ, ಚಿಕ್ಕಮಗಳೂರು ಮತ್ತು ಹಾಸನ ಜಿಲ್ಲೆಗಳು, ದಕ್ಷಿಣಕ್ಕೆ ಮಂಡ್ಯಜಿಲ್ಲೆ, ಪೂರ್ವಕ್ಕೆ ಬೆಂಗಳೂರು ಮತ್ತು ಕೋಲಾರ ಜಿಲ್ಲೆಗಳ ನಡುವೆ ಇರುವ ತುಮಕೂರು ಜಿಲ್ಲೆ ಕರ್ನಾಟಕ ರಾಜ್ಯದ ಪ್ರಮುಖ ಪ್ರದೇಶಗಳಲ್ಲಿ ಒಂದಾಗಿದ್ದು, ೧೦,೬೦೬ ಚದರ ಕಿಲೋಮೀಟರ್ ಭೂ ವಿಸ್ತೀರ್ಣವನ್ನೊಂದಿದೆ. ಚಿಕ್ಕನಾಯಕನಹಳ್ಳಿ, ಗುಬ್ಬಿ, ಕೊರಟಗೆರೆ, ಕುಣಿಗಲ್, ಮಧುಗಿರಿ, ಪಾವಗಡ, ಶಿರಾ, ತಿಪಟೂರು, ತುಮಕೂರು, ತುರುವೇಕೆರೆ ಎಂಬ ಹತ್ತು ತಾಲ್ಲೂಕುಗಳನ್ನೊಂದಿರುವ ಜಿಲ್ಲೆಯಾಗಿದೆ.

ಉತ್ತರಕ್ಕೆ ಶಿರಾ ತಾಲ್ಲೂಕು, ಪೂರ್ವದಲ್ಲಿ ತುಮಕೂರು ತಾಲ್ಲೂಕು, ದಕ್ಷಿಣದಲ್ಲಿ ಕುಣಿಗಲ್ ತಾಲ್ಲೂಕು, ಪಶ್ಚಿಮದಲ್ಲಿ ಚಿಕ್ಕನಾಯಕನಹಳ್ಳಿ, ತಿಪಟೂರು ಮತ್ತು ತುರುವೇಕೆರೆ ತಾಲ್ಲೂಕುಗಳ ನಡುವಿನ ಪ್ರದೇಶವೇ ಗುಬ್ಬಿ ತಾಲ್ಲೂಕು. ಇದು ಹಿಂದೆ 'ಅಮರಗೊಂಡ ಕ್ಷೇತ್ರ'ವೆಂದು ಪ್ರಸಿದ್ಧವಾದ ಪವಿತ್ರಸ್ಥಳವಾಗಿದ್ದು ಅಮರಗೊಂಡ ಮಲ್ಲಿಕಾರ್ಜುನ, ಮಲ್ಲಣಾರ್ಯ, ಗೋಸಲಚನ್ನಬಸವೇಶ್ವರ ಮೊದಲಾದ ವೀರಶೈವಾಚಾರ್ಯರು ಇಲ್ಲಿದ್ದರೆಂದು ಹೇಳಲಾಗಿದೆ. ಇಲ್ಲಿನ 'ಮಲ್ಲಿಕಾರ್ಜುನ ದೇವಾಲಯದಲ್ಲಿ ಮಲ್ಲಣಾರ್ಯನ ಪ್ರವಚನವನ್ನು ನಿತ್ಯವೂ ಕೇಳುತ್ತಿದ್ದ ಎರಡು ಗುಬ್ಬಚ್ಚಿಗಳು, ಆ ಪ್ರವಚನ ಪರಿಸಮಾಪ್ತಿಗೊಂಡಾಗ ದೇಹ ತ್ಯಾಗ ಮಾಡಿ ಸದ್ಗತಿ ಪಡೆದವೆಂದೂ, ಆದ್ದರಿಂದಲೇ ಈ ಸ್ಥಳಕ್ಕೆ 'ಗುಬ್ಬಿ' ಎಂಬ ಹೆಸರು ಬಂತೆಂದೂ ಹೇಳುತ್ತಾರೆ. ಮಲ್ಲಿಕಾರ್ಜುನ ದೇವಾಲಯದಲ್ಲಿ ಆ ಗುಬ್ಬಿಚ್ಚಿಗಳದೆನ್ನಲಾದ ಸಮಾಧಿಯು ಇದೆ. "ಗಣಭಾಷ್ಯರತ್ನ ಮಾಲೆ" ಕೃತಿಯ ಕೃರ್ತ ಮಲ್ಲಣ್ಣ, ಈತನ ಮೊಮ್ಮಗನಾದ ಗುಬ್ಬಿ ಮಲ್ಲಣಾರ್ಯ 'ಭಾವಚಿಂತಾರತ್ನ' ಮತ್ತು 'ವೀರಶೈವಾಮೃತಪುರಾಣ' ಎಂಬ ಎರಡು ಕಾವ್ಯಗಳನ್ನು ರಚಿಸಿರುವನು. ಈತನ ಮಗ ಶಾಂತೇಶ 'ತೋಂಟದ ಸಿದ್ದೇಶ್ವರ ಪುರಾಣ' ಎಂಬ ಗ್ರಂಥವನ್ನು ರಚಿಸಿರುವನು. ಕನ್ನಡ ರಂಗಭೂಮಿಗೆ ವಿಶಿಷ್ಠ ಕಾಣಿಕೆ ಸಲ್ಲಿಸಿರುವ ಗುಬ್ಬಿಚನ್ನಬಸವೇಶ್ವರ ಕೃಪಾ ಪೋಷಿತ ನಾಟಕ ಮಂಡಳಿಯ ಜಿ.ಎಚ್.ವೀರಣ್ಣ ಮೊದಲಾದ ಮಹನೀಯರನ್ನು



ಪಡೆದ ಸೇವಾ ಕ್ಷೇತ್ರವಿದು. ರಾಗಿ, ಭತ್ತ, ಗೋಧಿ, ಅಡಿಕೆ ಮೊದಲಾದವುಗಳನ್ನು ಬೆಳೆಯುವ ಈ ಪವಿತ್ರ ಭೂಪ್ರದೇಶದ ಗುಬ್ಬಿಹೊಸಹಳ್ಳಿ ಸಮೀಪದ ಕಕ್ಕೇನಹಳ್ಳಿ ತಿಮ್ಮಕ್ಕನವರ ಜನ್ಮಭೂಮಿ.

ಕಿತ್ತು ತಿನ್ನುವ ಬಡತನ, ತಿನ್ನಲು ಕೂಳಿಲ್ಲ, ತೊಡಲು ಬಟ್ಟೆಯಿಲ್ಲ. ಇರಲೊಂದು ನೆರಕೆಮನೆ. ಮಳೆಗಾಲಕ್ಕೆ ಮಳೆಮನೆ, ಬೇಸಿಗೆ ಕಾಲಕ್ಕೆ ಬಿಸಿಲುಮನೆ, ಚಳಿಗಾಲಕ್ಕೆ ಚಳಿಮನೆ. ಅದು ಊರ ಹೊರಗಿರುವುದು ಬೇರೆ. ಗೌಡರ ಹೊಲದಲ್ಲಿ ಪುರುಸೊತ್ತಿಲ್ಲದಂತೆ ಹೊಲ ಹೂಳುವುದು. ಇಲ್ಲವೇ ಬಿತ್ತೋದು. ಕಳೆ ತೆಗೆಯೊದನ್ನು ನಿತ್ಯ ಹೆಂಡತಿ ಈರವ್ವ ಜೊತೆಗೂಡಿ ಕೆಲಸ ಮಾಡುತ್ತಿದ್ದ ನಾಗಯ್ಯನಿಗೆ ರಾತ್ರಿಯಾದ ತಕ್ಷಣ ಯಮ ಯಾತನೆಯಂತೆ ಮೈಕೈನೋವು. ಅದನ್ನ ಮರೆಯಲಿ ಅಂತ ಒಂದಷ್ಟು ಹೆಂಡ ಕುಡಿಯೋದು, ಹೆಂಡತಿ ಜೊತೆಗೂಡಿ ಮಲಗಿ; ಬೆಳಗಾದ ತಡವೆ ಪಿಕಾಶಿ, ಗುದ್ದಲಿ, ಹೆಗಲ ಮೇಲಿಟ್ಟುಕೊಂಡು ಗೌಡರ ಹೊಲಕ್ಕೆ ಹೋಗಿ ಕೆಲಸ ಮಾಡೋದು ನಾಗಯ್ಯನ ಕಾಯಕ. ನಾಯಿಗೆ ಹಾಕಿದಂಗೆ ಕೂಳು ಹಾಕೋದು, ಹಾವು ಕಂಡರೆ ಹೆದರಿಕೊಂಡ ಓಡಿ ಹೋಗುವಂತೆ ಎದುರಿಗೆ ಹೋದರೆ ಹೋಗುವ, ಕೆಟ್ಟ ಕೊಳಕು ಮಾತುಗಳನ್ನಾಡುವ ಉಚ್ಚವರ್ಗದ ನೀಚ ನಡತೆಗೆ ರೋಸಿ ಹೋಗಿದ್ದ ನಾಗಯ್ಯ–ಈರವ್ವ ಕಣ್ಣೀರಲ್ಲಿ ರಕ್ತವೇ ಹರಿಯುತ್ತದೆಯೇನೋ ಎಂಬಂತೆ ತಾವು ಹುಟ್ಟಿರುವ ಜನಾಂಗದ ಬಗ್ಗೆ ಹಿಡಿಶಾಪ ಹಾಕಿಕೊಳ್ಳುತ್ತಾ ಗೋಳಾಡುತ್ತಿದ್ದರು. ಆದರೂ ನಾಗಯ್ಯ ಧೈರ್ಯ ತಂದುಕೊಂಡು ಈಸಿ ಜೈಸಬೇಕೆಂದುಕೊಳ್ಳುತ್ತಿದ್ದ. ಒಂದು ದಿನ ಸೊಕ್ಕಸೂರಗು ನಿದ್ದೆ ಹೋಗಿದ್ದ ನಾಗಯ್ಯ ತನ್ನ ಮೊಮ್ಮಗನ ಮಗಳಿಗೆ ಸಕಲ ಜನರು ಸೇರಿ ಬಿರುದು ಬಹುಮಾನಗಳನ್ನು ನೀಡಿ, ಕುದುರೆ ಮೇಲೆ ಕುಳ್ಳಿರಿಸಿಕೊಂಡು ಮೆರವಣಿಗೆ ಮಾಡಿದಂಗೆ ಕನಸು ಕಂಡವನೆ ದಿಗ್ಗನೇ ಎದ್ದು ಈರು, ಈರು ಬಾರೆ ಇಲ್ಲಿ ಎಂದು ಕರೆದು ಹೆಂಡತಿಗೆ ತನ್ನ ಕನಸನ್ನೆಲ್ಲ ಹೇಳಿದನಂತೆ. ಈರವ್ವ 'ಮಾಮ ಮಾಮ ಬಸುರಾಗಿದಿನಿ' ಎಂದು ಹೇಳಿದಾಗ ತುಂಬಾ ಖುಷಿಯಿಂದ ಮತ್ತೊಂದು ಮಗೆ ಹೆಂಡವನ್ನು ಅಷ್ಟೊತ್ತಿನಲ್ಲಿಯೇ ಕುಡಿದು ಮಲಗಿದ.

ದಿನ ಕಳೆದಂತೆಲ್ಲ ತುಂಬು ಬಸುರಿಯಾದ ಈರವ್ವ ಗಂಡು ಮಗುವಿಗೆ ಜನ್ಮ ನೀಡಿದಳು. ನಾಗಯ್ಯ ಬಹು ಸಂತೋಷದಿಂದ ಮಗನಿಗೆ 'ತೋಪನಯ್ಯ' ಎಂದು ಹೆಸರಿಟ್ಟ. ಮಗುವಿಗೆ ಚೆನ್ನಾಗಿ ಹಾಲು ಕುಡಿಸಲಿ ಅಂತ ನುಗ್ಗೆಸೊಪ್ಪು, ಹಾಲೆಸೊಪ್ಪು ತಂದು ಉಪ್ಪು ಸೊಪ್ಪು ಬೇಯಿಸಿ, ಈರವ್ವಗೆ ತಿನ್ನಿಸುತ್ತ ನಾಗಯ್ಯ ಹೆಂಡತಿ–ಮಗುವನ್ನು ಬಡತನದ ಬವಣೆಯಲ್ಲಿಯೂ ಚನ್ನಾಗಿ ಕಾಪಾಡಿದ.

ತೋಪನಯ್ಯ ಬಾರಿ ತುಂಟ. ಆರು ವರ್ಷದ ಹುಡುಗ ಹದಿನಾರು ವರ್ಷದವನಂಗೆ ಊರು ಸುತ್ತುವರಿದುಕೊಂಡಿದ್ದ ಕಾಡಿಗೆ ಒಬ್ಬನೆ ಹೋಗಿ ಬಿಡುತ್ತಿದ್ದ. ಅಲ್ಲಿ ಕಾರೆಹಣ್ಣು, ಲಂಟನ್ಹಣ್ಣು, ಬಾರೆಹಣ್ಣು ಕಿತ್ತುಕೊಂಡು ಸಾಕಾಗುವಷ್ಟು ತಿಂದು, ಅವ್ವ ಅಪ್ಪನಿಗೂ ತರುತ್ತಿದ್ದ.

ಒಂದು ದಿನ ನಾಗಯ್ಯ ತನ್ನ ಗೆಳೆಯ ಮತ್ತು ನೆಂಟ ಮಾರಯ್ಯನ ಜೊತೆಗೂಡಿ ಐದಾರು ಮಗೆ ಹೆಂಡ ಕುಡಿದ. ಅಮಲಿನಲ್ಲಿಯೇ ಮಾರಯ್ಯನ ಮಗಳು ಮೂರು ವರ್ಷದ ಕರಿಯಮ್ಮಳನ್ನು ತೋಪಯ್ಯನಿಗೆ ಮದುವೆ ಮಾಡಿಕೊಳ್ತಿನಿ ಅಂತ ಮಾತು ಕೊಟ್ಟ. ಅಂತೆಯೇ

ವಾರ ತಿರುಗುವಷ್ಟೊತ್ತಿಗೆ ತೋಪನಯ್ಯಗೂ–ಕರಿಯಮ್ಮಗೂ ಬಾಲ್ಯವಿವಾಹ ಮಾಡಿಯೇ ಬಿಟ್ಟರು. ದೊಡ್ಡರಾಗುವವರೆಗೂ ಅವರವರ ಮನೆಯಲ್ಲಿಯೇ ಬೆಳೆದರು. ನಾಗಯ್ಯ ತನ್ನ ಮಗ ತೋಪನಯ್ಯನಿಗೆ ನಾಗಸ್ವರ ಊದುವುದನ್ನು ಕಲಿಸುತ್ತಿದ್ದ. ಹಠಮಾಡಿ ಅಳುತ್ತಿದ್ದ ತೋಪನಯ್ಯ ನಾಗಸ್ವರವನ್ನು ನಾಗಯ್ಯ ಊದುತ್ತಿದ್ದಂತೆ ಬೆಳದಿಂಗಳ ಚಂದಿರ ಹೊಳೆದಂತೆ ಕಿಲಕಿಲನೆ ನಗುತ್ತಿದ್ದ.

ಒಂದು ದಿನ ನಾಗಯ್ಯ, ಹನುಮನಗೌಡ್ರ ಹೊಲದಲ್ಲಿ ಮಣ್ಣು ಕಡಿದು ವಡ್ಡು ಹಾಕುತ್ತಿದ್ದ. ಅಪ್ಪ ನಾಗಯ್ಯನನ್ನು ಹುಡ್ಕೊಂಡು ಮಗ ತೋಪನಯ್ಯ ಅಲ್ಲಿಗೆ ಹೋದ. ತೋಪನಯ್ಯನನ್ನು ಆಡಿಸಿಕೊಳ್ಳುತ್ತಾ ಕೆಲಸ ಒಂದಿಷ್ಟು ಕಡಿಮೆ ಮಾಡಿದ್ದ ನಾಗಯ್ಯ. ಅಲ್ಲಿಗೆ ಬಂದು ನೋಡಿದ ಮುಂಗೋಪಿ ಹನುಮನಗೌಡ ಬಾಯಿಗೆ ಬಂದ ಹಾಗೆ ಬೈದನು. ಅಷ್ಟೇ ಅಲ್ಲದೆ ಗೆರೆ ಕೊರೆದು ಇದಿಷ್ಟು ಕೆಲಸ ಮಾಡಿ ಮನೆಗೆ ಹೋಗೆಂದು ಕಟ್ಟಪ್ಪಣೆ ಮಾಡಿದ. ಮಗನನ್ನು ಮನೆಗೆ ಕಳುಹಿಸಿದ ನಾಗಯ್ಯ ದಣಿಯ ಮಾತಿನಂತೆ ಮಣ್ಣು ಅಗೆದು ಅಗೆದು ವಡ್ಡು ಹಾಕ ತೊಡಗಿದ. ಕೆಲಸ ಮಾಡಿ ಸುಸ್ತಾದ ನಾಗಯ್ಯ ಸರಹೊತ್ತಿಗೆ ಮತ್ತೇ ಬಾರದ ಲೋಕಕ್ಕೆ ಹೋಗಿದ್ದ. ಬೆಳಗಾದರೂ ಗಂಡ ಬರಲಿಲ್ಲವೆಂದು ರಾತ್ರಿಯೆಲ್ಲ ಗಂಡನ ಹಾದಿಯನ್ನೇ ಕಾದಿದ್ದ ಈರವ್ವ ಬೆಳಗಾದ ಕೂಡಲೆ ಮಗನನ್ನು ಕರಕ್ಕೊಂಡು, ಬುತ್ತಿ ಹೊತ್ತುಕೊಂಡು ದಣಿಯ ಹೊಲಕ್ಕೆ ಹೋದಳು. ಅಲ್ಲಿ ನಾಗಯ್ಯನ ಸ್ಥಿತಿ ಕಂಡು ಬೆಚ್ಚಿ ಬಿದ್ದಳು. ಕೈತುಂಬ ಬೊಬ್ಬೆ ಬಂದಿವೆ. ಕೈಗೊಳಗೆ ಪಿಕಾಸಿ ಹಿಡುಕೊಂಡು ಇಹಲೋಕ ತ್ಯಜಿಸಿದ್ದ. ಈರವ್ವಳ ದುಃಖ ಮುಗಿಲ ಮುಟ್ಟಿತ್ತು. ಮಗು ತೋಪನಯ್ಯ ‘ಅಪ್ಪಾ, ಅಪ್ಪಾ’ ಎಂದು ಅಬ್ಬರಿಸುತ್ತಿತ್ತು. ಅಷ್ಟೊತ್ತಿಗೆ ಸಂಬಂಧಿಕರಿಗೆಲ್ಲ ವಿಷಯ ತಿಳಿದು, ಶವಸಂಸ್ಕಾರ ಮಾಡಿದರು. ಮಗನನ್ನು ಬೆಳೆಸುವ ಸಲುವಾಗಿ ಈರವ್ವ ಧೈರ್ಯ ತಂದುಕೊಂಡು ಕೂಲಿಮಾಡಿ ಮಗನನ್ನು ಬೆಳೆಸಿದ್ಲು.

ತೋಪನಯ್ಯ ಹದಿನಾರು ವರ್ಷದವನಾದ. ಹದಿಮೂರು ವರ್ಷದ ಕರಿಯಮ್ಮನನ್ನು ಈರವ್ವ ಮನೆ ತುಂಬಿಸಿಕೊಂಡ್ಲು. ತೋಪನಯ್ಯ ಸಾಹುಕಾರ ಹನುಮಗೌಡ್ರರ ಮನೆಯಲ್ಲಿ ಅಪ್ಪನ ಕೆಲಸ ಮುಂದುವರೆಸಿದ. ಕರಿಯಮ್ಮ ಈರವ್ವಳ ಮನೆಗೆ ಬಂದು ಮೂರು ವರ್ಷದೊಳಗೆ ಗಂಡು ಮಗುವಿಗೆ ಜನ್ಮಕೊಟ್ಟಳು. ಆ ಮಗುವಿಗೆ ಚಿಕ್ಕರಂಗಯ್ಯ ಅಂತ ಹೆಸರಿಟ್ಟರು. ಕರಿಯಮ್ಮ ವರ್ಷಕೊಂದರಂತೆ ಮೂರು ಹೆಣ್ಣು ಮಕ್ಕಳನ್ನು ಹೆತ್ತುಕೊಟ್ಟಳು. ಈರವ್ವ ಮೊಮ್ಮಕ್ಕಳನ್ನು ಆಡಿಸುತ್ತಾ ಕಾಲಕಳೆಯುತ್ತಿರುವಾಗ ಇದ್ದಕ್ಕಿದಂತೆ ನಾಗಯ್ಯನನ್ನು ನೆನಸಿಕೊಂಡು ಅತ್ತು ಅತ್ತು ಅಲ್ಲಿಯೇ ಅಸುನೀಗಿದಳು. ತೋಪನಯ್ಯ ಕರಿಯಮ್ಮ ತುಂಬ ದುಃಖಿಸಿದರು. ಅವ್ವನ ಶವಸಂಸ್ಕಾರವನ್ನು ತಮ್ಮ ಪದ್ಧತಿಗೆ ಅನುಗುಣವಾಗಿ ನಿರ್ವಹಿಸಿದರು.

ನಾಲ್ಕು ಜನ ಮಕ್ಕಳನ್ನು ಸಾಕುವ ಸಲುವಾಗಿ ತೋಪನಯ್ಯ ಸಾಹುಕಾರ ರಾಮೇಗೌಡ್ರ ಮನೆಯಲ್ಲಿ ಸಂಬಳಕ್ಕಿದ್ದ. ರಾಮೇಗೌಡರ ಹೊಲದಲ್ಲಿನ ಬದುಗಳಲ್ಲಿ ಮಾವು ಬೇವಿನ ಸಸ್ಯಗಳನ್ನು ಹಾಕಿ ಮಕ್ಕಳಿಗಿಂತ ಹೆಚ್ಚು ಪ್ರೀತಿಯಿಂದ ಸಾಕುತ್ತಿದ್ದ. ತೋಪನಯ್ಯನ ಕಣ್ಮುಂದೆ ಹೆಮ್ಮರಗಳಾದವು. ಆ ಮರಗಳ ಗುಂಪನ್ನು ಊರ ಜನರೆಲ್ಲಾ ‘ತೋಪನಯ್ಯನತೋಪು’



ಎಂದು ಕರೆಯುತ್ತಿದ್ದರು. ಅಲ್ಲದೆ ತೋಪಿನ ತೋಪನಯ್ಯ ಅಂತಲೇ ಜನರಿಗೆಲ್ಲ ಪರಿಚಿತನಾದ. ತೋಪನಯ್ಯ ತಮಗೆ ಹತ್ತಿರ ಸಂಬಂಧಿಯಾದ ತಿಮ್ಮಪ್ಪ–ಮಲ್ಲಮ್ಮನ ಮಗಳಾದ ವಿಜಯಮ್ಮನನ್ನು ಚಿಕ್ಕರಂಗಯ್ಯನಿಗೆ ಮದುವೆ ಮಾಡಿದ.

ಚಿಕ್ಕರಂಗಯ್ಯ ತನ್ನ ತಂಗಿಯರಾದ ಗಂಗವ್ವ, ನಾಗವ್ವ, ಲಕ್ಕವ್ವಳ ಮದುವೆ ಮಾಡುವ ಸಲುವಾಗಿ ತಮ್ಮೂರಿಗೆ ಸಮೀಪವಿದ್ದ ಮುದ್ಲಳಿಯ ಮುತ್ತೇಗೌಡರ ಮನೆಯಲ್ಲಿ ಜೀತಕ್ಕಿದ್ದ. ಅಪ್ಪನನ್ನು ಜೀತದಿಂದ ಮುಕ್ತಗೊಳಿಸಿದ ಚಿಕ್ಕರಂಗಯ್ಯನು ವಾರದಲ್ಲಿ ಮೂರು ಬಾರಿ ಊರಿಗೆ ಬಂದು ಹೆಂಡತಿ ವಿಜಿಯಮ್ಮನ ಜೊತೆಗೆ ಸರಸ–ಸಲ್ಲಾಪವಾಡಿ ಹಿಂದಿರುಗುತ್ತಿದ್ದ. ಬಡತನ ಬಾದಿಸುತ್ತಿದ್ದರೂ ಗಂಡ–ಹೆಂಡರ ಪ್ರೀತಿಗೆ ಬಡತನವಿರಲಿಲ್ಲ. ಅಡವಿಯಲ್ಲಿ ದೊರೆಯುವ ಹಣ್ಣು ಹಂಪಲು, ಕಾಡುಮಲ್ಲಿಗೆ ಹೂವುಗಳನ್ನು ಹೆಂಡತಿಗೆ ತಂದು ಕೊಡುತ್ತಿದ್ದ. ಮುತ್ತೇಗೌಡರ ದನಗಳನ್ನು ಕಾಯುವುದು, ಮೇವು ಹಾಕೊದು, ನೀರು ಕುಡಿಸುವುದು, ದಣಿಯ ಹೊಲ ಉಳುಮೆ ಮಾಡೋದು, ಬೆಳೆ ಬೆಳೆಯೋದು, ಫಸಲು ತುಳಿಸೋದು ಹೀಗೆ ಒಂದಲ್ಲ ಒಂದು ಕೆಲಸದಲ್ಲಿ ನಿರತನಾಗಿರುತ್ತಿದ್ದ. ಮುತ್ತೇಗೌಡರ ಮನೆಯಲ್ಲಿ ಮಗನ ತರಹ ಕೆಲಸ ಮಾಡುತ್ತಿದ್ದ. ಅಪ್ಪನಂತೆ ಚಿಕ್ಕರಂಗಯ್ಯ ಮುತ್ತೇಗೌಡ್ರ ಹೊಲಗಳ ಬದುಗಳಲ್ಲಿ ಬೇವಿನ ಸಸಿ, ಹುಣಸೆ ಸಸಿ, ಮಾವಿನ ಸಸಿಗಳನ್ನು ಹಾಕಿ ಪೋಷಿಸುತ್ತಿದ್ದ.

ಒಂದು ದಿನ ಚಿಕ್ಕರಂಗಯ್ಯನಿಗೆ ವಿಜಿಯಮ್ಮ ‘ಮಾಮ, ಮಾಮ ಕಾರೆಹಣ್ಣು ತಾ ಅಂದ್ಲು.’ ಆಗ ಚಿಕ್ಕರಂಗಯ್ಯನಿಗೆ ನಗು ತಡೆದುಕೊಳ್ಳಲಿಕ್ಕೆ ಆಗಲಿಲ್ಲ. ಜೋರಾಗಿ ನಕ್ಕು ‘ಲೇ ಲೇ ಯಾಕೇ ಕಾರೆಹಣ್ಣು ಕೇಳ್ತಿಯಾ’ ಎಂದ. ‘ನಂಗೆ ತಿನ್ನಂಗೆ ಆಗ್ಯದೆ’ ಅಂದ್ಲು. ಅತ್ತೆ ಕರಿಯಮ್ಮ ‘ವಿಜಯವ್ವ ಬಸುರಾಗಿಯೇನೇ ಎಂದ್ಲು’. ಆಗ ವಿಜಿಯಮ್ಮ ಹೌದು ಅಂತ ತಲೆಯಾಡಿಸಿದ್ಲು. ಚಿಕ್ಕರಂಗಯ್ಯಗೆ ಖುಷಿಯೋ ಖುಷಿಯಾಗಿ ಅಡವಿಗೆ ಓಡಿ ಹೋಗಿ ಕಾರೆಹಣ್ಣುಗಳಿಗೆ ಅಲೆದಾಡಿದ. ಹುಡುಕಿ ಹುಡುಕಿ ಕಾರೆಹಣ್ಣುಗಳನ್ನು ಕಿತ್ತುಕೊಂಡು, ಟವಲಿನಲ್ಲಿ ಕಟ್ಟಿಕೊಂಡು ಓಡೋಡಿ ಬಂದು, ವಿಜಿಯಮ್ಮಗೆ ಕೊಟ್ಟ. ವಿಜಿಯಮ್ಮ ಸಾಕಾಗುವಷ್ಟು ಕಾರೆಹಣ್ಣು ತಿಂದ್ಲು. ಅವೊತ್ತಿನ ಖುಷಿಯಲ್ಲಿ ಚಿಕ್ಕರಂಗಯ್ಯ ಮುತ್ತೇಗೌಡರ ಮನೆಗೆ ಕೆಲಸಕ್ಕೆ ಹೋಗಲಿಲ್ಲ. ಮಾರನೆ ದಿನ ಮುತ್ತೇಗೌಡರು ಬಂದು ‘ಲೇ ರಂಗ ಏನಾಗಿದೆಯೋ ನಿಂಗೆ ಸರಿಯಾಗಿ ಬಂದು ಸಂಬಳ ದುಡಿ; ಇಲ್ಲ ನಿಮ್ಮಪ್ಪ ಮಾಡಿದ ಸಾಲಕೊಟ್ಟು ಬಿಡು’ ಅಂತಾ ದಮಕಿ ಹಾಕಿದರು. ‘ಸಾಹುಕಾರ್ರೆ ಈಗಲೇ ಬಂದೆ. ಏನೋ ಕೆಲಸ ಇತ್ತು. ಅದಕ್ಕೆ ಬರಲಿಲ್ಲ ಸಾಮಿ. ಈಗಲೇ ಬಂದ್ಬಿಟ್ಟೆ’ ಅಂತ ದಣಿಯ ಹಿಂದೆನೇ ಹೊರಟುಹೋದ. ಮನೆಯ ಬಾಗಿಲ ತಡಿಕೆ ಮರೆಯಲ್ಲಿ ನಿಂತು ಗಂಡ ಹೋಗುವುದನ್ನೇ ನೋಡುತ್ತಿದ್ದ ವಿಜಿಯಮ್ಮ ‘ನಾಳೆ ಬಾ ಮಾಮ ಅಂದ್ಲು’. ಅದನ್ನೇ ಮೆಲುಕು ಹಾಕಿಕೊಳ್ಳುತ್ತಾ ಚಿಕ್ಕರಂಗಯ್ಯ ದಣಿಯ ಮನೆಯ ಕೆಲಸವನ್ನೆಲ್ಲ ಮುಗಿಸಿದ. ದನಗಳಿಗೆ ಸಾಕಷ್ಟು ಮೇವು ತಂದು ಹಾಕಿದ. ನೀರು ಕುಡಿಸಿದ. ಸಂಜೆ ಆಗುತ್ತಿತ್ತು ಯಜಮಾನಿ ನರಸಮ್ಮನಿಗೆ ‘ಅವ್ವರೇ, ಅವ್ವರೇ ಈಗ ಊರಿಗೆ ಹೋಗಿ; ಬೆಳಗಿನ ಜಾವ ಐದು ಗಂಟೆಗೆ ಬಂದ್ಬಿಡಿತೀನಿ ಕಳುಹಿಸಿಕೊಡ್ರವ್ವ’ ಅಂತ ಚಿಕ್ಕರಂಗಯ್ಯ ಗೋಗರೆದ. ದಯಾಳು,

ಬಡವರ ಬಗ್ಗೆ ಅನುಕಂಪ ಹೊಂದಿದ್ದ ನರಸಮ್ಮ ಮರು ಮಾತನಾಡದೆ ‘ರಂಗಯ್ಯ ಹೋಗಿ ಬೇಗ ಬಾರಪ್ಪ’ ಅಂದರು. ಹಸಿದವನಿಗೆ ಅನ್ನ ಸಿಕ್ಕಾಗ ಆಗುವಷ್ಟು ಸಂತೋಷ ಚಿಕ್ಕರಂಗಯ್ಯನಿಗೆ ಆಯಿತು. ದಣಿಯ ಮನೆಯಿಂದ ಕಾಳು, ತೊಗರಿಬೇಳೆ ಇಸೆದುಕೊಂಡು ರಾತ್ರಿ ಎಂಟು ಗಂಟೆ ಹೊತ್ತಿಗೆ ರಂಗಯ್ಯ ಮನೆಗೆ ಬಂದ. ‘ವಿಜಿ ವಿಜಿ’ ಅಂತ ಹೆಂಡತಿಗೆ ತುಂಬಾ ಖುಷಿಪಡಿಸಿ, ಬೆಳಗಿನ ಜಾವ ಐದು ಗಂಟೆ ಹೊತ್ತಿಗೆ ದಣಿ ಮನೆ ಸೇರಿ, ನಿತ್ಯದ ಕೆಲಸಗಳೆನ್ನಲ್ಲ ಮಾಡಿದ.

ಇತ್ತ ಅತ್ತೆ ಕರಿಯವ್ವ, ಮಾವ ತೋಪನಯ್ಯ ಸೊಸೆ ವಿಜಿಯಮ್ಮಳನ್ನು ಚೆನ್ನಾಗಿ ಸಲುಹುತ್ತಿದ್ದರು. ವಿಜಿಯಮ್ಮ ಗಂಡನ ಮನೆಯ ಬಡತನವನ್ನು ಅರಿತವಳು. ಸುಮ್ಮನೇ ಕೂತು ಉಣ್ಣುವ ಜಾಯಮಾನದವಳಲ್ಲ. ಊರಿನ ಶ್ರೀಮಂತರ ಮನೆಗಳಲ್ಲಿ ಕಾಳು ಮಾಡಿ ಬರುತಿದ್ಲು. ಒಂದಿಷ್ಟು ಸಿಡುಕಿನ ಸ್ವಭಾವದವಳಾದರೂ ಅತ್ತೆ–ಮಾವರೆಂದರೇ ದೇವರು ಅಂತಾ ಭಾವಿಸಿಕೊಂಡವಳು. ಅತ್ತೆ ಕರಿಯವ್ವ ರಾತ್ರಿ ನಿದ್ರೆ ಬರುವವರೆಗೂ ಜಾನಪದ ಹಾಡುಗಳನ್ನು ಹಾಡುತ್ತಿದ್ದಳು. ಕರಿಯಮ್ಮ ಒಂದು ರೀತಿ ಜಾನಪದ ಕೋಗಿಲೆ. ಆಕೆಯ ಕಂಠಸಿರಿಗೆ ಅಳುವ ಕಂದಮ್ಮಗಳು ಅಳು ನಿಲ್ಲಿಸಿ, ಹಾಡಿನ ಜೋಗುಳಕ್ಕೆ ಮಲಗಿ ಬಿಡುತ್ತಿದ್ದವಂತೆ. ಹಾಡಿನ ಕರಿಯವ್ವ, ಕಥೆಗಾರ್ತಿ ಕರಿಯವ್ವ ಅಂತಲೇ ಇಡೀ ಊರಿಗೆ ಊರೇ ಕರೆಯುತ್ತಿತ್ತಂತೆ.

ಒಳ್ಳೆವರ ಗೆಳೆತನ ಕಲ್ಲುಸಕ್ಕರಿ ಹಾಂಗ
ಕುಲ್ಲರಗೆಳೆತನ ಮಾಡಿದರ। ನನಕಂದ
ಸಲ್ಲದ ಮಾತು ಬರುತಾವ ॥

ಎಂಬಂತಹ ಸಹಸ್ರ ಸಹಸ್ರ ಜನಪದ ಹಾಡುಗಳನ್ನು ಹಾಡುತ್ತಿದ್ದ ಕರಿಯವ್ವನ ಜೋಗುಳಕ್ಕೆ ತುಂಬು ಬಸುರಿ ವಿಜಿಯಮ್ಮ ಚೆನ್ನಾಗಿ ನಿದ್ದೆ ಮಾಡುತ್ತಿದ್ದಳು. ಒಂಬತ್ತು ತಿಂಗಳು, ಒಂಬತ್ತು ದಿನ, ಒಂಬತ್ತು ಗಂಟೆ ತುಂಬಿದ ತಡವೇ ವಿಜಿಯಮ್ಮ ಒಂದಿಷ್ಟು ವೇದನೆ ಪಡದೆ ಹೆಣ್ಣು ಮಗುವಿಗೆ ಜನ್ಮ ನೀಡಿದಳು. ಮನೆಗೆ ಭಾಗ್ಯಲಕ್ಷ್ಮೀ ಬಂದ್ಲು ಅಂತ ಅಜ್ಜ–ಅಜ್ಜಿ, ಅಪ್ಪ–ಅವ್ವ ಖುಷಿಯಾಗಿ ಮಗುವಿಗೆ ‘ಗಂಗಮ್ಮ’ ಅಂತ ಹೆಸರಿಟ್ಟರು. ಅಪ್ಪ ಮಾಡಿದ ಸಾಲವನ್ನು ತೀರಿಸುತ್ತಾ, ಇತ್ತಾ ಹೆಂಡತಿ ಮಗುವನ್ನು, ಅಪ್ಪ–ಅವ್ವನನ್ನು ನೋಡಿಕೊಳ್ಳುತ್ತಾ ಚಿಕ್ಕರಂಗಯ್ಯ ಜೀವನ ಸಾಗಿಸುತ್ತಿದ್ದ.

೧

# ೪. ತಿಮ್ಮಕ್ಕನವರ ಜನನ ಮತ್ತು ಬಾಲ್ಯ

**ಹಿ**ರೇಮಗಳು ಗಂಗಮ್ಮ ಹುಟ್ಟಿ ಒಂದು ವರ್ಷಕ್ಕೆ ವಿಜಿಯಮ್ಮ ಮತ್ತೇ ಗರ್ಭಿಣಿಯಾದ್ಲು. ಗರ್ಭಿಣಿಯಾಗಿದ್ದರೂ ಒಂದಿಷ್ಟೂ ಸೂಕ್ಷ್ಮ ಮಾಡದೇ ಎಂದಿನಂತೆಯೇ ಸಿರಿವಂತರ ಮನೆಯ ಕಾಳುಕಡಿ ಹಸನು ಮಾಡುವ ಕಾಯಕವನ್ನು ನಿತ್ಯ ಮಾಡುತ್ತಿದ್ದ ಸದ್‌ಗೃಹಿಣಿ. ‘ಅತ್ತೆ–ಮಾವರಿಗಂಜಿ। ಸುತ್ತೇಳು ನೆರೆಗಂಜಿ’ ಬಾಳುತ್ತಿದ್ದ ಸಾಧ್ವಿಮಣಿ. ಅತ್ತೆ–ಮಾವ, ಸೊಸೆ ಮತ್ತೇ ಗರ್ಭಿಣಿಯಾಗಿದ್ದಕ್ಕೆ ಬಹು ಸಂತೋಷಪಡುತ್ತಿದ್ದರು.

‘ತನ್ನಂಗ ತನ್ನ ಮಗಳಂಗ। ನೋಡಿದರೆ
ಭಿನ್ನಿಲ್ಲ ಭೇದವಿಲ್ಲ। ಕಣ್ಮುಂದೆ। ಇದೆ ಕೈಲಾಸ॥’

ಎಂಬ ಜನಪದ ವಾಣಿಯಂತೆ ಸೊಸೆಯನ್ನ ಕರಿಯವ್ವ ಮಗಳ ತರಹ ಕಾಣುತ್ತಿದ್ಲು. ಸೊಸೆ ಕೂಡ ‘ಅತ್ತೆ’ ಎನ್ನದೇ ‘ಅವ್ವ’ ಅಂತ ಕರಿತ್ತಿದ್ಲು. ಅವ್ವನ ತರನೇ ನೋಡಿಕೊಳ್ಳುತ್ತಿದ್ಲು. ಮನೆ ನೆರೆಕೆಯಿಂದ ಕೂಡಿದ ಹುಲ್ಲುಗುಡಿಸಲು. ಆದರೂ ಅವರ ಮನಗಳು ಮಾತ್ರ ಭವ್ಯ ಬಂಗಲೆಗಳಾಗಿದ್ದವು.

“ಮಂದಿ ಮಕ್ಕಳೊಳಗೆ ಚಂದಾಗಿ ಇರಬೇಕು
ನಂದೀಯ ಶಿವನ ದಯದಿಂದ। ಹಾಗಾಗ
ಮಂದಿ ಬಾಯಾಗ ಇರಬೇಕು
ಹಿರಿಯರಿಗೆ ಹಿರಿಯನ್ನು ಕಿರಿಯರಿಗೆ ಕಿರಿಯನ್ನು
ನೆರೆಗಡ್ಡದ ಮುದುಕರ। ಕಂಡರ
ತಲೆಬಾಗಿ ನಡೆಯೋ ನನಕಂದ॥

ಆಚಾರಕ್ಕರಸಾಗು ನೀತಿಗೆ ಪ್ರಭುವಾಗು
ಮಾತಿನಲಿ ಚೂಡಾಮಣಿಯಾಗು। ಕಂದಯ್ಯ
ಜ್ಯೋತಿಯೇ ಆಗು ಜಗಕೆಲ್ಲ॥

ಎಂಬಂತಹ ಜನಪದ ಹಾಡುಗಳನ್ನು ನಿತ್ಯರಾತ್ರಿ ಕರಿಯವ್ವ ಹಾಡುತ್ತಿದ್ದರೆ ತುಂಬುಬಸುರಿ ವಿಜಿಯಮ್ಮ ಹಾಡು ಕೇಳುತ್ತಾ ಕೇಳುತ್ತಾ ಹಂಗೆ ನಿದ್ದೆ ಹೋಗುವಳು. ತೋಪನಯ್ಯ–ಕರಿಯವ್ವ ಜನಪದ ಹಾಡುಗಳನ್ನು, ಜನಪದ ಕಥೆಗಳನ್ನು ಮೊಮ್ಮಗಳು ಗಂಗಮ್ಮನ

ಕುಳ್ಳಿರಿಸಿಕೊಂಡು ಹೇಳುತ್ತಿದ್ದರೆ; ಅಡುಗೆ ಮಾಡುತ್ತಾ, ಕಸ ಗುಡಿಸುತ್ತಾ ಆ ಕತೆ, ಆ ಹಾಡುಗಳನ್ನು ವಿಜಿಯಮ್ಮ ಕೇಳಿಸಿಕೊಳ್ಳುತ್ತಿದ್ದಳು.

ವಿಜಿಯಮ್ಮ ತಮ್ಮೂರಿನ ಗ್ರಾಮದೇವತೆ ಆಲದ ಕೊಂಬೆಯಮ್ಮನನ್ನು ನಿತ್ಯ ಪೂಜಿಸುತ್ತಿದ್ದಳು ಜಗದಕಣ್ಮಣಿಯಾಗುವಂತಹ ಮಗುವನ್ನು ದಯಪಾಲಿಸು ತಾಯೇ ಎಂದು ಬೇಡುತ್ತಿದ್ದಳು. ದಣಿಯ ಮನೆಯಲ್ಲಿ ಚಿಕ್ಕರಂಗಯ್ಯ ಮೂಕ ಪ್ರಾಣಿಗಳಿಗೆ ಪ್ರಾಣಮಿತ್ರನಾಗಿ, ದನಕರುಗಳನ್ನು ಸಾಕುತ್ತಾ ಜಗದ ಜನರು ಮೆಚ್ಚುವಂತಹ ಮಗುವನ್ನು ದಯಪಾಲಿಸಿರೆಂದು, ತನಗೆ ತುಂಬಾ ಇಷ್ಟ ದೈವವೆಂದು ನಿತ್ಯ ಎದ್ದು ನೋಡುತ್ತಿದ್ದ ಎತ್ತು 'ನಾಗ'ನಲ್ಲಿ ನಿವೇದಿಸಿಕೊಳ್ಳುತ್ತಿದ್ದ. ಅಪ್ಪ ಅಮ್ಮನ ದೈವಭಕ್ತಿ, ನಿಷ್ಠಾವಂತ ದುಡಿಮೆ, ಅಜ್ಜ–ಅಜ್ಜಿ ಹೇಳುತ್ತಿದ್ದ ಪ್ರೀತಿ–ನೀತಿಯ ಗಣಿಯಾದ ಜನಪದಹಾಡು–ಕತೆಗಳು ವಿಜಯಮ್ಮಳ ಗರ್ಭದೊಳಗಿನ ಕೂಸಿನ ಮೇಲೆ ಅಪಾರ ಪ್ರಭಾವ ಬೀರಿವೆ.

೧೯೩೦ರ ನವೆಂಬರ್ ೧೨ರಂದು ವಿಜಯಮ್ಮನಿಗೆ ಏನೋ ಒಂದು ತರಹ ಸಂತೋಷ, ಉಲ್ಲಾಸ. ಬೆಳಗಿನ ಜಾವ ಎದ್ದವಳೇ ಅತ್ತೆ ಕರಿಯಮ್ಮನ ಜೊತೆಗೂಡಿ ಆಲದ ಕೊಂಬೆಯಮ್ಮನ ದೇವಾಲಯಕ್ಕೆ ಹೋದರು. ದೇವಿಯ ಕೃಪಾಕಟಾಕ್ಷದಂತೆಯೇ ಒಂದಿಷ್ಟು ನೋವಿಲ್ಲದಂತೆ ಆಲದ ಮರದಡಿಯಲ್ಲಿ ಬೆಳಗಿನ ಆರು ಗಂಟೆಯ ಶುಭವೇಳೆಗೆ ಸುಖಕರವಾಗಿ ಮುದ್ದಾದ ಹೆಣ್ಣುಮಗುವಿಗೆ ಜನ್ಮ ನೀಡಿದಳು. ಗಂಡುಮಗುವಿನ ನಿರೀಕ್ಷೆಯಲ್ಲಿದ್ದ ವಿಜಿಯಮ್ಮ–ಕರಿಯಮ್ಮಗೆ ಒಂದಿಷ್ಟು ನಿರಾಸೆಯೇ ಆಯಿತು. ವಿಷಯ ತಿಳಿದು ಚಿಕ್ಕರಂಗಯ್ಯ ಬಂದವನೇ ಮಗುವನ್ನು ನೋಡಿ ತುಂಬಾ ಸಂತಸಪಟ್ಟ. ಹೆಣ್ಣು ಮಗುವೆಂದು ಬೇಸರ ಮಾಡಿಕೊಳ್ಳದೆ 'ಈ ಮಗು ನನ್ನ ಸೌಭಾಗ್ಯ. ನನ್ನ ಕುಟುಂಬದ ಕಣ್ಣು ಅಂತೆಲ್ಲ ಹೆಂಡತಿಗೂ ಅವ್ವ–ಅಪ್ಪನಿಗೂ ಹೇಳಿದ. 'ಅವ್ವ, ರಾತ್ರಿ ಒಂದು ಕನಸು ಬಿದ್ದಿತ್ತು. ಕನಸಿನಲ್ಲಿ ಆನೆ ಬಂದು ನನಗೆ ಹೂವಿನ ಹಾರ ಹಾಕಿತು' ಎಂದು ಚಿಕ್ಕರಂಗಯ್ಯ ತನ್ನವ್ವ ಕರಿಯವ್ವಗೆ ಹೇಳಿದ. 'ತುಂಬಾ ಒಳ್ಳೆದು ಬಿಡು ಮಗ' ಎಂದ್ಲು ಕರಿಯವ್ವ.

ಚಿಕ್ಕರಂಗಯ್ಯ ದಣಿಯ ಮನೆಗೆ ಹೋಗಿ ಯಜಮಾನಿ ನರಸಮ್ಮನ ಹತ್ತಿರ ಹೆಂಡತಿ ಹಡೆದ ವಿಷಯ ತಿಳಿಸಿದ. ಆಗ ನರಸಮ್ಮ ತಮ್ಮ ಮಕ್ಕಳ ಹಳೆ ಬಟ್ಟೆಗಳನ್ನು, ಒಂದಿಷ್ಟು ಬೆಣ್ಣೆ, ತುಪ್ಪ, ಹಾಲು, ಬೆಲ್ಲ, ಅಕ್ಕಿ ಕೊಟ್ಟು ಹೆಂಡತಿ ಮಕ್ಕಳನ್ನ ನೋಡಿಕೊಂಡು ಬಾ ರಂಗಯ್ಯ ಎಂದು ಕಳುಹಿಸಿದರು. ಅಂದೇ ಬಂದ ರಂಗಯ್ಯ ಅವ್ವ–ಅಪ್ಪನ ಹತ್ತಿರ ಮಾತಾಡಿ ಮಗುವಿಗೆ ಹೆಸರನ್ನು ಇಡಲು ಸಂಬಂಧಿಕರನೆಲ್ಲ ಕರೆದು ಬಂದ. ಸಂಬಂಧಿಕರೆಲ್ಲ ಮಗುವಿನ ಮುದ್ದು ಮುಖ ನೋಡಿ ಬಹು ಸಂತೋಷಪಟ್ಟರು. ಮಗುವಿಗೆ 'ಚಿಕ್ಕ ತಿಮ್ಮಕ್ಕ' ಎಂದು ನಾಮಕರಣ ಮಾಡಿದರು. ಸದಾ ನಗು ನಗುತ್ತಾ ಮಗು ಆಡುತ್ತಿತ್ತು. ಅಕ್ಕ ಗಂಗಮ್ಮ, ತಂಗಿ ಚಿಕ್ಕ ತಿಮ್ಮಕ್ಕಳನ್ನು ಅಜ್ಜಿ–ಅಜ್ಜನ ಹತ್ತಿರ ಆಡಿಸುತ್ತಿದ್ಲು.

ವಿಜಯಮ್ಮ ಹೆರಿಗೆಯಾಗಿ ಎರಡು ತಿಂಗಳು ತುಂಬಿದ್ದೇ ತಡ ಅವರಿವರ ಮನೆಗೆ ಕಾಳು ಹಸನು ಮಾಡಲು ಹೋಗುತ್ತಿದ್ದಳು. ಚಿಕ್ಕರಂಗಯ್ಯನಿಗೆ ಹೆಗಲೆಣೆಯಾಗಿ ದುಡಿದ



ಜೀವ ವಿಜಿಯಮ್ಮ. ಚಿಕ್ಕತಿಮ್ಮಕ್ಕ ಹುಟ್ಟಿ ಎರಡು ವರ್ಷಕ್ಕೆ ದೊಡ್ಡರಂಗಯ್ಯ ಹುಟ್ಟಿದ. ಅನಂತರ ಎರಡು ವರ್ಷಕ್ಕೆ ಲಕ್ಷ್ಮಮ್ಮ ಹುಟ್ಟಿದಳು. ಚಿಕ್ಕತಿಮ್ಮಕ್ಕಗೆ ಒಬ್ಬಳು ಅಕ್ಕ, ಒಬ್ಬಳು ತಂಗಿ ಇಬ್ಬರು ತಮ್ಮಂದಿರು.

ಚಿಕ್ಕರಂಗಯ್ಯನದು ತುಂಬು ಕುಟುಂಬ. ಯಾವುದೇ ಆಸ್ತಿ ಇಲ್ಲದೆ ಕೂಲಿ ಮಾಡೋದರಲ್ಲಿ, ಜೀತ ದುಡಿಯುವುದರಲ್ಲಿಯೇ ಜೀವನ ನಿರ್ವಹಣೆ ಮಾಡಬೇಕಾಗಿತ್ತು. ಬಿತ್ತುವುದು, ಹೊಲ ಹಸನು ಮಾಡುವುದರಲ್ಲಿ ಎತ್ತಿದ ಕೈ. ಆತ ಕೂರ್ಗೆ ಹಿಡಿದು ಬಿತ್ತಿಗೆ ಮಾಡಿದನೆಂದರೆ ಆ ವರ್ಷ ಬಂಪರ್ ಬೆಳೆ ಬರುತ್ತಿತ್ತು. ಅದಕ್ಕೆಲ್ಲ ತುಂಬಾ ಸಂತೋಷ ಪಡುತ್ತಿದ್ದ ಮುತ್ತೇಗೌಡರು, ಚಿಕ್ಕರಂಗಯ್ಯನು ಜೀತಮುಕ್ತನಾಗಬಾರದೆಂದು ಕೊಟ್ಟ ಸಾಲಕ್ಕೆ ಬಡ್ಡಿ, ಬಡ್ಡಿಗೆ ಬಡ್ಡಿ, ಚಕ್ರಬಡ್ಡಿ ಅಂತ ಹೇಳಿ ಸಾಲವನ್ನು ಏರಿಸುತ್ತಲೇ ಇದ್ದರು. ಚಿಕ್ಕತಿಮ್ಮಕ್ಕ ಆರೇಳು ವರ್ಷ ವಯಸ್ಸಿನಿಂದಲೂ ಕೆಲಸ ಮಾಡತೊಡಗಿದ್ದಳು. ಅಕ್ಕ ಗಂಗಮ್ಮನ ಜೊತೆಗೂಡಿ ಅಡವಿಗೆ ಹೋಗಿ ಮುತ್ತುಗದ ಎಲೆಗಳನ್ನು ಕೋಯ್ದು ಪೆಂಡಿ ಕಟ್ಟಿಕೊಂಡು ಗುಬ್ಬಿ ಪ್ಯಾಟ್ಗೆ ಹೊಯ್ದು ಮಾರುತ್ತಿದ್ಲು. ಏಳೆಂಟು ಕಾಸು ದುಡ್ಡು ಬಂದದ್ದನ್ನು ಅವ್ವನಿಗೆ ಕೊಡುವಳು. ಸ್ಕೂಲಿಗೆ ಹೋಗುವ ಹುಡುಗಿಯರನ್ನ ನೋಡಿ 'ಅವ್ವ ಅವ್ವ ನಾನು ಸಾಲಿಗೆ ಹೋಗ್ತಿನಿ, ಹೋಗ್ತೀನಿ, ಅಂತ ಹಠ ಹಿಡಿದ ಚಿಕ್ಕ ತಿಮ್ಮಕ್ಕನಿಗೆ ಮುದ್ದೆಕೋಲಿನಾಗೆ ನಾಲ್ಕು ಏಟು ಕೊಟ್ಟು, 'ತಿನ್ನಲಿಕ್ಕೆ ಕೂಳಿಲ್ಲ ಅಂತದ್ದರಲ್ಲಿ ಸಾಲಿಗೆ ಹೋಗ್ತಿಯೇನೆ ಸಾಲಿಗೆ' ಅಂತ ಬೈದ್ಲು. ಸಣ್ಣ ಗಡಿಗೆ ಕೊಟ್ಟು ನೀರು ತರ್ಲಿಕ್ಕೆ ಕಳಿಸಿದ್ಲು. ಅತ್ತಕ್ಕಂತಾ ನೀರು ತರಲು ಹೋದ್ಲು ಚಿಕ್ಕತಿಮ್ಮಕ್ಕ. ದಿನಾಲು ತಿಮ್ಮಕ್ಕ ನೀರು ತರ್ಬೇಕು, ಗಂಗಮ್ಮ ಹೊಂಗೆ, ಟಂಕಟಿ, ಲಂಟನ್ ಕಟ್ಟಿಗೆ ಜೋಡಿಸಬೇಕು. ಜೊತೆಗೆ ಅಕ್ಕತಂಗಿ ಮುತ್ತುಗದ ಎಲೆ ಕೊಯ್ದುಕೊಂಡು ಬಂದು ಅವ್ವಗೆ ಕೊಡಬೇಕು. ಹಿಂಗೆ ಮೂರು ವರ್ಷಗಳ ಕಾಲ ತಿಮ್ಮಕ್ಕ ಕೆಲಸ ಮಾಡಿದ್ಲು.

ಒಂದು ದಿನ ತಿಮ್ಮಕ್ಕ ಮುತ್ತುಗದ ಎಲೆ ಕೊಯ್ದುಕೊಂಡು ಗುಬ್ಬಿ ಪ್ಯಾಟ್ಗೆ ಹೋದ್ಲು. ಅಲ್ಲಿ ಅವುಗಳನ್ನು ಮಾರಾಟ ಮಾಡಿ ಕಾಸು ತೆಗೆದುಕೊಂಡು ಬಂದು ಅವ್ವಗೆ ಆರುಕಾಸು ಕೊಟ್ಲು. ಇನ್ನು ಮೂರು ಕಾಸು ಉಳಿಸಿಕೊಂಡದ್ದನ್ನು ಗಂಗಮ್ಮನಿಂದ ತಿಳ್ಕೊಂಡ ವಿಜಿಯಮ್ಮ ಕಸಬರಿಕೆ ತಕ್ಕೊಂಡು ಚೆನ್ನಾಗಿ ಬಾರಿಸಿದ್ಲು. ಆ ಹೊಡೆತ ತಡೆದುಕೊಳ್ಳಲಾರದೆ ಅರುಚಿಕೊಳ್ಳುತ್ತಾ ಓಡಿ ಹೋಗಿ ಸಂಜೆ ಏಳು ಗಂಟೆ ಹೊತ್ತಿಗೆ ಮುತ್ಲಹಳ್ಳಿ ಮುತ್ತೇಗೌಡರ ದನದ ಕೊಟ್ಟಿಗೆ ಸೇರಿದ್ಲು. ಮಗಳ ದೈನ್ಯ ಸ್ಥಿತಿ ಕಂಡ ಚಿಕ್ಕರಂಗಯ್ಯ ತುಂಬಾ ವ್ಯಥೆಪಟ್ಟನು. ಗೌಡ್ರ ಮನೆಯಲ್ಲಿ ಹೊಟ್ಟೆ ತುಂಬಾ ಉಣುಸಿದ. ನರಸಮ್ಮ ತಿಮ್ಮಕ್ಕನ್ನ ಕರೆದು ತನ್ನ ಮಗಳ ಲಂಗ ಜಾಕೀಟು ಕೊಟ್ಟರು. 'ಅವ್ವರೇ....ಅವ್ವರೇ.... ನಮ್ಮವ್ವ ಬಾರಿ ಹೊಡದ್ಲು. ನಾ ಅಲ್ಲಿಗೆ ಹೋಗಲ್ರವ್ವ. ನಮಪ್ಪನಜತೆಗೆ ಇರ್ತಿನಿ ಎಂದ್ಲು.' 'ಮನದೊಳಗೆ ನಕ್ಕ ನರಸಮ್ಮ ಹೊತ್ಕೊಳ್ಳಕ್ಕೆ ದುಪ್ಪಡಿ ಕೊಟ್ಟು "ನಿಮ್ಮಪ್ಪನ ಹತ್ತಿರ ಇರು" ಅಂದು ಹೋದರು.

ಚಿಕ್ಕರಂಗಯ್ಯ ಮಗಳ್ನ ತನ್ನ ಜೊತೆಯಲ್ಲೇ ಕಾಪಾಡಿದ. ತಿಮ್ಮಕ್ಕ ಯಜಮಾನಿ ನರಸಮ್ಮನಿಗೆ ತುಂಬಾ ಹೊಂದಿಕೊಂಡ್ಲು, ಕಾಳು ಹಸನು ಮಾಡೋದು, ನೀರು ತರೋದು, ಕಟ್ಟಿಗೆ

ಜೋಡಿಸಿಕೊಡೋದು ತಿಮ್ಮಕ್ಕನ ನಿತ್ಯದ ಕೆಲಸವಾಗಿತ್ತು. ನರಸಮ್ಮ ತಿಮ್ಮಕ್ಕನ್ನ ಮಗಳು ತರಹ ನೋಡಿಕೊಳ್ಳುತ್ತಿದ್ದರು. ತಿಮ್ಮಕ್ಕ 'ನರಸಮ್ಮ'ನ ನನ್ನ ಸಾಕು ತಾಯಿ ಅಂತ ಈಗಲೂ ನೆನಪಿಸಿಕೊಳ್ಳುತ್ತಾರೆ. ಹಡೆದವ್ವ ಹೊಡೆದು ಬಡಿದರೆ, ಸಾಕು ತಾಯಿ ನರಸಮ್ಮ ಪ್ರೀತಿಯನ್ನು ಉಣಬಡಿಸಿದರು. ಒಳ್ಳೆಯ ನಡೆ–ನುಡಿ ಕಲಿಸಿದರು. ನರಸಮ್ಮನ ಸಾತ್ವಿಕತೆ, ಪ್ರೇಮಮಯ ನಡತೆ, ಭಿನ್ನಭೇದ ಮಾಡದ ಮನೋಭಾವ, ಅನುಕಂಪ, ಕರುಣೆ, ನೊಂದವರನ್ನು ಕಂಡರೆ ವ್ಯಥೆಪಟ್ಟು ಸಹಾಯ ಮಾಡುವ ಮನೋಧರ್ಮ ಬಾಲಕಿ ತಿಮ್ಮಕ್ಕನಿಗೆ ಅಗಾಧ ಪ್ರಭಾವ ಬೀರಿವೆ. ಮಾಡಿದ ಸಾಲ ತೀರಿದ ಮೇಲೆ ಚಿಕ್ಕರಂಗಯ್ಯ ಊರಿಗೆ ಹೋದರು. ಇತ್ತ ಚಿಕ್ಕತಿಮ್ಮಕ್ಕನ್ನ ನರಸಮ್ಮ ಇನ್ನೆರೆಡು ವರ್ಷ ಇರ್‍ಲಿ ಅಂತ ಅಲ್ಲಿಯೆ ಉಳಿಸಿಕೊಂಡರು. ಹಸಿವು ಇಲ್ದಂಗೆ ನರಸಮ್ಮನ ಮನೆಯಲ್ಲಿ ತಿಮ್ಮಕ್ಕ ಕಾಲಕಳೆದರು.

೧

## ೫. ತ್ಯಾಗಜೀವಿಗಳ ಸಂಗಮ

**ನ**ರಸಮ್ಮನ ಮನೆಯಿಂದ ತಾಯಿ ಮನೆಗೆ ತಿಮ್ಮಕ್ಕ ಬಂದರು. ಅಲ್ಲಿ ತಮ್ಮಂದಿರು ಅಕ್ಕ, ತಂಗಿಯರ ಜತೆ ಅನ್ನಕ್ಕಾಗಿ ಕಿತ್ತಾಡುತ್ತಿದ್ದರು. ದಿನಾಲು ಕೂಲಿ ಮಾಡುತ್ತಿದ್ದರು, ಅಡವಿಗೆ ಹೋಗಿ ಸೌದೆ ಆರಿಸಿಕೊಂಡು ಬಂದು ಗುಬ್ಬಿ ಪೇಟೆಗೆ ಹೋಗಿ ಮಾರುತ್ತಿದ್ದರು. ಬಂದ ದುಡ್ಡನ್ನ ಅವ್ವಗೆ ಕೊಡುತ್ತಿದ್ದರು ತಿಮ್ಮಕ್ಕ. ಚಿಕ್ಕರಂಗಯ್ಯ ದೊಡ್ಡ ಮಗಳು ಗಂಗಮ್ಮನ ಮದುವೆ ಮಾಡಿದರು. ಒಮ್ಮೆ ಸಂಬಂಧಿಕರ ಮದುವೆಗೆ ತಿಮ್ಮಕ್ಕಳನ್ನು ಕರೆದುಕೊಂಡು ಚಿಕ್ಕರಂಗಯ್ಯ ಹೋಗಿದ್ದ. ಅಷ್ಟೊತ್ತಿಗೆ ಆಗ್ಲೆ ಋತುಮತಿ ಆಗಿದ್ದ ತಿಮ್ಮಕ್ಕನ ನೋಡಿದ ಹುಲಿಕಲ್ಲು ನಂಜಮ್ಮ ತನ್ನ ಮಗ ಬಿಕ್ಕಲುಚಿಕ್ಕಯ್ಯನಿಗೆ ಕೊಡುವಂತೆ ಕೇಳಿದ್ರು, ಅದಕ್ಕೆ ಚಿಕ್ಕರಂಗಯ್ಯ ನಮ್ಮೂರಿಗೆ ಬನ್ರಿ. ಮಾತಾಡೋಣ ಅಂದ್ರು. ಇನ್ನೊಮ್ಮೆ ನರಗನಹಳ್ಳಿಯಲ್ಲಿ ಸಂಬಂಧಿಕರ ಶುಭ ಕಾರ್ಯಕ್ಕೆ ಚಿಕ್ಕರಂಗಯ್ಯ, ತಿಮ್ಮಕ್ಕ ಹಾಗೂ ಹಿರಿಯರು ಹೋಗಿದ್ರು, ಅಲ್ಲಿಗೆ ಹುಲಿಕಲ್ಲು ನಂಜಮ್ಮ ಮತ್ತು ಅವರ ಕಡೆ ಹಿರಿಯರು ಬಂದಿದ್ದರು. ಎಲ್ಲರು ಸೇರಿದ್ದರಿಂದ ಅಂದೇ ಮಾತುಕತೆ ನಡೆಯಿತು. ಮಾರನೇ ದಿನ ಪುರೋಹಿತರ ಬಳಿ ಹೋಗಿ ಹೆಣ್ಣು–ಗಂಡಿನ ಸಾಲಾವಳಿ ಕೇಳಿದರು. ಗಣಕೂಟ ಚನ್ನಾಗಿ ಕೂಡಿ ಬಂದಿದೆ. ಇಬ್ಬರಿಗೂ ಸೇರಿ ಇಪ್ಪತ್ತೇಳು ಗುಣಗಳು ಬಂದಿವೆ. ಮದುವೆ ಮಾಡಬಹುದೆಂದು ಪುರೋಹಿತರು ಹೇಳಿದರು.

ನಂದ್ಯಯ್ಯ–ನಂಜಮ್ಮನ ಮಗ ಬಿಕ್ಕಲುಚಿಕ್ಕಯ್ಯನು ಅಷ್ಟೊತ್ತಿಗೆ ಬಹಳಷ್ಟು ಹೆಣ್ಣುಗಳನ್ನು ನೋಡಿದ್ದ. ಯಾವುದು ಹೊಂದಿಕೆಯಾಗಿರಲಿಲ್ಲ. ಚಿಕ್ಕತಿಮ್ಮಕ್ಕಳನ್ನು ನೋಡಿದೊಡನೆ ಇರಲಿ ಅಂತ ಒಪ್ಪಿಕೊಂಡುಬಿಟ್ಟ. ಕಟ್ಟುಮಸ್ತಾಗಿದ್ದ ಬಿಕ್ಕಲು ಚಿಕ್ಕಯ್ಯ ಎಣ್ಣೆಗೆಂಪು ಬಣ್ಣದವನಾಗಿದ್ದ. ಚೆನ್ನಾಗಿದ್ದ. ಚಿಕ್ಕತಿಮ್ಮಕ್ಕ ಹತ್ತೊಂಬತ್ತರ ಹರೆಯದ ಹುಡುಗಿ. ದುಂಡಗಿದ್ದರು, ಕೆಂಪಗೆ ಕುಳ್ಳಕ್ಕೆ ಇದ್ದುದ್ದರಿಂದ ತುಂಬಾ ಸುಂದರವಾಗಿ ಕಾಣುತ್ತಿದ್ದರು. ಹೆಣ್ಣು–ಗಂಡಿನ ಸಂಬಂಧಿಕರಿಗೆಲ್ಲ ಸಂಬಂಧ ಒಪ್ಪಿಗೆ ಆಯಿತು.

ಇಂದಿನ ಬೆಂಗಳೂರು ಜಿಲ್ಲೆಯ 'ಮಾಗಡಿ' ಪುರಾಣ ಯುಗದಲ್ಲಿ ಮಾಂಡವ್ಯಮುನಿಗಳ ಪುಣ್ಯಸ್ಥಳವಾಗಿತ್ತೆಂದು ಹಾಗೂ ಕ್ರಿ.ಶ.೧೧೩೯ರಲ್ಲಿ ಚೋಳರಾಜನೊಬ್ಬನಿಂದ ಸ್ಥಾಪಿತವಾಯಿತೆಂಬ ಐತಿಹ್ಯವಿದೆ. ಈ ಪ್ರದೇಶವು ಹೊಯ್ಸಳರ, ವಿಜಯನಗರದ ಅರಸರ ಆಳ್ವಿಕೆಗೆ ಒಳಪಟ್ಟ ಪ್ರದೇಶವಾಗಿದ್ದು, ಇಮ್ಮಡಿ ಕೆಂಪೇಗೌಡ ಬೆಂಗಳೂರನ್ನು ರಾಜಧಾನಿಯನ್ನಾಗಿಸಿಕೊಂಡು

೧೪ ವರ್ಷಗಳ ಕಾಲ ಈ ಪ್ರದೇಶವನ್ನು ಆಳ್ವಿಕೆ ಮಾಡಿದ. ಈತನು ಕೋಟೆ, ಕಂದಕ, ದೇಗುಲ, ಕೆರೆ–ಕಟ್ಟೆಗಳನ್ನು ನಿರ್ಮಿಸಿದ. ಕ್ರಿ.ಶ. ೧೬೩೮ರಲ್ಲಿ ರಾಜಧಾನಿಯನ್ನೇ ಮಾಗಡಿಗೆ ಸ್ಥಳಾಂತರಿಸಿಕೊಂಡು ೧೮ವರ್ಷಗಳ ಕಾಲ ಆಳ್ವಿಕೆ ಮಾಡಿದ. ಈತನು ಮತ್ತು ಈತನ ವಂಶಜರು 'ಮಾಗಡಿ ಕೆಂಪೇಗೌಡರೆಂದು' ಪ್ರಸಿದ್ಧರಾದರು. ದಕ್ಷಿಣದಲ್ಲಿ ರಾಮನಗರ ತಾಲ್ಲೂಕು, ಪೂರ್ವದಲ್ಲಿ ಬೆಂಗಳೂರು ದಕ್ಷಿಣ, ಬೆಂಗಳೂರು ಉತ್ತರ ಮತ್ತು ನೆಲಮಂಗಲ ತಾಲ್ಲೂಕುಗಳು, ಉತ್ತರದಲ್ಲಿ ತುಮಕೂರು ತಾಲ್ಲೂಕು, ಪಶ್ಚಿಮದಲ್ಲಿ ಕುಣಿಗಲ್ಲು ತಾಲ್ಲೂಕುಗಳ ನಡುವಿನ ಪ್ರದೇಶವೇ 'ಮಾಗಡಿ ತಾಲ್ಲೂಕು'. ಈ ತಾಲ್ಲೂಕು ೯೧೩.೩ ಚದರ ಕಿ.ಮೀ.ವಿಸ್ತೀರ್ಣವನ್ನು ಹೊಂದಿದೆ. ಕಣ್ವ ಮತ್ತು ಅರ್ಕಾವತಿ ನದಿಗಳು ಇಲ್ಲಿ ಹರಿಯುತ್ತಿವೆ. ಇಲ್ಲಿನ ಸಿದ್ದೇಶ್ವರ ಬೆಟ್ಟ ಮತ್ತು ಸಾವನದುರ್ಗ ಪ್ರದೇಶ ಅರಣ್ಯವನ್ನೊಂದಿದೆ. ರಾಗಿ, ಭತ್ತ, ಕಬ್ಬು, ತೊಗರಿ, ಅವರೆ ಮೊದಲಾದ ಬೆಳೆಗಳನ್ನು ಇಲ್ಲಿ ಬೆಳೆಯಲಾಗುತ್ತದೆ.

"ಮಾಗಡಿಗೆ ವಾಯುವ್ಯದಲ್ಲಿರುವ ಹುಲಿಕಲ್ಲಿನಲ್ಲಿ ಅನೇಕ ಶಿಥಿಲ ದೇವಾಲಯಗಳೂ, ಮಂಟಪಗಳೂ, ಶಾಸನಗಳೂ, ಕೆಲವು ವೀರಗಲ್ಲುಗಳೂ ಇವೆ. ಗ್ರಾಮದ ಹತ್ತಿರವಿರುವ ರಾಮಲಿಂಗಬೆಟ್ಟದ ಬುಡದಲ್ಲಿ ಒಬ್ಬ ಯತಿ ಇದ್ದನೆಂದೂ ಅವನ ಹಸುವನ್ನು ಹುಲಿಯೊಂದು ಕೊಂದು ಹಾಕಿತೆಂದೂ, ಇದನ್ನು ತಿಳಿದ ಹೊಯ್ಸಳ ದೊರೆ ಬೆಟ್ಟದಲ್ಲಿ ಕೋಟೆ ಕಟ್ಟಿಸಿ (೧೩೯೯) 'ಹುಲಿಕೊಲ್ಲು' ಎಂದು ಹೆಸರಿಟ್ಟನೆಂದೂ ಕ್ರಮೇಣ ಅದು 'ಹುಲಿಕಲ್ಲು' ಆಯಿತೆಂದು ಹೇಳುವರು". (ಕನ್ನಡವಿಶ್ವಕೋಶ, ಮೈಸೂರು) ಇಂತಹ ಐತಿಹಾಸಿಕ ಮಹತ್ವವನ್ನುಳ್ಳ 'ಹುಲಿಕಲ್ಲು' ತಿಮ್ಮಕ್ಕನವರ ಪತಿ ಬಿಕ್ಕಲುಚಿಕ್ಕಯ್ಯನ ಊರು. ಇದೇ ಸಾಲುಮರದ ತಿಮ್ಮಕ್ಕನ ಸಾಧನ ಕ್ಷೇತ್ರವಾಗಿದೆ.

ಕೈಗಡಗ, ಕಾಲಕಡಗ, ೨೦ರೂಪಾಯಿ ತೆರ, ರಾಗಿ, ಅಕ್ಕಿ, ಗೆಜ್ಜೆಪಟ್ಟಿ, ಸುತ್ತು, ಧಾರೆಕಡಗ, ಧಾರೆಸೀರೆ, ಮದುವೆ ಸೀರೆಗಳನ್ನು ಹೆಣ್ಣಿನವರಿಗೆ ಗಂಡಿನವರು ಕೊಡಬೇಕು. ಹೆಣ್ಣಿನವರು ಮದಲಿಂಗನ ಬಟ್ಟೆಗಳನ್ನು ಗಂಡಿಗೆ ಕೊಟ್ಟು ಹೆಣ್ಣನ್ನು ಹುಲಿಕಲ್ಲಿಗೆ ಕರೆದುಕೊಂಡು ಬಂದು ಮದುವೆ ಮಾಡಬೇಕೆಂದು ಮಾತುಕತೆ ಆಯಿತು.

೧೯೪೯ರ ಮಾರ್ಚ್೪ರಂದು ಸಂಬಂಧಿಕರ ಸಮ್ಮುಖದಲ್ಲಿ ಸುಸೂತ್ರವಾಗಿ ಮದುವೆ ಆಯಿತು. ಬುಧವಾರ ಬೆಳ್ಳಗೆ ಆಲದ ಕೊಂಬೆಯಮ್ಮನ ದೇವಸ್ಥಾನಕ್ಕೆ ಮದಲಿಂಗಿತ್ತಿ ತಿಮ್ಮಕ್ಕಳನ್ನು ಕರೆದುಕೊಂಡು ಹೋಗಿ ಆಲದ ಮರದಡಿ ಕುಳ್ಳಿರಿಸಿ, ಆಲದಮರಕ್ಕೆ ಮತ್ತು ಆಲದ ಕೊಂಬೆಯಮ್ಮ ದೇವಿಗೆ ಪೂಜೆ ಮಾಡಿದರು. ತಿಮ್ಮಕ್ಕನಿಗೆ ಅರಿಶಿಣ ಹಚ್ಚಿ, ಮುತ್ತೈದೆಯರು ಆರತಿ ಬೆಳಗಿದರು. ಅನಂತರ ಗಾಡಿಯಲ್ಲಿ ಮದಲಿಂಗಿತ್ತಿ ನೆಂಟರೆಲ್ಲ ಹುಲಿಕಲ್ಲಿಗೆ ಸಂಜೆ ಹೊತ್ತಿಗೆ ಬಂದರು.

ಗಂಡಿನವರು ಹೆಣ್ಣಿನವರನ್ನು ಎದುರುಗೊಳ್ಳುವ ಶಾಸ್ತ್ರಕ್ಕೆ ಬಿಕ್ಕಲುಚಿಕ್ಕಯ್ಯನ ಸೋದರ ಸಂಬಂಧಿಯಾದ ಓಬಯ್ಯಗೆ ಸೀರೆ ಉಡುಸಿ, ಜಾಕೀಟು ತೊಡಿಸಿ ಓಲಗ ಮಾಡಿಕೊಂಡು ಹೆಣ್ಣಿನವರ ಹತ್ತಿರ ಬಂದ್ರು. ಕಳಸ ಹೂಡಿ, ಪೂಜೆ ಮಾಡಿದರು. ಮದಲಿಂಗಿತ್ತಿಗೆ ತೆಂಗಿನ ಕಾಯಿಯಿಂದ ನಿವಾಳಿಸಿದರು. ನಿಂಬೆ ಹಣ್ಣಿನಿಂದ ನಿವಾಳಿಸಿ, ಕಣ್ಣಾಸರ ತೆಗೆದರು. ಹೆಣ್ಣಿನ



ಕಡೆಯೋರು, ಗಂಡಿನ ಕಡೆಯೋರು ಪರಸ್ಪರ ಅಕ್ಕಿ ಬೀರಾಟ ಶಾಸ್ತ್ರ ಮುಗಿಸಿಕೊಂಡು; ಮದುವೆ ಮನೆ ಹತ್ತಿರ ಬಂದ ನೆಂಟರಿಗೆಲ್ಲ ಗೋದಿ ಉಗ್ಗಿ–ಅನ್ನ ಸಾಂಬಾರು ಊಟಕ್ಕೆ ಹಾಕಿದರು. ಊಟ ಆದ ನಂತರ ಮದುವೆ ಶಾಸ್ತ್ರ ಕಾರ್ಯಗಳು ರಾತ್ರಿ ಹತ್ತು ಗಂಟೆಯಿಂದ ಪ್ರಾರಂಭ ಮಾಡಿದರು. ಕರೆಕಂಬಳಿ ಹಾಸಿ, ಅದರ ಮೇಲೆ ಅಕ್ಕಿಕಾಳು ಹಾಕಿ, ವಿಭೂತಿ, ಅರಿಶಿನ, ಕುಂಕುಮ ಹಚ್ಚಿ, ನಾಲ್ಕು ಮೂಲೆಗೆ ವೀಳ್ಯೆದೆಲೆ ಅಡಿಕೆ ಇಟ್ಟು ಪೂಜೆ ಮಾಡಿದರು. ಸಂಬಂಧಿಕರಲ್ಲಿ ಬೆಡಗಿಗೆ ಒಬ್ಬೊಬ್ಬ ಹಿರಿಯರನ್ನು ಹಸಿರು ವೀಳ್ಯೆಗದ್ದಿಗೆಗೆ ಕರೆದರು. ಹಿರಿಯರೆಲ್ಲರ ಸಮ್ಮುಖದಲ್ಲಿ ಚಿಕ್ಕರಂಗಯ್ಯ–ವಿಜಯಮ್ಮನ ಮಗಳು ಚಿಕ್ಕತಿಮ್ಮಕ್ಕಳನ್ನು ಹುಲಿಕಲ್ಲು ನಂದ್ಯಯ್ಯ–ನಂಜಮ್ಮನ ಮಗ ಬಿಕ್ಕಲುಚಿಕ್ಕಯ್ಯನಿಗೆ ನೀಡಿದೆ ಅಂತ ಹೆಣ್ಣಿನ ಕಡೆಯ ಯಜಮಾನರು ಗಂಡಿನ ಕಡೆ ಯಜಮಾನರಿಗೆ ವೀಳ್ಯೆದೆಳೆ ಅಡಿಕೆ ಕೊಟ್ಟರು. ಅನಂತರ ಜನಾಂಗದ ಮುಚ್ಚಲರು, ಹರ್ತೇರು, ಬೆಳಗೆರೆಯರು, ಗಂಜಿಗುಂಟೆರು ಅಲಕೂರಿನವರು, ಬೈಲುಮಗ್ಗದವರು ಮೊದಲಾದ ಕಟ್ಟೆಸ್ಥರಿಗೆಲ್ಲ ವೀಳ್ಯೆದೆಲೆ ಅಡಿಕೆ ಹಂಚಿದರು.

ಹೆಣ್ಣು ಮತ್ತು ಗಂಡಿನ ಕಡೆಯೋರು ಐಯನೋರು ಮನೆಗೆ ಲಗ್ನ ಕಟ್ಟಿಸಲು ಅಡಿಕೆ, ಎಲೆ, ಹಣ್ಣುಕಾಯಿ, ಅರಿಶಿಣಕೊಂಬು, ಕುರಿ ಉಣ್ಣೆ, ಅಂಗನೂಲು, ಕುಂಕುಮ–ಇವೆಲ್ಲವುಗಳನ್ನು ಹೊಸ ನಿಬ್ಬಣ ಪುಟ್ಟಿಯಲ್ಲಿಟ್ಟುಕೊಂಡು ಹೋದರು. ಅಲ್ಲಿ ಐನೋರು ಪೂಜೆ ಮಾಡಿ ಹೆಣ್ಣಿನ ಕಡೆ ಐದು ಜನ, ಗಂಡಿನ ಕಡೆ ಐದು ಜನ ಹೆಸರು ಬಲದ ಮೇಲೆ ಆಯ್ಕೆ ಮಾಡಿ ಅವರಿಗೆ ಕಂಕಣ ಕಟ್ಟಿದರು. ಹೆಣ್ಣು–ಗಂಡಿಗೆ ಗಟ್ಟಿ ಕಂಕಣ ಮಾಡಿಕೊಟ್ಟು, ಹೆಸರು ಬಲದ ಮೇಲೆ ಹೆಣ್ಣಿಗೆ ಇಂತೋರು ಗಂಡಿಗೆ ಇಂತೋರು ಮೊದಲು ಅರಿಶಿಣಎಣ್ಣೆ ಹಾಕಬೇಕೆಂದು ತಿಳಿಸಿದರು. ಐನೋರು ಮನೆಯಿಂದ ಬಂದವರೇ ಹಸಿದಾರ, ವೀಳ್ಯೆದೆಲೆ, ಅಡಿಕೆ, ಹಾಲು, ತುಪ್ಪ, ಹಸಿಹಿಟ್ಟು, ಚಿಗುಳಿ, ಹಣ್ಣು, ಕಾಯಿ ತೆಗೆದುಕೊಂಡು ಗಂಡು–ಹೆಣ್ಣಿಗೆ ಸ್ನಾನ ಮಾಡಿಸಿ ಬಟ್ಟೆ ತೊಡಿಸಿದರು. ನಿಂಬೆಹಣ್ಣು ಸಿಕ್ಕಿಸಿದ ಬಾಕನ್ನು ಕೊಟ್ಟು, ಕರೆಕಂಬಳಿ ಹೊದ್ದಿಸಿದರು. ಹೆಣ್ಣಿಗೂ ಕರೆಕಂಬಳಿ ಹೊದ್ದಿಸಿ, ಕೈಯಲ್ಲಿ ನಿಂಬೆಹಣ್ಣು ಹಿಡಿದುಕೊಳ್ಳಲು ಕೊಟ್ಟು, ವಾದ್ಯಗಳನ್ನು ನುಡಿಸಿಕೊಳ್ಳುತ್ತಾ ಹುತ್ತಕ್ಕೆ ಕರೆದುಕೊಂಡು ಹೋದರು. ಹುತ್ತದ ಮುಂಭಾಗ ಬೆನಕಪ್ಪನ್ನ ಹೂಡಿ ಅರಿಶಿಣ–ಕುಂಕುಮ, ಅಂಗನೂಲು, ಅಕ್ಷತೆ ಇಟ್ಟು ಗಂಡು–ಹೆಣ್ಣಿನಿಂದ ಪೂಜೆ ಮಾಡಿಸಿದರು. ಹುತ್ತದ ಕೋವೆಗೆ ಹಾಲು–ತುಪ್ಪ ಬಿಡಿಸಿದರು. ಅನಂತರ ಮದುವೆ ಮನೆಗೆ ಕರೆದುಕೊಂಡು ಬಂದು ಗಂಡಿನ ಮನೆಯೊಳಗೆ ಹೆಣ್ಣಿನವರು, ಇನ್ನೊಂದು ಮನೆಯಲ್ಲಿ ಗಂಡಿನವರು ನೆಲ ಬಳಿದು, ಮೂರು ಗುಂಪು ಅಕ್ಕಿ ಹಾಕಿ, ವಿಭೂತಿ, ಅರಿಶಿಣ–ಕುಂಕುಮ ಹಚ್ಚಿ, ಕಂಕಣ ಕಟ್ಟಿದರು. ಮದಲಿಂಗಿತ್ತಿ ಸೇರಿದಂತೆ ಐದು ಮಂದಿ ಮುತ್ತೈದೆಯರೊಂದಿಗೆ, ಮದಲಿಂಗ ಸೇರಿದಂತೆ ಐದು ಮಂದಿ ಮುತ್ತೈದೆಯರೊಂದಿಗೆ ಸೇರಿ

ಸುವ್ವೆಂದು ಪಾಡಿರಿ
ಸುಗುಣ ಮುತ್ತೈದೆಯರು
ಸುವ್ವೆಂದು ಪಾಡಿರಿ ಸುಭದಿಂದ
ಸುವ್ವಿ ಬಾ ಸುವ್ವಿ............. ॥ಸು॥

ನೆಲ್ಲಕ್ಕಿ ಕುಟ್ಟೋಕೆ
ಕಲ್ಲೊಳ್ಳು ಕೊಡಿರಮ್ಮ
ಕಲ್ಯಾಣ ನಮ್ಮ ಮನೆಯಾಗೆ ॥ಸುವ್ವಿ॥
ಕಲ್ಯಾಣ ನಮ್ಮ ಮನೆಯಾಗೆ
ಬಿಕ್ಕಲುಚಿಕ್ಕಯ್ಯ ಬೆಳ್ಳಿ ಮೂಡುವೆಗೆ
ಮದುಮಗ ..............॥ಸುವ್ವಿ॥

ನೆಲಕ್ಕಿ ತೊಳಸಕ್ಕೆ
ಮಣ್ಣೊಳ್ಳು ಕೊಡಿರಮ್ಮ
ಸೋಬಾನ ನಮ್ಮ ಮನೆಯಾಗೆ ॥ಸುವ್ವಿ॥

ಸೋಬಾನ ನಮ್ಮ ಮನೆಯಾಗ
ತಿಮ್ಮಕ್ಕ ಸೂರ್ಯ ಮೂಡೋತ್ತಿಗೆ
ಮದುಮಗಳು ಸುವ್ವಿ ಸುವ್ವಿ ......ಬಾ ॥ಸು॥

ಎಂದು ಹಾಡನ್ನು ಹಾಡುತ್ತ ಒನಕೆಯಿಂದ ಅಕ್ಕಿ ಕುಟ್ಟುವರು. ನಂತರ ಪೂಜೆ ಮಾಡಿಸುವರು. ಗಂಡಿಗೆ ಐದು ಅಕ್ಕಿ ಹಸೆ ಮತ್ತು ಹೆಣ್ಣಿಗೆ ನಾಲ್ಕು ಅಕ್ಕಿ ಹಸೆಗಳನ್ನು ಪ್ರತ್ಯೇಕವಾಗಿ ಹಾಕಿ ಪೂಜೆ ಮಾಡಿ, ಆ ಅಕ್ಕಿ ಹಸೆ ಮೇಲೆ ಗಂಡು ಮತ್ತು ಹೆಣ್ಣು ಕುಳ್ಳಿರಿಸಿ, ತಿಮ್ಮಕ್ಕನ ಹೆಸರಿಗೆ ಚಂದ್ರಮ್ಮ ಎಂಬ ಹೆಸರ ಬಲ ಬಂದಿರುವುದರಿಂದ ಚಂದ್ರಮ್ಮ, ಬಿಕ್ಕಲುಚಿಕ್ಕಯ್ಯಗೆ ಲಕ್ಷ್ಮಮ್ಮನ ಹೆಸರ ಬಲ ಬಂದಿರುವುದರಿಂದ ಲಕ್ಷ್ಮಮ್ಮ ಮೊಟ್ಟ ಮೊದಲಿಗೆ ಅರಿಶಿಣದ ಎಣ್ಣೆಯನ್ನು ಕೈಕಾಲು ಮುಖಕ್ಕೆ ಲೇಪಿಸುವರು. ಅನಂತರ ಐದು ಜನ ಮುತ್ತೈದೆಯರು

ನೆಲ್ಲಕ್ಕಿ ಹಸಿಯ। ಬಲ್ಲಮ್ಮ
ನೀ ಬರೆಯೇ । ಬೆಲ್ಲದ ಅಚ್ಚುಗಳ
ಕೊರೆದಂಗೆ ಸೋಬಾನ॥

ನಾಕು ಬರೆಯೊಂದರೆ
ನಲವತ್ತು ಬರೆದಳೋ। ನಲವತ್ತರ ನಡುವೆ
ಕೊಳಲುಡಿ। ನಲವತ್ತರ ನಡುವೆ ನಾಲ್ಕು ದಿಕ್ಕಿನ
ಸೀತೆ ಸೆರಗ ಬರೆದರೆ ಸೋಬಾನ॥

ಒಂದು ಬರೆಯಂದರೆ
ಒಂಬತ್ತು ಬರೆದಳೆ। ಒಂಬತ್ತರ ನಡುವೆ
ಕೊಳಲುಡಿ ಸೋಬಾನ
ಒಂಬತ್ತರ ನಡುವೆ ಕೊಳಲುಡಿ
ನಾಲ್ಕು ದಿಕ್ಕಿನ ದ್ರೌಪದಿ ಸೆರಗ
ಬರೆದರೋ ಸೋಬಾನ॥

ಎಂದು ಹಾಡುತ್ತಾ ಅರಿಶಿಣದ ಎಣ್ಣೆಯನ್ನು ಮದಲಿಂಗರಿಗೆ ಹಚ್ಚುವರು.



ಅನಂತರ ಗಂಡು–ಹೆಣ್ಣಿಗೆ ಪ್ರತ್ಯೇಕವಾಗಿ ಗಂಗಮ್ಮ ದೇವಿಗೆ ಹೋಗಿ ಪೂಜೆ ಮಾಡಿಸಿಕೊಂಡು ಬರುವರು. ೪ ಕುಂಭದೊಳಗೆ ನೀರು ತುಂಬಿಕೊಂಡು ಮದುವೆ ಮನೆಮುಂದೆ ನಾಲ್ಕು ದಿಕ್ಕಿಗೆ ೪ ಕುಂಭಗಳನ್ನಿಟ್ಟು ಅವುಗಳಿಗೆ ೩ ಎಳೆಯ ದಾರವನ್ನು ಒಂಬತ್ತು ಸುತ್ತು ಸುತ್ತಿ ಅದರೊಳಗೆ ಗಂಡು ಮತ್ತು ಹೆಣ್ಣುಮಕ್ಕಳೊಂದಿಗೆ ಅವರ ಅತ್ತೆ–ಮಾವರನ್ನು ಸುರುಗೆಯೊಳಗೆ ಪ್ರವೇಶ ಮಾಡಿಸಿ, ಸುರುಗೆ ನೀರನ್ನು ಹಾಕುವರು. ಒಳಗೆ ಕರೆದುಕೊಂಡು ಹೋಗಿ ಹೊಸಬಟ್ಟೆಗಳನ್ನು ಉಡುಸಿ, ಮಹೂರ್ತಕ್ಕೆ ಹಂದರದಡಿಗೆ ಕರೆ ತರುವರು. ಐನೋರು ಗಂಡು–ಹೆಣ್ಣಿಗೆ ಹಿತೋಪದೇಶ ಮಾಡಿ ಬಿಕ್ಕಲುಚಿಕ್ಕಯ್ಯನಿಗೆ ಮತ್ತು ತಿಮ್ಮಕ್ಕಳಿಗೆ ಗಟ್ಟಿ ಕಂಕಣ ಕಟ್ಟಿ, ಸಂಬಂಧಿಕರಿಗೆಲ್ಲ ಅಕ್ಷತೆ ಕಾಳುಗಳನ್ನು ನೀಡಿ, ತಾಳಿಗೆ ಎಲ್ಲರಿಂದ ಶುಭಾಶಿರ್ವಾದಗಳನ್ನು ಪಡೆದು, ಬಿಕ್ಕಲು ಚಿಕ್ಕಯ್ಯನಿಂದ ತಿಮ್ಮಕ್ಕಳ ಕೊರಳಿಗೆ ತಾಳಿಯನ್ನು ಕಟ್ಟಿಸಿದರು. ಸಂಬಂಧಿಕರೆಲ್ಲ ಅಕ್ಷತೆ ಕಾಳುಗಳನ್ನು ಹಾಕಿದರು. ಬಿಕ್ಕಲುಚಿಕ್ಕಯ್ಯನ ಕೈ ಮೇಲೆ ತಿಮ್ಮಕ್ಕನ ಕೈ ಹಿಡಿಸಿ ಅದರ ಮೇಲೆ ತೆಂಗಿನ ಕಾಯಿ ಕೊಟ್ಟು ಅದಕ್ಕೆ ಹಾಲು–ತುಪ್ಪವನ್ನು ಸಂಬಂಧಿಕರೆಲ್ಲ ಬಿಟ್ಟು ಶುಭಹಾರೈಸಿದರು.  ಹೂವಿನ ಹಾರವನ್ನು ಚಿಕ್ಕಯ್ಯನಿಂದ ತಿಮ್ಮಕ್ಕಳಿಗೆ ಹಾಕಿಸಿದರು ಇಬ್ಬರ ಸೆರಗನ್ನು ಸೇರಿಸಿ ಬ್ರಹ್ಮಗಂಟು ಕಟ್ಟಿದರು. ಸೂರ್ಯ–ಚಂದ್ರರಿಗೆ ಕೈ ಮುಗಿಸಿ, ಗಂಡಿನ ಮನೆಯೊಳಗೆ ಕರೆದುಕೊಂಡು ಹೋಗುವರು. ಇತ್ತ ಹಂದರದಡಿಯಲ್ಲಿ ಬಂದ ಸಂಬಂಧಿಕರಿಗೆಲ್ಲ ಊಟ ಕೊಡುವರು. ಅತ್ತ ಚಿಕ್ಕಯ್ಯ–ತಿಮ್ಮಕ್ಕರನ್ನು ಹರಿಣೆದೀಪದ ಹತ್ತಿರ ಕುಳ್ಳಿರಿಸಿ, ಅನ್ನ, ಬೆಲ್ಲ, ತುಪ್ಪ, ಈರುಳ್ಳಿಯೊಂದಿಗೆ ಭೂಮವನ್ನು ಮಾಡಿ ಬಂಧುಗಳಿಗೆ ಹಂಚುವರು.

ಚಿಕ್ಕಯ್ಯ–ತಿಮ್ಮಕ್ಕರನ್ನು ಹಂದರದಡಿಯಲ್ಲಿ ಕುಳ್ಳಿರಿಸಿ ಹಂದರದ ಗಳಕ್ಕೆ ಕೊಬ್ಬರಿ ಕಟ್ಟಿ, ಇಳಿ ಬಿಟ್ಟು, ಇಬ್ಬರಲ್ಲಿ ಮೊದಲಿಗೆ ಯಾರು ತಿನ್ನುವರು ಎಂಬುದನ್ನು ತುಂಬಾ ಕುತೂಹಲದಿಂದ ನೋಡುವರು. ಮದಲಿಂಗನು ಮದಲಿಂಗಿತ್ತಿಗೆ ಕೊಬ್ಬರಿ ತಿನ್ನಿಸುವನು. ನಂತರ ಅಡಿಕೆಯಲ್ಲಿ ಸರಿ–ಬೆಸದ ಆಟವನ್ನು ಮದಲಿಂಗರಿಂದ ಆಡಿಸಿದರು. ಅದರಲ್ಲಿ ತಿಮ್ಮಕ್ಕ ಗೆದ್ದಳು. ಆಗ ಹೆಣ್ಣಿನ ಕಡೆಯೋರು ಖುಷಿಯಾದರು. ಸಂಜೆ ಹೊತ್ತಿನಲ್ಲಿ ಊರು ತುಂಬಾ ಮೆರವಣಿಗೆ ಮಾಡಿದರು.

ಮಾರನೆದಿನ ಬೆಳ್ಳಗ್ಗನೆ ಹಂದರದ ಒಂಬತ್ತು ಗುಟಗಳಿಗೆ ಮಣ್ಣಿನ ಉಂಡೆಗಳನ್ನು ಹಾಕಿರುವರು. ಅವುಗಳನ್ನು ಚಿಕ್ಕಯ್ಯನು ತುಳಿಯುವನು. ತಿಮ್ಮಕ್ಕ ಅವುಗಳೆನಲ್ಲ ಒಂದುಗೂಡಿಸಿಕೊಂಡು ಹಂದರದ ಮಧ್ಯಗೂಟದ ಹತ್ತಿರ ಕಟ್ಟೆ ಕಟ್ಟುವಳು. ಅಲ್ಲಿಗೂ ನಾಲ್ಕು ಸುರಿಗೆ ಕುಂಭಗಳನಿಟ್ಟು ಅವುಗಳ ಮೇಲೆ ಬಾಗಣದ ರೊಟ್ಟಿಗಳನ್ನಿಟ್ಟು ಮುತ್ತೈದೆಯರು ಪೂಜೆ ಮಾಡಿ, ಸುರಿಗೆಯಲ್ಲಿ ಕುಂತವರಿಗೆ, ಅರಿಶಿಣದ ಎಣ್ಣೆ ಹಾಕಿದವರಿಗೆ ಸುರಿಗೆ ಕುಂಭ, ಬಾಗಣದ ರೊಟ್ಟಿಗಳನ್ನು ಕೊಟ್ಟು, ಹತ್ತಿ ಮತ್ತು ಆಲದಮರದ ಸಣ್ಣ ತುಂಡುಗಳಿಗೆ ಅರಿಶಿನ ಹಚ್ಚಿ ಉಡುದಾರ ಕಟ್ಟಿ, ತೊಟ್ಟಿಲೊಳಗೆ ಹಾಕಿ ಚಿಕ್ಕಯ್ಯ–ತಿಮ್ಮಕ್ಕ ಜೋಗುಳ ಹೇಳುತ್ತಾ ತೂಗುವರು.

ಮುತ್ತಿನ ಸೆಟಿಗಾಗೆ
ರತ್ನದ ಗುಗ್ಗರಿ ಹಾಕಿ

ಅತ್ತಿಗೆ ಮಗನ ಹೆಸರ ನಾ ಇಡ ಬಂದೆ
ಜೋ ಜೋ ಜೋ ಜೋ..................॥

ಚಿನ್ನದ ಸೆಟೆಗಾಗೆ
ರತ್ನದ ಗುಗ್ಗರಿ ಹಾಕಿ
ನಾದಿನಿ ಮಗನ ಹೆಸರ ನಾ ಇಡ ಬಂದೆ
ಜೋ ಜೋ ಜೋ ಜೋ............... ॥

ಎಂದು ಮುತ್ತೈದೆಯರು ಜೋಗುಳ ಹೇಳುವರು.

ಮದಲಿಂಗಿತ್ತಿ ತಿಮ್ಮಕ್ಕನಿಂದ ಗಂಗಾದೇವಿ ಪೂಜೆ ಮಾಡಿಸಿ, ಗಂಗಾದೇವಿಯನ್ನು ತಲೆಮೇಲೆ ಹೊರಿಸಿಕೊಂಡು ಬಂದರು. ಚಿಕ್ಕಯ್ಯ ಪೂಜೆ ಮಾಡಿ ಗಂಗಾದೇವಿಯನ್ನು ಇಳಿಸಿಕೊಂಡು ಮನೆಯೊಳಗೆ ಇಡುವನು. ಹಟ್ಟಿಯಲ್ಲಿರುವ ಬಂಧುಗಳು ಮದಲಿಂಗರಿಗೆ ಮಡ್ಲಕ್ಕಿ ಹಾಕಿದರು. ಅನಂತರ ಹಸಿರ ಗಿಡದ ಹತ್ತಿರ ಕರೆದುಕೊಂಡು ಹೋಗಿ ಒಂದೆಲೆ ಒಂದಡಿಕೆ ನಾಲ್ಕಾರು ಅಕ್ಕಿಗಳನ್ನು ಹಾಕಿಸಿದರು. ಹಸಿರು ಗಿಡಕ್ಕೆ ಪೂಜೆ ಮಾಡಿಸಿದರು. ಮಡ್ಲಕ್ಕಿ ಬಿಡಿಸಿದರು. ಕಕ್ಕೇನಹಳ್ಳಿಗೆ ಚಿಕ್ಕಯ್ಯ–ತಿಮ್ಮಕ್ಕಳನ್ನು ಕರೆದುಕೊಂಡು ಹೋದರು.

ಕಕ್ಕೇನಹಳ್ಳಿಯ ಊರು ತುಂಬಾ ಮೆರವಣಿಗೆ ಮಾಡಿ ಗ್ರಾಮದ ದೇವರುಗಳಿಗೆಲ್ಲ ಪೂಜೆ ಮಾಡಿಸಿ, ಚಿಕ್ಕರಂಗಯ್ಯ ತನ್ನ ಮನೆಗೆ ಕರೆದುಕೊಂಡು ಹೋದನು. ಮಾರನೆಯ ದಿನ ಗಂಗಾದೇವಿ ಪೂಜೆ ಮಾಡಿದರು. ೩ ದಿನಗಳು ಕಳೆದಮೇಲೆ ಕೋಳಿ ಕೋಯ್ದು ಅಡುಗೆ ಮಾಡಿ ಅದನ್ನೆಲ್ಲಾ ತುಂಬಿಕೊಂಡು ಹೋಗಿ ಎದುರು–ಬದುರು ಇರುವ ಟಂಕಟಿ ಗಿಡಗಳಿಗೆ ಎಡೆ ಹಾಕಿ, ಪೂಜೆ ಮಾಡಿ ಊಟ ಮಾಡಿದರು. ಚಿಕ್ಕಯ್ಯನ ಸೋದರ ಸಂಬಂಧಿ ರಾಮಣ್ಣ ಬಂದು ಚಿಕ್ಕಯ್ಯ–ತಿಮ್ಮಕ್ಕರನ್ನು ಹುಲಿಕಲ್ಲಿಗೆ ಕರೆದುಕೊಂಡು ಹೋದನು.

ಚಿಕ್ಕಯ್ಯನ ಮನೆಯಲ್ಲಿ ಒಬ್ಬ ತಮ್ಮ, ಇಬ್ಬರು ತಂಗಿಯರು, ಅಪ್ಪ ಅವ್ವ ಇದ್ದ ತುಂಬು ಕುಟುಂಬ. ಚಿಕ್ಕಯ್ಯನ ಅಪ್ಪ ಒಂದಿಷ್ಟು ಜಮೀನನ್ನು ಹೊಂದಿದ್ದ. ಎತ್ತುಗಳು ಇದ್ದವು. ಚಿಕ್ಕಯ್ಯ ತಮ್ಮನೊಂದಿಗೆ ದುಡಿಮೆ ಮಾಡತೊಡಗಿದರು. ಮದುವೆ ಆಗಿ ಹದಿನಾರು ದಿನದ ರಾತ್ರಿ ಪ್ರಸ್ಥ ಮಾಡಿಕೊಟ್ಟರು. ಚಿಕ್ಕಯ್ಯ–ತಿಮ್ಮಕ್ಕ ತನುಮನದ ಸಂಗಮದೊಂದಿಗೆ ಹಾಲುಜೇನು ಬೆರೆತಂತೆ ಬೆರೆತು ಹೋಗಿದ್ದರು. ಅಂದಿನಿಂದ ಪ್ರೀತಿಯ ಸಂಸಾರದ ದೋಣಿ ಸಾಗತೊಡಗಿತು. ಅನ್ಯೋನ್ಯ ದಾಂಪತ್ಯ ಮೊದಲ ರಾತ್ರಿಯೇ ಕುದುರಿತು. ಬಿಡಿಸಲಾಗದ ಪ್ರೇಮ ಬಂಧನವಾಯಿತು. ಅಂದು ರಾತ್ರಿ ಒಬ್ಬರಿಗೊಬ್ಬರು ಈ ಪ್ರಾಣಗಳು ಇರುವ ತನಕ ಒಬ್ಬರಿಗೊಬ್ಬರು ಅನ್ಯೋನ್ಯವಾಗಿ ಬಾಳೋಣ, ಯಾರೇ ಏನೇ ಹೇಳಿದರು ನಮ್ಮ ತನವನ್ನು ಬಿಟ್ಟುಕೊಡದೆ ಕೂಡಿಬಾಳೋಣ ಎಂದು ಒಬ್ಬರಿಗೊಬ್ಬರು ಪ್ರೀತಿಯ ಷರತ್ತನ್ನು ಹಾಕಿಕೊಂಡರು.

'ನೀನೆ ಈ ನನ್ನ ಬಾಳಿಗೆ ಬಂಗಾರ, ನನ್ನ ಹಣೆಗೆ ಸಿಂಗಾರ' ಎಂದು ಚಿಕ್ಕಯ್ಯನ ಎದೆಯ ಮೇಲೆ ತನ್ನ ಮುಖವನ್ನಿಟ್ಟು ಪಿಸುಮಾತಿನಲ್ಲಿ ತಿಮ್ಮಕ್ಕ ಹೇಳಿದಳು. 'ಮುಂಗಾರಿನ ಮೊದಲ ಮಳೆಗೆ ಹೊಲವು ಹದವಾದಂತೆ, ನನ್ನೊಳಗಿದ್ದ ಘರ್ಷಣೆಗೆ ತಂಪು ನೀಡಿರುವೆ



ಚಿನ್ನ, ನೀನೇ ನನ್ನ ಬಾಳಿನಲ್ಲಿ ಬೆಳಕೆಂದು' ಚಿಕ್ಕಯ್ಯನು ಪಿಸುಮಾತಿನಲ್ಲಿ ತಿಮ್ಮಕ್ಕನಿಗೆ ಹೇಳಿದನು. ಮಾರನೆಯ ದಿನದಿಂದ ಪ್ರಾರಂಭವಾಯಿತು ಚಿಕ್ಕಯ್ಯ–ತಿಮ್ಮಕ್ಕರ ಸಂಸಾರದ ಬಂಡಿ. ಹೊಲಕ್ಕೆ ಹೋದರೆ ಇಬ್ಬರು ಜತೆಯಲ್ಲೇ ಹೋಗುವರು. ಹಬ್ಬಕ್ಕೆ ನೆಂಟರ ಊರಿಗೆ ಹೋದರೆ ಜೊತೆಗೆ ಹೋಗುವರು. ಸಂಬಂಧಿಕರ ಮದುವೆಗೆ ಹೋದರೆ ಇಬ್ಬರೂ ಜೊತೆಗೆ ಹೋಗುವರು.

ಚಿಕ್ಕಯ್ಯ–ತಿಮ್ಮಕ್ಕರ ಅನ್ಯೋನ್ಯ ದಾಂಪತ್ಯ ಕಂಡು ಅಕ್ಕ–ಪಕ್ಕದ ಮನೆಯವರು ಅಸೂಯೆ ಪಡತೊಡಗಿದರು. ಏನಾದರೂ ಮಾಡಿ ಅವರಿಬ್ಬರ ಪ್ರೀತಿಗೆ ಪೆಟ್ಟು ಕೊಡಬೇಕೆಂದು ಪಕ್ಕದ ಮನೆ ಮಲ್ಲಕ್ಕ 'ಕೂಡಿದವರನ್ನು ಅಗಲಿಸ ಬಲ್ಲೆ; ಅಗಲಿದವರನ್ನು ಕೂಡಿಸಬಲ್ಲೆನೆಂಬ' ಕೊರವಂಜಿ ತರಹ ಚಿಕ್ಕಯ್ಯ–ತಿಮ್ಮಕ್ಕನ ನಡುವೆ ಜಗಳ ಇಟ್ಟಳು.

'ಚಿಕ್ಕಯ್ಯ ಚಿಕ್ಕಯ್ಯ ಹೆಂಗ ಅದಿಯಪ್ಪ'? ಅಂದ್ಲು ಮಲ್ಲಕ್ಕ. 'ಅಕ್ಕ ಚೆನ್ನಾಗಿದಿನಿ' ಅಂದ ಚಿಕ್ಕಯ್ಯ. 'ಬಾ ಇಲ್ಲಿ ಚಿಕ್ಕಯ್ಯ' ಅಂತ ಕರೆದು ಕಿವಿಯಲ್ಲಿ ಪಿಸು ಮಾತಿನಿಂದ 'ನಿನ್ನ ಹೆಂಡತಿ ತಿಮ್ಮವ್ವ ರಾಕ್ಷಸಿ ಕುಲದವಳಂತೆ, ಅವಳೂರಿನ ನಮ್ಮ ಸಂಬಂಧಿಯೊಬ್ಬರು ಹೇಳಿದರು ಕಣೋ, ರಾತ್ರಿಯೆಲ್ಲ ಅವಳ ಹತ್ತಿರ ಹುಷರಾಗಿರು. ಅವಳನ್ನ ಪರೀಕ್ಷೆ ಮಾಡಬೇಕೆಂದರೆ ಮಧ್ಯರಾತ್ರಿ ಒಂದು ಗಂಟೆ ಹೊತ್ತಿನಾಗೆ ಮೈ ನೆಕ್ಕುತ್ತಾಳೆ ನೋಡು' ಎಂದ್ಲು. ಇದನ್ನೆ ಮನಸ್ಸಿನಲ್ಲಿಟ್ಟುಕೊಂಡ ಚಿಕ್ಕಯ್ಯ ಈವೊತ್ತು ರಾತ್ರಿನೇ ಪರೀಕ್ಷೆ ಮಾಡೋಣ ಅಂತ ತೀರ್ಮಾನ ಮಾಡಿಕೊಂಡ.

ನೀರು ತರಲು ಹೋದ ತಿಮ್ಮಕ್ಕಳನ್ನು ಭಾರಿ ಪ್ರೀತಿಯಿಂದ ಕರೆದ್ಲು ಮಲ್ಲಕ್ಕ. 'ತಿಮ್ಮಕ್ಕ ತಿಮ್ಮಕ್ಕ ನಿನಗೊಂದು ಮಾತು ಹೇಳ್ತೀನಿ ಏನು ತಿಳ್ಕೊಬೇಡವ್ವ ಪಾಪ ನಿಮ್ಮಪ್ಪ ನಿಮ್ಮವ್ವಗೆ, ನಿನಗೆ ಮೋಸಮಾಡಿ ಈ ನಂಜವ್ವ ಚಿಕ್ಕಯ್ಯನಿಗೆ ನಿನ್ನ ಮದುವೆ ಮಾಡಿಕೊಂಡ್ಲು ನೋಡು. ನಿನ್ನ ಗಂಡ ಚಿಕ್ಕಯ್ಯ ಚರ್ಮದ ರೋಗದವನು. ಅವನ ಮೈಯೆಲ್ಲ ಬರಿ ಉಪ್ಪು ಕಣೇ ಹುಷರಾಗಿ ಅವ್ನತಗೆ ಬಾಳ್ವೆ ಮಾಡು' ಎಂದ್ಲು ಮಲ್ಲಕ್ಕ. ತಿಮ್ಮಕ್ಕ ಮಂಕಾಗಿ ಬಿಟ್ಳು. ಈವೊತ್ತು ರಾತ್ರೀನೆ ಪರೀಕ್ಷೆ ಮಾಡೋಣ ಅಂತ ತೀರ್ಮಾನ ಮಾಡಿದ್ಲು. ಇಬ್ಬರ ಮನದಲ್ಲಿ ಏನೋ ಕಳವಳ ತಳಮಳ. ಒಬ್ಬರಿಗೊಬ್ಬರು ಕೃತಕವಾಗಿಯೇ ಮಾತನಾಡಿದರು. ಊಟಮಾಡಿದರು. ೩೦ರ ತರಹ ರಾತ್ರಿ ಅತ್ಲಗೊಬ್ಬರು ಇತ್ಲಗೊಬ್ಬರು ಮುಖ ತಿರುವಿಕೊಂಡು ಮಲಗಿಕೊಂಡರು. ಇಬ್ಬರೂ ಏನು ಮಾತಾಡದೆ ಪರೀಕ್ಷಿಸಬೇಕು ಅಂತ ನಿದ್ರೆ ಮಾಡದೆ, ನಾಟಕೀಯವಾಗಿ ಮಲಗಿಕೊಂಡು ಕಾಯುತ್ತಿದ್ದರು.

ಸರಿ ಸುಮಾರು ರಾತ್ರಿ ಒಂದುವರೆ ಗಂಟೆ ಆಗಿತ್ತು. ಚಿಕ್ಕಯ್ಯ ನಿದ್ದೆ ಹೋಗಿರಬೇಕಂತ ತಿಮ್ಮಕ್ಕ ಅವನ ಎದೆಯ ಚರ್ಮ ನೆಕ್ಕಿದ್ಲು. ನಿದ್ದೆಯಿಲ್ಲದೆ ಸುಮ್ಮನೆ ಕಣ್ಮುಚ್ಚಿಕೊಂಡಿದ್ದ ಚಿಕ್ಕಯ್ಯನು ದಿಗ್ಗನೆ ಎದ್ದು 'ಅಯ್ಯೋ ಅಯ್ಯೋ ರಾಕ್ಷಸಿ ರಾಕ್ಷಸಿ' ಅಂತ ಹೊರಗೆ ಓಡಿಬಿಟ್ಟ. ಇತ್ತ ತಿಮ್ಮಕ್ಕ ಈಗ ಗೊತ್ತಾಯಿತು ನನಗೆ ಮೋಸ ಮಾಡಿಬಿಟ್ಟಿರಿ ಚರ್ಮದ ರೋಗದವ್ನ ನನ್ಗೆ ಕಟ್ಟಿದಿರಿ ಅಂತ ಗೋಳಾಡುತ್ತ ಇದ್ಲು. ಹೆಂಗೊ ರಾತ್ರಿ ಕಾಲ ಕಳೆದರು. ಮಾರನೆಯ ದಿನ ಚಿಕ್ಕಯ್ಯನು 'ನನಗೆ ಇವಳು ಬೇಡ, ಇವಳು ರಾಕ್ಷಸಿ ಕುಲದವಳೆಂದು' ಅವ್ವನಿಗೆ ಹೇಳಿದ.

ಚಿಕ್ಕಯ್ಯನ ಅಮ್ಮ ಊರಲ್ಲಿದ್ದ ಸಾಧುವನ್ನು ಕರೆದುಕೊಂಡು ಬಂದು ವಿಚಾರವನ್ನೆಲ್ಲ ತಿಳಿಸಿದರು. ಆ ಸಾಧು ಗಂಡ–ಹೆಂಡತಿ ಇಬ್ಬರನ್ನು ಕುಳ್ಳಿರಿಸಿಕೊಂಡು ಸರಿಯಾದ ತಿಳುವಳಿಕೆ ಹೇಳಿದರು. ನಿನಗಾರು ಹಿಂಗೆ ಹೇಳಿದ್ದು? ನಿನಗಾರು ಹೇಳಿದ್ದು? ಅಂತ ಆ ಸಾಧು ಅವರಿಬ್ಬರನ್ನು ಕೇಳಿದರು. ಆ ಚಾಡಿಮಾತನ್ನು ಹೇಳಿದವರ್ನ ಇಬ್ಬರೂ ಮಲ್ಲಕ್ಕನ ಹೆಸರನ್ನೇ ಹೇಳಿದರು. ಮಲ್ಲಕ್ಕನನ್ನು ಅಲ್ಲಿಗೆ ಕರೆಯಿಸಿ ಕೇಳಿದರು. ಆಗ ಆಕೆ ಅವರಿಬ್ಬರು ಚೆನ್ನಾಗಿರುವುದನ್ನು ನೋಡಿ ಸಹಿಸಿಕೊಳ್ಳಲಾರದೆ ಹಿಂಗೆ ಹೇಳಿದೆ. ತಪ್ಪಾಯಿತು ಕ್ಷಮಿಸಿ, ಅಂತ ಕೈಮುಗಿದಳು. ಆಗ ತಿಮ್ಮಕ್ಕ–ಚಿಕ್ಕಯ್ಯ ಪರಸ್ಪರ ಕಣ್ಣೋಟದಲ್ಲಿಯೇ ಒಂದಾಗಿ ಅವಿಭಾಜ್ಯರಾದರು.

ತಿಮ್ಮಕ್ಕ ರಾಗಿ ಬಿತ್ತಕ್ಕೆ, ಜೋಳ ಬಿತ್ತಕ್ಕೆ, ಕಳೆ ತೆಗೆಯಲಿಕ್ಕೆ, ರಾಗಿ, ಜೋಳ ಕೋಯ್ಲಿಕ್ಕೆ ಕೂಲಿ ಕೆಲಸಕ್ಕೆ ಹೋಗುತ್ತಿದ್ದರೂ ದಿನಾಲು ಅತ್ತೆ ನಂಜಮ್ಮ ನೆವದಿಲೇ ಬೈತೊಡಗಿದ್ಲು, ಮಕ್ಕಳ್ನ ಹಡೆಯಲಿಲ್ಲದ ಗೊಡ್ಡಿ ಅಂತ ಹಂಗಿಸತೊಡಗಿದ್ಲು. ತಿಮ್ಮಕ್ಕ ಹಗಲೆಲ್ಲಾ ಕೂಲಿ ಕೆಲಸಕ್ಕೆ ಹೋಗಿ ಮಕ್ಕಳಿಲ್ಲದ ಚಿಂತೆಮರೆತರೆ, ರಾತ್ರಿ ಹಾಸಿಗೆಯಲ್ಲಿ ಮಲಗಿಕೊಂಡು, ಕಣ್ಣೀರು ಹಾಕುತ್ತಿದ್ಲು. ಬಿಕ್ಕಲುಚಿಕ್ಕಯ್ಯ ಕೂಡ ತುಂಬಾ ವ್ಯಥೆಪಡುತ್ತಿದ್ದ. ಅವರಿವರು ಹೇಳಿದ ದೇವರಿಗೆಲ್ಲ ಹೋಗಿ ಬಂದ್ರೂ ಏನೂ ಪ್ರಯೋಜನವಾಗಲಿಲ್ಲ. ಮೈದುನ ಚಿಕ್ಕನರಸಯ್ಯ ಹೀನಾಯವಾಗಿ ಅತ್ತಿಗೆ ತಿಮ್ಮಕ್ಕನಿಗೆ ಬೈಯ ತೊಡಗಿದ. ಒಮ್ಮೆ ರಾಗಿ ಹೊಲಕ್ಕೆ ಯಡೆಗುಂಟೆ ಹೊಡೆಯಲು ಎತ್ತುಗಳು ಇಲ್ಲದ್ದರಿಂದ ತಿಮ್ಮಕ್ಕ–ಚಿಕ್ಕಯ್ಯನನ್ನೇ ಎತ್ತುಗಳು ತರಹ ಎಳೆಯುವ ಕೆಲಸಕ್ಕೆ ಹಚ್ಚಿದ್ದ. ಚಿಕ್ಕನರಸಯ್ಯ ತುಂಬಾ ಸಿಡುಕು ಹಾಗೂ ಉಗ್ರ ಕೋಪಿಷ್ಠ. ಪದೇ ಪದೇ ಬೈದು ತಿಮ್ಮಕ್ಕನಿಗೆ ಹಿಂಸೆ ಕೊಡುವುದು ಆತನಿಗೆ ರೂಢಿಯಾಗಿ ಬಿಟ್ಟಿತ್ತು.

ತನ್ನ ಮದುವೆ ಮಾಡಲಿಲ್ಲಂತ ಪಂಚಾಯಿತಿ ಕಟ್ಟೆ ಸೇರಿಸಿದ ಚಿಕ್ಕನರಸಯ್ಯ ಪಟೇಲರ ಹತ್ತಿರ ಚಿಕ್ಕಯ್ಯನಿಗೆ ನಾಲ್ಕೇಟು ಹೊಡೆಸಿದ. ತಮ್ಮನಿಂದಾದ ಅವಮಾನ, ತಾಯಿ ತನ್ನ ಹೆಣ್ತಿಗೆ ಕೊಡುವ ಉಪಟಳವನ್ನು ಕಂಡು, ತುಂಬಾ ಬೇಸತ್ತ ಚಿಕ್ಕಯ್ಯ ತಿಮ್ಮಕ್ಕನಿಗೆ ತೌರುಮನೆಗೆ ಹೋಗಲು ಹೇಳಿ; ಮನೆ ಬಿಟ್ಟು ಹೊರಟು ಹೋಗಲು ಸಿದ್ಧನಾದಾಗ ತಿಮ್ಮಕ್ಕ 'ನಾನು ಬಾಳಿದರೆ ನಿನ್ನ ಜೊತೆಗೆ ಬಾಳ್ತಿನಿ, ಸತ್ತರೆ ನಿನ್ನ ಜೊತೆ ಸಾಯ್ತಿನಿ ನಿನ್ನ ಬಿಟ್ಟು ಹೋಗೊಲ್ಲ' ಅಂತ ಹೇಳಿ ಗಂಡನ ಹಿಂದೆಯೇ ಹೋದ್ಲು. ಮಣ್ಣಿನೊಡನೆ ಮಣ್ಣು, ನೀರಿನೊಡನೆ ನೀರು, ಬೆಳಕಿನೊಡನೆ ಬೆಳಕು, ಗಾಳಿಯೊಡನೆ ಗಾಳಿ, ಗಗನದೊಡನೆ ಗಗನ ಬೆರತಿರುವಂತೆ ಅವಿಭಾಜ್ಯ ದಾಂಪತ್ಯದ ತಿಮ್ಮಕ್ಕ–ಚಿಕ್ಕಯ್ಯ 'ಏನೆ ಬರಲಿ, ಗುರುವಿನ ದಯೆ ಇರಲಿ' ಎಂದು ಪ್ರಾರ್ಥಿಸುತ್ತಾ ಹೆಜ್ಜೆ ಮೇಲೆ ಹೆಜ್ಜೆಯಿಟ್ಟು ಕಷ್ಟಕ್ಕೆ ಕರಗದೆ ಬಂದ ಕಷ್ಟಗಳನ್ನೆಲ್ಲ ಅರಗಿಸಿಕೊಂಡು ಸಂಬಂಧಿಕರ ಮನೆಗೆ ಹೋದರು.

ಸಂಬಂಧಿಕರು ಇವರಿಗೆ ಊಟೋಪಚಾರ ಮಾಡಿದರು. ಮಾರನೆಯ ದಿನ ಬೀಸನಹಳ್ಳಿ ಪಕ್ಕ ಇರೋ ಚೆನ್ನಮ್ಮನ ಪಾಳ್ಯಕ್ಕೆ ಬಂದ್ರು. ಅಲ್ಲಿ ಹುಲಿಕಲ್ಲಿನವರೆ ಆದ ಪುಟ್ಟಪ್ಪ ಮೇಸ್ಟ್ರು ಸಿಕ್ಕು ತಮ್ಮನಿಗೆ ಮದುವೆ ಮಾಡು ನಿಮ್ಮ ಅವ್ವನ್ನ ಚೆನ್ನಾಗಿ ನೋಡಿಕೋ ಎಂದು ಬುದ್ದಿ ಹೇಳಿ ವಾಪಾಸ್ಸು ಮನೆಗೆ ಕಳುಹಿಸಿದರು.



'ಕೂಲಿ ನಾ ಮಾಡಿದರೇನ ಕೋರಿ ಹೊತ್ತರೇನ ।
ನಮಗ ನಮ ರಾಯ ಬಡವೇನ । ಬಂಗಾರ
ಮಾಲ ಇದ್ದಂಗ ಮನಿಯಾಗ

ಎಂಬ ಜನಪದ ವಾಣಿಯಂತೆ ಬಂಗಾರದಂತಹ ಚಿಕ್ಕಯ್ಯನ ಸಖ್ಯದಿಂದ ತಿಮ್ಮಕ್ಕನಿಗೆ ಅತ್ತೆ, ಮೈದುನ ಎಷ್ಟೇ ತೊಂದರೆಗಳನ್ನು ನೀಡಿದರೂ ನುಂಗಿಕೊಂಡು ಗಂಡನಿಟ್ಟ ಹೆಜ್ಜೆಯನ್ನೇ ಹಿಂಬಾಲಿಸಿದರು. ಚಿಕ್ಕಯ್ಯ–ತಿಮ್ಮಕ್ಕರು ಮನೆಗೆ ವಾಪಾಸ್ಸು ಬಂದದ್ದನ್ನು ಕಂಡ ಅತ್ತೆ ನಂಜಮ್ಮ ಕೋಳಿ–ನಾಯಿ ನೆವವನ್ನಿಟ್ಟು ಬೈಯಲು ತೊಡಗಿದಳು. "ಗೊಡ್ಡಿ ನನ್ನ ಮನೆತನಕ್ಕೆ ಬಂದ ಮಾರಿ, ನಮ್ಮ ಮನೆತನ ವಂಶದ ನಾಶಕಿ ಎಂಬಿತ್ಯಾದಿಯಾಗಿ ಬೈದರೂ, ತಿಮ್ಮಕ್ಕ ತುಟಿಪಿಟ್ಟೆಕ್ಕೆನ್ನದೆ ಇದ್ದರು.

ಒಮ್ಮೆ ತಿಮ್ಮಕ್ಕನ ತಂಗಿ ಲಕ್ಷ್ಮಮ್ಮ ಹುಲಿಕಲ್ಲಿಗೆ ಬಂದ್ದಿದ್ಲು. ಹೊಲಕ್ಕೆ ಕಡ್ಲೆ ಬೀಜ ಹಾಕಲಿಕ್ಕೆ ಚಿಕ್ಕಯ್ಯ, ಚಿಕ್ಕನರಸಯ್ಯ, ತಿಮ್ಮಕ್ಕ ಹೊರಟರು. ಲಕ್ಷ್ಮಮ್ಮ ಅಕ್ಕನ ಜತೆಗೆ ಹೊರಟ್ಲು. ಚಿಕ್ಕಯ್ಯ, ಚಿಕ್ಕನರಸಯ್ಯ ನೇಗಿಲು ಎಳೆಯೋದು ತಿಮ್ಮಕ್ಕ ನೇಗಿಲಿನ ಮೇಣಿ ಹಿಡಿಕೊಂಡಿರೊದು, ಹಿಂದೆ ಕಡ್ಲೆಬೀಜ ಹಾಕಲು ಲಕ್ಷ್ಮಮ್ಮನಿಗೆ ಚಿಕ್ಕನರಸಯ್ಯ ಹೇಳಿದ. ಅದಕ್ಕೆ 'ಅವಳಿಗೆ ಎಲ್ಲಿ ಬರ್ತವೆ ಈ ಕೆಲಸ, ನೀ ಮನ್ಗೆ ಹೋಗು' ಎಂದು ತಿಮ್ಮಕ್ಕ ಲಕ್ಷ್ಮಮ್ಮಗೆ ಹೇಳಿದ್ದೆ ತಡ ಚಿಕ್ಕನರಸಯ್ಯ ವಿಪರೀತ ಸಿಟ್ಟು ಮಾಡಿಕೊಂಡು ಹಗ್ಗ ತಗೊಂಡು ತಿಮ್ಮಕ್ಕನಿಗೆ ರಪರಪ ಹೊಡೆದುಬಿಟ್ಟ. ಆಗ ಚಿಕ್ಕಯ್ಯ ತಮ್ಮನಿಗೆ ಬೈದು ಸುಮ್ಮನೆ ಮಾಡಿದ. ಮೊದಲು ಚಿಕ್ಕನರಸಯ್ಯನಿಗೆ ಮದುವೆ ಮಾಡಿ ಇವನ ಜೊತೆ ಇರೋದು ಬೇಡ ಅಂತ ಅವೊತ್ತೇ ಚಿಕ್ಕಯ್ಯ ತೀರ್ಮಾನ ಮಾಡಿದ.

ಚಿಕ್ಕನರಸಯ್ಯನಿಗೆ ಮದುವೆ ಮಾಡಲು ಸಂಬಂಧಿಕರಲ್ಲಿಯೇ ಹೆಣ್ಣು ನೋಡಿದ. ಮಾತುಕತೆ ಆಯಿತು. ಮದುವೆ ಏರ್ಪಾಟಾಯಿತು. ತಿಮ್ಮಕ್ಕ ತನ್ನಲ್ಲಿದ್ದ ಒಡವೆಗಳನ್ನೆಲ್ಲ ಮೈದುನನ ಹೆಂಡತಿಗೆ ಕೊಟ್ಲು. ಚಿಕ್ಕನರಸಯ್ಯನಿಗೆ ಮದುವೆ ಆಗಿ ೧೫ದಿನಕ್ಕೆ ಅಣ್ಣ–ತಮ್ಮ ಬೇರೆಯಾದರು. ತಮ್ಮನಿಗೆ ಅಪ್ಪ ಕಟ್ಟಿಸಿದ್ದ ಮನೆಯನ್ನು ಬಿಟ್ಟು ಕೊಟ್ಟ. ಚಿಕ್ಕಯ್ಯ ತಿಮ್ಮಕ್ಕ ಸಾಹುಕಾರರ ತೋಟಕ್ಕೆ ಹೋಗಿ ಗಳಗೂಟ ತೆಂಗಿನ ಗರಿ, ಲಕ್ಕಿ ಸೊಪ್ಪು ತಂದು, ನೆರಿಕೆ ಗುಡಿಸ್ಲು ಕಟ್ಟಿಕೊಂಡ್ರು. ಎರಡು ಸೋರೆ ಎರಡು ಮುಚ್ಚಳ, ಎರಡು ಕುಂಭಗಳನ್ನು ರಾಗಿ, ಜೋಳ, ಬೆಲ್ಲ, ಬೆಳ್ಳುಳ್ಳಿ, ಈರುಳ್ಳಿಯನ್ನು ಮಾಗಡಿ ಸಂತೆಗೆ ಹೋಗಿ ತಗೊಂಡು ಬಂದ್ರು. ನೆರಿಕೆ ಮನೆಯಲ್ಲಿಯೇ ನೆಮ್ಮದಿಯಾಗಿದ್ದರು.

ದಿನಾಲು ಒಂದಿಲ್ಲೊಂದು ಕೂಲಿ ಕೆಲಸಕ್ಕೆ ಗಂಡ ಹೆಂಡತಿ ಹೋಗುತ್ತಿದ್ದರು. ಜೆಲ್ಲಿ ಹೊಡೆಯಲಿಕ್ಕೆ, ಆ ಕೆಲಸ ಮುಗಿತು ಅಂದರೆ ಸಾಹುಕಾರರ ಹೊಲದಲ್ಲಿ ಕಳೆ ತೆಗೆಯಲಿಕೆ, ಹೊಲಗಳಿಗೆ ಬದು ಹಾಕಲಿಕ್ಕೆ ಏನೂ ಕೆಲಸ ಸಿಗದಿದ್ದರೆ ಇಬ್ಬರು ಅಡವಿಗೆ ಹೋಗಿ ಮುತ್ತುಗದ ಎಲೆಗಳನ್ನು ಕಿತ್ತುಕೊಂಡು ಬಂದು ಊಟದ ಎಲೆಯನ್ನು ತಯಾರು ಮಾಡಿ ಮಾರುತ್ತಿದ್ದರು. ಹೀಗೆ ಏನಾದರೊಂದು ಕೆಲಸದಲ್ಲಿ ನಿರತನಾಗಿರುತ್ತಿದ್ದ ಶ್ರಮಜೀವಿಗಳು. ಯಾರ ತಂಟೆಗೂ ಹೋಗುತ್ತಿರಲಿಲ್ಲ. ತಾವು ಆಯಿತು ತಮ್ಮ ಮನೆ ಆಯಿತು. ಚಿಕ್ಕಯ್ಯನಿಗೂ ಯಾವುದೇ

ದುಶ್ಚಟಗಳು ಇದ್ದಿಲ್ಲ. ಚೆನ್ನಾಗಿ ದುಡಿಯುತ್ತಿದ್ದು, ಚೆನ್ನಾಗಿ ಉಣ್ಣುತ್ತಿದ್ದರು. ಆರೋಗ್ಯನು ಚೆನ್ನಾಗಿ ಕಾಪಾಡಿಕೊಂಡಿದ್ದರು. ಅಸೂಯೆಯಿಂದ ಅಕ್ಕಪಕ್ಕದವರು ತಿಮ್ಮಕ್ಕನನ್ನು ನೆವದಿಂದ ಬೈಯುತ್ತಿದ್ದರು.

ಊರಿಗೆ ಹೋಗುವವರ ಎದುರಿಗೆ ಏನಾದರೂ ತಿಮ್ಮಕ್ಕ ಹೋದರೆ, ಅವರು 'ಛಿ ಥೂ, ಬಂಜೆ ಎದುರಿಗೆ ಬಂದ್ಲು, ಹೋದ ಕೆಲ್ಸ ಆಗೋಲ್ಲ' ಅಂತ ಸಿಡುಕಿನಿಂದ ಮಾತಾಡಿ ವಾಪಾಸ್ಸು ಹೋಗುತ್ತಿದ್ದರು. ಪಕ್ಕದ ಮನೆ ಹನುಮವ್ವ ಅಂತು ನೆವದಲ್ಲಿ 'ಆ ಗೊಡ್ಡು ಎಮ್ಮೆ ನೋಡು ಹ್ಯಂಗ ಅಯಿತೆ, ಅದನ್ನ ಬೆಳಿಗೆದ್ದು ನೋಡಿದರೆ ಆ ಇಡೀ ದಿನ ಏನು ಕೆಲ್ಸ ಆಗಲ್ಲ ಅಂತ ಊರು ತುಂಬಾ ಹೇಳ್ಬಿಟ್ಟಿದ್ಲು'. ತಿಮ್ಮಕ್ಕ ಹೀಗೆ ಹೀನಾಯವಾಗಿ ಹಂಗಿಸುವದನ್ನ ಅವಮಾನಿಸುವುದನ್ನು ತಡೆದುಕೊಳ್ಳಲಾರದೆ ರಾತ್ರಿ ನಿದ್ದೆ ಬರುವವರೆಗೂ ಅಳುತ್ತಿದ್ದರು.

'ಕಂದನ ಕೊಡು ಶಿವನೆ ಬಂಧನ ಪಡಲಾರೆ
ಹಂಗಿನ ಬಾನ ಉಣಲಾರೆ। ಮರ್ತ್ಯದಾಗ।
ಬಂಜೆಂಬ ಶಬುದ ಹೊರಲಾರೆ॥'
'ಬಾಲಕರಿಲ್ಲದ ಬಾಲಿದ್ಯಾತರ ಜನ್ಮ।
ಬಾಡೀಗೆ ಎತ್ತು ದುಡಿದಂಗ। ಬಾಳೆಲೆಯ।
ಹಾಸ್ಯುಂಡು ಬೀಸಿ ಒಗೆದಂಗ॥'

ಎಂಬ ಜನಪದವಾಣಿಯಂತೆ ಮಕ್ಕಳಾಗದಿದ್ದಕ್ಕೆ ವ್ಯಥೆಪಡುತ್ತಿದ್ದರು ತಿಮ್ಮಕ್ಕ.

ದೂರದ ಸಂಬಂಧಿಯೊಬ್ಬರು ಹೇಳಿದ ಪಂಡಿತನ ಹತ್ತಿರ ಚಿಕ್ಕಯ್ಯ ತಿಮ್ಮಕ್ಕ ಹೋಗಿ, ಮಕ್ಕಳ ಫಲ ನೀಡಿ ಅಂತ ಬೇಡಿಕೊಂಡರು. ಪಂಡಿತ ಐದುಕಾಲು ದಕ್ಷಿಣೆ, ಹೊಸಬಟ್ಟೆ ನೀಡಿ, ನಿಮಗೆ ಮಕ್ಕಳ ಫಲ ನೀಡ್ತೀನಿ ಎಂದ. ಅಂತೆಯೇ ಕೂಲಿ ನಾಲಿ ಮಾಡಿ ಕೂಡಿಟ್ಟುಕೊಂಡಿದ್ದ ದುಡ್ಡನ್ನು ಕೊಟ್ಟರು. ಪಂಡಿತ ಕೊಟ್ಟ ಕಷಾಯ ಕುಡಿದ್ರು ಮಕ್ಕಳಾಗಲಿಲ್ಲ. ಕೂಲಿ ಕೆಲಸಕ್ಕೆ ಜೊತೆಗೆ ಬರುತ್ತಿದ್ದ ಚಂದ್ರವ್ವ ಹೇಳಿದ್ಲು ಅಂತ 'ಚೌಡಮ್ಮ ದೇವತೆಗೆ ಹೋದ್ರು. ಅಲ್ಲಿ ಪೂಜಾರಿ ಹೇಳಿದಂಗೆ ಕೋಳಿ ಬಲಿಕೊಟ್ಟು ಜೋಗೂಟ ಮಾಡಿಸಿದ್ರು. ೯ದಿನ ಯಾರಿಗೂ ಕಾಣ್ದಂಗೆ ದೇವಾಲಯ ಸುತ್ತ ಕಸಗುಡಿಸಿ, ತಣ್ಣಿರು ಸ್ನಾನ ಮಾಡಿ ದೇವಿ ಪೂಜೆ ಮಾಡಿದ್ರು ಮಕ್ಕಳಾಗಲಿಲ್ಲ.

ಸಂಬಂಧಿಕಳೊಬ್ಬಳು ಗಂಡು ಮಗು ಹೆರಿಗೆಯಾಗಿದ್ದಾಳೆ. ಆ ಮಗುವಿನ ಹೊಕ್ಕುಳದ ಬಳ್ಳಿ ನುಂಗಿದರೆ ಮಕ್ಕಳಾಗುತ್ತೆ ಅಂತ ಗೆಳತಿ ರಾಮವ್ವ ಹೇಳಿದಂಗೆ ಬಾಳೆ ಹಣ್ಣಿನೊಳಗೆ ಹೊಕ್ಕಳುದಬಳ್ಳಿ ಇಟ್ಟುಕೊಂಡು ತಿಮ್ಮಕ್ಕ ನುಂಗಿದರು ಮಕ್ಕಳಾಗಲಿಲ್ಲ. ನಾವೇನು ಪಾಪ ಮಾಡಿದ್ವಿ? ನಾವೇನ್ ಕರ್ಮ ಮಾಡಿದ್ವಿ? ಅಂತಲೇ ಗಂಡ–ಹೆಂಡತಿ ಗೋಳಾಡುತ್ತಿದ್ದರು.

ಮಾಗಡಿ ಸಂತೆಗೆ ಚಿಕ್ಕಯ್ಯ–ತಿಮ್ಮಕ್ಕ ಹೋದ್ರು. ಬೆಳ್ಳುಳ್ಳಿ, ಈರುಳ್ಳಿ, ಬದನೆಕಾಯಿ, ಟೊಮೊಟೋಹಣ್ಣು, ಬೆಲ್ಲ ತಕ್ಕೊಂಡು ಗಂಟು ಕಟ್ಟಿಕೊಂಡು ತಲೆಮೇಲೆ ಇಟ್ಟುಕೊಂಡು, ಕಾರ ಮಂಡಕ್ಕಿ ತಿಂದ್ಕೊಳ್ಳುತ್ತಾ ಹೋಗುತ್ತಿದ್ದರು. ಎದುರಿಗೆ ಬಂದ ಕುರುಮಾಮ 'ತಾಯಿ



ನಿಂಗೆ ಸರ್ಪದೋಷ ಆಯಿತ್ತೆಂದ'. ಅದನ್ನೆ ಮನಸ್ಸಿನೊಳಗೆ ಇಟ್ಟುಕೊಂಡು ರಾತ್ರಿ ಮಲಗಿದ ತಿಮ್ಮಕ್ಕನಿಗೆ ಹಿಂದಿನದಲ್ಲೆ ನೆನಪಿಗೆ ಬಂತು.

ಚಿಕ್ಕರಂಗಯ್ಯ ನೇಗಿಲು ಹೊಡೆಯುವಾಗ ನೇಗಿಲಿಗೆ ಹಾವು ಸಿಕ್ಕಿಹಾಕಿಕೊಂಡು, ಅರ್ಧಜೀವ ವಾಗಿ ತಪ್ಪಿಸಿಕೊಂಡಿತ್ತು. ಅದನ್ನ ಹಿರಿಯರಿಗೆ ಬಂದು ಚಿಕ್ಕರಂಗಯ್ಯ ಹೇಳಿದ್ದಕ್ಕೆ ಅವರು ನಿನ್ನ ಮನೆಯಲ್ಲಿ ನಾಗರ ಪೂಜೆ ಮಾಡಿಸು ಎಂದು ಹೇಳಿದ್ದರು. ಈ ವಿಷಯ ಹೆಂಡತಿ ವಿಜಿಯಮ್ಮಗೆ ಹೇಳಿದರೆ ನಾಗರಪೂಜೆ ಮಾಡಲಿಕ್ಕೆ ಸುತರಾಮ್ ಒಪ್ಪಲಿಲ್ಲ. ಪೂಜೆ ಮಾಡಲಿಕ್ಕೆ ಅವಕಾಶನೇ ನೀಡಲಿಲ್ಲ ವಿಜಿಯಮ್ಮ. ಅದಕ್ಕೇನು ಮಾಡೋದು ಅಂತ ಚಿಕ್ಕರಂಗಯ್ಯ ಸುಮ್ಮನೇ ಆದ. ಹಿಂಗೆ ಎರಡು ವರ್ಷ ಕಳೆಯಿತು. ಒಂದು ದಿನ ಸಂಜೆ ೧೧ವರ್ಷದ ತಿಮ್ಮಕ್ಕ ತಂಗಿ ಲಕ್ಷ್ಮಮ್ಮಳನ್ನು ಮನೆ ಮುಂದೆ ಆಡಿಸುತ್ತಾ ಇರುವಾಗ ತಿಮ್ಮಕ್ಕನಿಗೆ ಹಾವು ಕಚ್ಚಿ ಬಿಡ್ತು. ಸ್ವಲ್ಪ ಹೊತ್ತು ಆಯಿತು. ಉರಿ, ಹೊಡೆತ ಅಂತ ತಿಮ್ಮಕ್ಕ ಅಳ ತೊಡಗಿದ್ಲು. ವಿಜಿಯಮ್ಮ ಗೋಳಾಡತೊಡಗಿದರು. ಚಿಕ್ಕರಂಗಯ್ಯ ಪಕ್ಕದೂರಿಗೆ ಹೋಗಿ ಹಾವು ಕಡಿದ್ದಕ್ಕೆ ಔಷಧಿ ಹಾಕುವ ಚಿಕ್ಕಈರಯ್ಯನ ಕರಕೊಂಡು ಬಂದು ಔಷಧಿ ಹಾಕಿಸಿದ್ದರು. ವಾಂತಿ ಆಗಲಿಲ್ಲ ಅದಕ್ಕೆ ಪಂಡಿತ ಚಿಕ್ಕಈರಯ್ಯ ಬೇರೆ ಪಂಡಿತರ ಹತ್ತಿರ ಕರ್ಕೊಂಡು ಹೋಗಿ ಅಂತ ಹೇಳಿದ್ರು. ಅದಕ್ಕೆ ಇನ್ನೊಬ್ಬ ಪಂಡಿತನ ಹತ್ತಿರ ತಿಮ್ಮಕ್ಕನ ಹೊತ್ತುಕೊಂಡು ಹೋದ್ರು. ಆ ಪಂಡಿತ ಔಷಧಿ ಕೊಟ್ಟರೂ ವಾಂತಿ ಆಗಲಿಲ್ಲ. ಉರಿ ಹೊಡೆತ ಹೆಚ್ಚಾಯಿತು. ಕೊನೆಗೆ ಕಟಿಗೇನಹಳ್ಳಿ ತಿಮ್ಮಯ್ಯನ್ನ ಕರೆದುಕೊಂಡು ಬಂದು ಔಷಧಿ ಕೊಡಿಸಿದರು. ಒಂದು ತಿಂಗಳು ಮಜ್ಜಿಗೆಯಲ್ಲಿ ಊಟ ಮಾಡಬೇಕು ಅಂತ ಪಥ್ಯ ಹೇಳಿದ್ರು, ಮೈ ತುಂಬಾ ಗಾಯಗಳಾದವು. ಅದು ವಾಸಿಯಾಗಲು ಐದು ತಿಂಗಳುಗಳು ಬೇಕಾಯಿತಂತೆ. ಅದನ್ನೆಲ್ಲ ನೆನಪಿಸಿಕೊಂಡು ದುಃಖ ದುಃಖಿಸಿಕೊಂಡು ಅಳುತ್ತಾ, ಆ ನಾಗರ ದೋಷನೇ ನನ್ನ ಬಂಜೆ ಮಾಡಿಬಿಡುತ್ತಾ ಅಂತ ಗೋಳಾಡುತ್ತಿದ್ದಕ್ಕೆ ಎಚ್ಚರಗೊಂಡ ಚಿಕ್ಕಯ್ಯ, ತಿಮ್ಮಕ್ಕನನ್ನು ಎದೆಯ ಮೇಲೆ ಮಲಗಿಸಿಕೊಂಡು, ಸಮಾಧಾನ ಹೇಳಿ, ಮುದ್ದಿಸಿದ. ಹಂಗೆ ಮೂರು ಗಂಟೆ ನಿದ್ದೆ ಮಾಡಿದ ತಿಮ್ಮಕ್ಕ ಬೆಳಗಾಗುತ್ತಿದ್ದಂತೆ ಎದ್ದು ಅಡುಗೆ ಮಾಡಿ, ಬುತ್ತಿ ಕಟ್ಟಿಕೊಂಡು ಚಿಕ್ಕಯ್ಯನ ಜೊತೆಗೂಡಿ ಜಲ್ಲಿ ಕಲ್ಲು ಹೊಡಲಿಕ್ಕೆ ಹೋದರು.

ಅವೊತ್ತು ಅದೇನು ರಣ ಬಿಸಿಲೋ ಏನೋ ದೊಡ್ಡ ಸುತ್ತಿಗೆಯಿಂದ ಕಲ್ಲು ಹೊಡೆಯುತ್ತಿದ್ದ ಚಿಕ್ಕಯ್ಯ ಮಧ್ಯಾಹ್ನ ಹನ್ನೆರೆಡು ಗಂಟೆ ಹೊತ್ತಿಗೆ ಸುಸ್ತಾಗಿ ಆ ಕಲ್ಲು ಜಲ್ಲಿ ಮೇಲೆಯೇ ಬಿದ್ದಬಿಟ್ಟ. ತಿಮ್ಮಕ್ಕ 'ಅಯ್ಯೋಪ್ಪೋ ನನ್ನ ಗಂಡ ಬಿದ್ದಬಿಟ್ರು ಬರ್ರೆಪ್ಪೋ' ಅಂತ ಕೂಗಿದ್ದಕ್ಕೆ ಕೆಲಸ ಮಾಡುತ್ತಿದ್ದವರೆಲ್ಲ ಓಡಿ ಬಂದು ಚಿಕ್ಕಯ್ಯನನ್ನು ಎತ್ತಿದರು. ಮೂರ್ಛೆ ಹೋಗಿಬಿಟ್ಟಿದ್ದ. ಮರದ ನೆರಳಲ್ಲಿ ಹಾಕಿಕೊಳ್ಳೋಣ ಅಂತ ಸುತ್ತ ಹುಡುಕಿದ್ರು, ಹತ್ತಿರ ಒಂದು ಮರನೂ ಇರಲಿಲ್ಲ. ಒಂದರ್ಧ ಮೈಲಿ ದೂರದಲ್ಲಿದ್ದ ಆಲದ ಮರದ ನೆರಳಡಿಗೆ ಹೊತ್ತು ಕೊಂಡು ಹೋಗಿ ಮಲಗಿಸಿದ್ರು. ತಿಮ್ಮಕ್ಕನ ಗೋಳು ಮುಗಿಲು ಮುಟ್ಟುವಂತಿತ್ತು. ತಂಪಾದ ಗಾಳಿ ಬಡಿದಂತೆಲ್ಲ ಚಿಕ್ಕಯ್ಯ ಮಿಸುಗಾಡಿದ. ಸ್ವಲ್ಪ ಹೊತ್ತಿನ ನಂತರ ಚೇತರಿಸಿಕೊಂಡು ಎದ್ದು ಕುಂತ. ಚಿಕ್ಕಯ್ಯನಿಗೆ ಅದೊಂದು ಜೀವಗಂಡಾಂತರ. ಆ ಆಲದ ಮರನೇ ಚಿಕ್ಕಯ್ಯನಿಗೆ

ಜೀವ ಕೊಟ್ಟು ಬಿಡುತ್ತೆಂಬಂತೆ ಆ ಮರದ ಬಗ್ಗೆ ಎಲ್ಲಿಲ್ಲದ ಗೌರವ ದಂಪತಿಗಳಿಬ್ಬರ ಮನದಲ್ಲಿ ಬೇರೂರಿತು.

ಮಾರನೇ ದಿನ ಕಕ್ಕೇನಹಳ್ಳಿಯಿಂದ ಒಂದು ಆಳು ಬಂದು ಚಿಕ್ಕರಂಗಯ್ಯನು ಸತ್ತ ಸುದ್ದಿ ಮುಟ್ಟಿಸಿ ಹೋದ. ಅಪ್ಪನ ಸಾವು ತಿಮ್ಮಕ್ಕನಲ್ಲಿ ಅಗಾಧವಾದ ದುಃಖವನ್ನುಂಟು ಮಾಡಿತು. ಚಿಕ್ಕರಂಗಯ್ಯ ತ್ಯಾಗಜೀವಿ, ಅವರಪ್ಪ ಮಾಡಿದ ಸಾಲ ತೀರಿಸಿದ. ಸಾಹುಕಾರರ ಮನೆಯಲ್ಲಿ ಸುಮಾರು ಎಂಟ್ಹತ್ತು ವರ್ಷಗಳ ಕಾಲ ಜೀತ ಇದ್ದ ಶ್ರಮಜೀವಿ. ಮಕ್ಕಳೆಂದರೆ ಪಂಚಪ್ರಾಣ. ಅದರಲ್ಲು ತಿಮ್ಮಕ್ಕನಂತೂ ಬಹು ಪ್ರೀತಿಯಿಂದ ಸಾಕಿದ ಕಷ್ಟಜೀವಿ. ಮುತ್ತೇಗೌಡ್ರ ಮನೆಯಲ್ಲಿ ಮನೆ ಮಗನ ತರಹ ದುಡಿದು ಅವರ ಶ್ರೀಮಂತಿಕೆಯನ್ನು ಇಮ್ಮಡಿಗೊಳಿಸಿದ ಸಾತ್ವಿಕ ವ್ಯಕ್ತಿ. ಹುಟ್ಟಿದೂರಿನಲ್ಲಿ ಮತ್ತು ಜೀತವಿದ್ದ ಊರಲ್ಲಿ ಪ್ರತಿಯೊಬ್ಬರಿಂದಲೂ ಬಹು ಪ್ರೀತಿ ಗಳಿಸಿದ ವ್ಯಕ್ತಿ. ಜೀತದಾಳು ಆಗಿದ್ದರೂ ಮನೆಯ ಸಂಬಂಧಿಕನೇನೋ ಅನ್ನುವಂತೆ ಸಾಕಿದ ಯಜಮಾನಿ ನರಸಮ್ಮನಂತೂ ಚಿಕ್ಕರಂಗಯ್ಯನ ಬಗ್ಗೆ ತುಂಬಾ ಅಭಿಮಾನವುಳ್ಳವರಾಗಿದ್ದರು. ಮುತ್ತೇಗೌಡ್ರು ಮೇಲೆ ಮೇಲೆ ಸಿಡುಕು ಮಾಡುತ್ತಿದ್ದರೂ ಚಿಕ್ಕರಂಗಯ್ಯನ ನಿಸ್ವಾರ್ಥ ದುಡಿಮೆಗೆ, ನಿಷ್ಠೆಗೆ, ನೀತಿಯುತ ಬದುಕಿಗೆ ಒಳಗೊಳಗೆ ಅಭಿನಂದಿಸುತ್ತಿದ್ದರು.

ತಿಮ್ಮಕ್ಕ ಅಪ್ಪನ ಸಾವಿನ ಸಂಕಟದಿಂದ ಚಡಪಡಿಸುತ್ತಿದ್ದಳು. ತಾನು ಹಸಿವಿನಿಂದ ಬಳಲಿದರೂ; ಮಕ್ಕಳನ್ನು ಹಸಿವಿನಿಂದ ಬಳಲಿಸಿದವರಲ್ಲ, ಸಿಡುಕು, ಉಗ್ರಕೋಪಿಯಾಗಿದ್ದ ಹೆಂಡತಿಯನ್ನು ನಗುನಗಿಸುತ್ತಲೇ ಸಂಸಾರವನ್ನು ಸವಿಯಾಗಿಸಿಕೊಂಡವರು. ತನಗೆ ಎಷ್ಟೆ ಕಷ್ಟ ಬಂದರೂ ಬೇಸರ ಪಡದೆ ಮೂಕಬಸವನಂತೆ ಹೆಂಡತಿ–ಮಕ್ಕಳನ್ನು ಸಾಕಿದ ಸಾತ್ವಿಕ ಪುರುಷ. ಅಪ್ಪನ ಗುಣ–ನಡೆತೆಯನ್ನೆಲ್ಲ ನೆನಪಿಸಿಕೊಂಡು ಬಹು ವೇದನೆ ಪಡುತ್ತಾ ಕಕ್ಕೇನಹಳ್ಳಿಗೆ ಗಂಡನ ಜೊತೆಗೆ ತಲುಪಿದ ತಿಮ್ಮಕ್ಕ ಹೆಣದ ಮೇಲೆ ಬಿದ್ದು ಗೋಳಾಡಿದಳು. ಚಿಕ್ಕಯ್ಯ ಕೂಡ ಮಾವನ ಸದ್ಗುಣಗಳನ್ನು ನೆನೆದುಕೊಂಡು ದುಃಖಿಸಿದ. ಸಂಬಂಧಿಕರೆಲ್ಲ ಬಂದ ಮೇಲೆ ಕಳ್ಳಿಗೂಟ ತಂದು, ಚಟ್ಟಕಟ್ಟಿ ಸ್ಮಶಾನಕ್ಕೆ ಹೊತ್ತುಕೊಂಡು ಹೋಗಿ ಅಲ್ಲಿ ಹೆಣವನ್ನಿಟ್ಟು ಕೊಂಡು ಗುದ್ದು ತೆಗೆದರು.

ಗುದ್ದಿನೊಳಕ್ಕೆ ಟಂಕಟಿಸೊಪ್ಪು ಹಾಕಿದ್ರು. ಅದರ ಮೇಲೆ ವಿಭೂತಿ ಪುಡಿ ಮಾಡಿ ಹಾಕಿದ್ರು. ಬಂದ ಸಂಬಂಧಿಕರೆಲ್ಲರು ಹೆಣಕ್ಕೆ ಹಣ್ಣು ಕಾಯಿ ನೈವೇದ್ಯ ಮಾಡಿ ಪೂಜೆ ಮಾಡಿದ್ರು. ನಂತರ ಗುದ್ದಿನೊಳಕ್ಕೆ ಹೆಣವನ್ನು ಇಳಿಸಿ, ಕಾಲುಹತ್ತಿರ ಒಬ್ಬರು ತಲೆಹತ್ತಿರ ಒಬ್ಬರು ನಿಂತಿದ್ದು ತಲೆ ಕಡೆಯಿಂದ ಬಟ್ಟೆಯನ್ನು ಬಿಚ್ಚುತ್ತಾ ಮೈ ಮೇಲೆ ಟಂಕಟಿಸೊಪ್ಪು ಮುಚ್ಚಿ, ಬಟ್ಟೆ ಪೂರ್ತಿ ಬಿಚ್ಚಿ ಬಿಸಾಕಿದರು. ‘ಬರುವಾಗ ಬೆತ್ತಲೆ, ಹೋಗುವಾಗ ಬೆತ್ತಲೆ’ ‘ಹುಟ್ಟುತ್ತೇನು ತರಲು ಇಲ್ಲ ಸಾಯುತ್ತೇನು ಹೊಯ್ಯಲಿಲ್ಲ’–ಎಂಬಂತೆ ಮಣ್ಣು ಹಾಕಿ ಶವಸಂಸ್ಕಾರ ಕಾರ್ಯ ಮುಗಿಸಿದ್ರು. ಬಂದವರೆಲ್ಲ ಕೈಕಾಲು ಮುಖ ತೊಳೆದು ಆಂಜನೇಯ ದೇವರ ದರ್ಶನ ಪಡೆದು ಮನೆಗೆ ಬಂದು ದೀಪ ನೋಡಿ ಮೂರುದಿನದ ಕಾರ್ಯಕ್ಕೆ ಕೋಳಿ ಅಕ್ಕಿ ತರ್ರ್ತೀವಿ ಅಂತ ಹೇಳಿ ಹೋದ್ರು.



ತಿಮ್ಮಕ್ಕ–ಚಿಕ್ಕಯ್ಯರು ಹುಲಿಕಲ್ಲಿಗೆ ಹೋದರು. ಅನಂತರ ಮೂರು ದಿನದ ಕಾರ್ಯ, ೧೬ದಿನದ ಕಾರ್ಯಕ್ಕೆ ಕಕ್ಕೇನಹಳ್ಳಿಗೆ ಬಂದು ಹೋದರೂ ತಿಮ್ಮಕ್ಕ ಅಪ್ಪನನ್ನು ಮರೆಯದೆ ಅದೇ ತಾಪದಲ್ಲಿ ತಲ್ಲಣಿಸ ತೊಡಗಿದರು. ಸೋಲೂರಿನಲ್ಲಿ ಹರಿಕಥೆ ಪ್ರಸಂಗ ಇದೆ ಎಂಬ ಸುದ್ದಿ ಚಿಕ್ಕಯ್ಯನಿಗೆ ರಂಗಪ್ಪ ಹೇಳಿದ. ತುಂಬಾ ದುಃಖಿತವಾಗಿದ್ದ ಪತ್ನಿ ತಿಮ್ಮಕ್ಕನನ್ನು ಕರೆದುಕೊಂಡು ಹರಿಕಥೆ ಕೇಳಲು ಸೋಲೂರಿಗೆ ಚಿಕ್ಕಯ್ಯ ಹೋದ. ರಾತ್ರಿ ೮ಗಂಟೆಗೆ ಹರಿಕಥೆ ಪ್ರಾರಂಭವಾಯಿತು. ತಿಮ್ಮಕ್ಕ–ಚಿಕ್ಕಯ್ಯರು ತುಂಬಾ ಆಸಕ್ತಿಯಿಂದ ಕೇಳುತ್ತಿದ್ದರು. ಕಥೆಯ ಮಧ್ಯದಲ್ಲಿ ಸಾವಿನ ನೋವನ್ನು ತಡೆದುಕೊಂಡು, ತಡೆದುಕೊಳ್ಳುವ ಶಕ್ತಿಯನ್ನು ಗಂಡನಿಗೆ ಧಾರೆ ಎರೆದ ಸಾಧ್ವಿಮಣಿಯ ಕಥೆಯನ್ನು ಹೇಳತೊಡಗಿದರು. “ಸೂಫಿಪಂಥಕ್ಕೆ ಸೇರಿದ ರಬಿಯಾಅಲ್–ಅದಾಬಿಯಾ ಸತಿಶಿರೋಮಣಿ. ಆಕೆಯ ಗಂಡ ಕೂಡ ತುಂಬಾ ಪ್ರಾಮಾಣಿಕ ವ್ಯಕ್ತಿ. ಆ ದಂಪತಿಗಳಿಗೆ ಅವಳಿ ಗಂಡು ಮಕ್ಕಳು ಜನಿಸಿದರು. ಆ ಮಕ್ಕಳನ್ನು ಚೆನ್ನಾಗಿ ಸಾಕಿದರು. ತುಂಬಾ ದಷ್ಟ–ಪುಷ್ಟವಾಗಿ ಬೆಳೆದಿದ್ದವು. ಅಪ್ಪನಿಗೆ ಸಹಾಯ ಮಾಡಲು ಹೊಲಕ್ಕೆ ಆ ಇಬ್ಬರು ಯುವಕರು ಹೋಗಿ ಬರುವಾಗ, ಮಳೆ ಪ್ರಾರಂಭವಾಯಿತು. ರಕ್ಷಣೆ ಪಡೆಯಲೆಂದು ದೊಡ್ಡ ಮರದ ಕೆಳಗೆ ಹೋಗಿ ನಿಂತರು. ಬರಸಿಡಿಲು ಮರಕ್ಕೆ ಹೊಡೆಯಿತು. ಅಲ್ಲಿಯೇ ಇದ್ದ ಆ ಯುವಕರಿಬ್ಬರು ಸುಟ್ಟು ಸಾವನ್ನಪ್ಪಿದರು. ಹೊಲದಲ್ಲಿದ್ದ ಜನರೆಲ್ಲ ಬಂದು ತಲ್ಲಣಿಸಿ ಆ ಯುವಕರ ಮೃತಶರೀರಗಳನ್ನು ಎತ್ತಿಕೊಂಡು ರಬಿಯಾಳ ಮನೆಗೆ ತಂದರು. ವಿಷಯವನ್ನು ತಿಳಿಸಿದರು. ರಬಿಯಾ ಕ್ಷಣಕಾಲ ತಲ್ಲಣಿಸಿ, ತಕ್ಷಣವೇ ಸಾವರಿಸಿಕೊಂಡು, ಬಂದ ಜನರಿಗೆಲ್ಲ ಕೈಮುಗಿದು ‘ನನ್ನ ಮಕ್ಕಳನ್ನು ಮನೆಗೆ ತಂದು ಉಪಕಾರ ಮಾಡಿದ್ದಿರಿ. ನಿಮ್ಮಲ್ಲಿ ನನ್ನದೊಂದು ಮನವಿ ತಾವು ಯಾರು ಇಲ್ಲಿ ಇರದೆ, ನಿಮ್ಮ ನಿಮ್ಮ ಮನೆಗೆ ಹೋಗಿ. ಅಲ್ಲದೇ ನನ್ನ ಪತಿಗೆ ಈ ವಿಷಯ ತಿಳಿಸಬೇಡಿ’ ಎಂದಳು. ಜನರೆಲ್ಲಾ ಪರಮಾಶ್ಚರ್ಯದಿಂದ ಅವರವರ ಮನೆಗೆ ಹೋದರು.

ಇತ್ತ ರಬಿಯಾ ಆ ಮೃತಶರೀರಗಳನ್ನು ಕೋಣೆಯೊಳಗೆ ಇಟ್ಟು ಬಾಗಿಲು ಹಾಕಿ, ಅಡುಗೆ ಮನೆಗೆ ಹೋಗಿ ಲಾವಾರಸದಂತೆ ಕುದಿಯುತ್ತಿದ್ದ ಸಂಕಟವನ್ನೆಲ್ಲ ತಡೆದುಕೊಂಡು ತುಟಿಕಚ್ಚಿ ಅಡುಗೆ ಮಾಡಿದಳು. ಅಷ್ಟೊತ್ತಿಗೆ ಪತಿಯು ಮನೆಗೆ ಬಂದ. ಆತನಿಗೆ ಕೈ ಕಾಲು ಮುಖ ತೊಳೆಯಲು ನೀರು ಕೊಟ್ಟಳು. ಅನಂತರ ಊಟಕ್ಕೆ ಬಡಿಸಿದಳು. ಪತಿಯು ಊಟ ಮಾಡಿದ ನಂತರ ಪಕ್ಕದಲ್ಲಿಯೇ ಕುಳಿತು ‘ನಮ್ಮ ಮದುವೆ ಆಗಿ ಇಪ್ಪತ್ತೆರಡು ವರ್ಷಗಳಾದವು. ನಿಮಗೆ ಯಾವುದೇ ವಿಷಯ ಮುಚ್ಚಿಟ್ಟಿಲ್ಲ. ಆದರೆ ಒಂದೇ ಒಂದು ವಿಷಯ ಹೇಳಲಿಕ್ಕೆ ಆಗಿರಲಿಲ್ಲ’ ಎಂದಳು. ಅದ್ಯಾವುದು ಹೇಳು ಅಂದ. ರಬಿಯಾ ‘ನಮ್ಮ ಮದುವೆ ಆಗಿ ಮೂರ್‍ನಾಲ್ಕು ವರ್ಷವಾಗಿತ್ತು, ನೀವು ತೋಟಕ್ಕೆ ಹೋಗಿದ್ದಾಗ, ಒಬ್ಬ ಸನ್ಯಾಸಿ ಬಂದು, ಅಮ್ಮಾ, ನಾನು ತೀರ್ಥಯಾತ್ರೆಗೆ ಹೋಗುತ್ತಿದ್ದೇನೆ. ನನ್ನ ಬಳಿ ಇರುವ ಎರಡು ಬೆಲೆ ಬಾಳುವ ವಸ್ತುಗಳನ್ನು ನಿಮ್ಮ ಬಳಿ ಇಟ್ಟು ಹೋಗ್ತೀನಿ, ನಾನು ಮರಳಿ ಬಂದು ಅವನ್ನು ಮತ್ತೆ ಪಡೆದುಕೊಳ್ಳುತ್ತೇನೆ ಎಂದರು. ಅದಕ್ಕೆ ನಾ ಒಪ್ಪಿ ಆ ಎರಡು ವಸ್ತುಗಳನ್ನು ತೆಗೆದುಕೊಂಡೆ. ಇಂದಿಗೆ ೧೮ ವರ್ಷಗಳಾದ ಮೇಲೆ ಆ ಮಹಾತ್ಮರು ಬೆಳಗ್ಗೆ ಬಂದು ಆ ವಸ್ತುಗಳನ್ನು

ಕೇಳಿದ್ರು. ಅವುಗಳನ್ನು ನಾನು ಇಷ್ಟು ದಿನ ನೋಡಿ ಅವುಗಳ ಮೇಲೆ ಮೋಹವಿತ್ತು. ಹಾಗಾಗಿ ಅವರು ವಾಪಾಸ್ಸು ಕೇಳಿದ್ದಕ್ಕೆ ಒಂದು ಕ್ಷಣ ಹೌಹಾರಿದೆ. ಮಹಾತ್ಮರೆ ಸಾಯುಂಕಾಲ ಬನ್ನಿ, ನಮ್ಮ ಪತಿರಾಯರನ್ನು ಕೇಳಿ ಮರಳಿಸುತ್ತೇನೆ' ಎಂದು ಹೇಳಿದೆ. ಅವರು ನಕ್ಕು ಹೋದರು. ಈಗ ನಾನೇನು ಮಾಡಲಿ? ಎಂದು ಕೇಳಿದಳು. ಅದಕ್ಕೆ ಗಂಡ 'ಆ ಮಹಾತ್ಮರಿಗೆ ಕೃತಜ್ಞತೆ ಸಲ್ಲಿಸಿ ಅವರ ವಸ್ತುಗಳನ್ನು ಮರಳಿಸಬೇಕಿತ್ತು' ಎಂದ. ಆಗ ರಬಿಯಾ ಗಂಡನ ಕೈಹಿಡಿದುಕೊಂಡು 'ಬನ್ನಿ ಹಾಗಾದರೆ ಇಬ್ಬರು ಕೂಡಿ ಆ ವಸ್ತುಗಳನ್ನು ಮಹಾತ್ಮರಿಗೆ ಕೋಡೋಣ'ವೆಂದು ಕೋಣೆ ಬಾಗಿಲು ತೆರೆದು ತಮ್ಮ ಮಕ್ಕಳ ಮೃತದೇಹಗಳನ್ನು ತೋರಿಸಿದಳು. ಆಕೆಯ ಗಂಡನು ದುಃಖ ತಡೆದುಕೊಳ್ಳಲಾರದೆ ಕುಸಿದು ಬಿದ್ದ. ನಂತರ ಸಮಾಧಾನ ಪಡಿಸಿಕೊಂಡು, ರಬಿಯಾಳ ಮುಖ ನೋಡಿ 'ರಬಿಯಾ ಹೆತ್ತ ತಾಯಿ ನೀನು, ಹೇಗೆ ಸಹಿಸಿಕೊಂಡೆ ಈ ಅಘಾತವ?' ಎಂದ. ಶಾಂತಮೂರ್ತಿಯಾದ ರಬಿಯಾ 'ಮೋಹ, ದುಃಖ ನನಗೆ ಇದೆ. ಇದಕ್ಕೂ ಮಿಗಿಲಾಗಿ ಭಗವಂತನು ನ್ಯಾಯ ನೀಡುವುದರ ಬಗ್ಗೆ ನಂಬಿಕೆ ಇದೆ. ಆ ದೇವನ ಮೇಲೆ ಇಟ್ಟ ನಂಬಿಕೆ ಅಚಲ. ಆ ದೇವರು ಯಾವುದನ್ನು, ಯಾರಿಗೆ, ಎಷ್ಟು ದಿನ ನೀಡಬೇಕು, ಯಾವಾಗ ಪಡೆದುಕೊಳ್ಳಬೇಕೆಂಬುದು ಗೊತ್ತಿದೆ. ನಾವು ನಮ್ಮ ಎಲ್ಲ ವಸ್ತುಗಳು ಆ ದೇವರು ನೀಡಿದ ಕಾಣಿಕೆಗಳು. ಆ ದೇವರು ಕೊಟ್ಟಷ್ಟು ದಿನ ಅವುಗಳನ್ನು ಬಳಸಿ, ಆತ ಮರಳಿ ಕೇಳಿದಾಗ ಕೊರಗದೆ ಒಪ್ಪಿಸುವುದು ಧರ್ಮ' ಎಂದಳು. ಹೀಗೆ ಸಾವಿನ ನೋವನ್ನು ಗೆದ್ದವಳು ರಬಿಯಾ ಎಂದು ಹರಿಕಥೆ ದಾಸರು ಹೇಳಿದ ಕಥೆಯನ್ನು ಕೇಳಿ ತಿಮ್ಮಕ್ಕ–ಚಿಕ್ಕಯ್ಯ ಊರಿಗೆ ಹೋದರು. ಸಾವು ಎಲ್ಲರಿಗೂ ಅನಿವಾರ್ಯ. ಅದರಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ. ಅದಕ್ಕಾಗಿ ಗೋಳಾಡುವುದರಲ್ಲಿ ಯಾವುದೇ ಅರ್ಥವಿರುವುದಿಲ್ಲ. ಹುಟ್ಟೋದು ಹಲವಾರು ಕಷ್ಟಸುಖಗಳನ್ನು ಅನುಭವಿಸೋದು, ಸಾಯೋದು, ಇದಿಷ್ಟೆ ಜೀವನವೇ? ಎಂದೆಲ್ಲ ತಿಮ್ಮಕ್ಕ–ಚಿಕ್ಕಯ್ಯ ಚಿಂತನೆ ಮಾಡಿದರು. ತಿಮ್ಮಕ್ಕ ತನ್ನ ತಂದೆಯ ಸಾವಿನಿಂದಾದ ದುಃಖವನ್ನು ಮರೆಯತೊಡಗಿದರು.



# ೬. ಮರಗಳಲ್ಲಿ ಮಕ್ಕಳನ್ನು ಕಂಡ ಮಹನೀಯರು

**ಅ**ತ್ತೆ ಮೈದುನರ ಜತೆ ಕಾದಾಟ, ನೆರೆಮನೆಯವರ, ಸಂಬಂಧಿಕರಿಂದ ಅನುಭವಿಸುವ ಅವಮಾನಗಳು ಗಂಡನ ಜೊತೆಗೂಡಿ ನಗು–ಅಳು, ಗೇಣು ಹೊಟ್ಟೆಗೆ ತುಂಡು ಬಟ್ಟೆಗಾಗಿ ಜಲ್ಲಿ ಹೊಡೆಯುವುದು, ಮಣ್ಣು ಹೊರುವುದು, ಬಿತ್ತುವುದು, ಕಳೆ ತೆಗೆಯುವುದು, ರಾಗಿ ಕೊಯ್ಯುವುದು, ರಾಗಿ ತುಳಿಸುವುದು, ಕಾಳುಗಳನ್ನು ಹಸನು ಮಾಡುವುದು, ಮೊದಲಾದ ನೂರೆಂಟು ಕೆಲಸಗಳನ್ನು ಮಾಡೋದು ಆ ದೇವರ ಕರೆ ಬಂದಾಗ ಹೋಗೋದು ಇದಿಷ್ಟೇ ಜೀವನವೇ? ಅಲ್ಲ, ಇದಕ್ಕೊಂದು ಅರ್ಥಬರುವಂತೆ ಬಾಳಬೇಕೆಂಬ ಚಿಂತನೆಗಳು ತಿಮ್ಮಕ್ಕನ ಮನದಾಳದಲ್ಲಿ ಪುಟಿದೇಳುತ್ತಿದ್ದವು.

ಬಿಕ್ಕಲು ಚಿಕ್ಕಯ್ಯನಿಗೂ 'ಈ ಬಾಳು ಗೋಳಿನ ಸಂತೆ ಸಾಸಿವೆ ಕಾಳಿನಷ್ಟು ಸುಖಕ್ಕೆ ಸಾಗರದಷ್ಟು ದುಃಖ ಅನುಭವಿಸಬೇಕು ಈ ಸಂಸಾರದಲ್ಲಿ. ಬಿಸಿಲು ಮಳೆ ಚಳಿಗಾಳಿಗೆ ಮೈಯೊಡ್ಡಿ ದುಡಿದೆ. ಅವ್ವನ್ನ ಚೆನ್ನಾಗಿ ಸಾಕೋಣವೆಂದರೆ ಅವ್ವ ಬಹು ಸಿಡುಕಿ. ಮುತ್ತಿನಂತಹ ನನ್ನ ಹೆಂಡತಿ ಜೊತೆಗೆ ಒಂದು ದಿನಕ್ಕೂ ನಗುತ್ತಾ ಬಾಳಲಿಲ್ಲ. ತಮ್ಮ, ನಾನು ಕೂಡಿಬಾಳೋಣ. ಕೂಲಿ ಮಾಡಿಕೊಂಡು ತಿಂದರೂ, ಛೀ, ಥೂ ಅನ್ನಿಸಿಕೊಳ್ದಂಗೆ ಬಾಳೋಣ, ಇರೋ ಜಮೀನಿನಲ್ಲಿ ಚೆನ್ನಾಗಿ ಬೆಳೆಯನ್ನು ಬೆಳೆಯೋಣ, ಮನೆ ಕಟ್ಟಿಸೋಣವೆಂದು ಮನಸ್ಸು ಮಾಡಿದರೆ, ಉಗ್ರಕೋಪಿ ತಮ್ಮ ನನ್ನ ಹೆಂಡ್ತೀನೇ ಸೇರೊಲ್ಲ. ಅದಷ್ಟೇ ಅಲ್ಲ, ನನ್ನೆದುರಿಗೆ ಹೀನಾಯವಾಗಿ ಬೈಯುತ್ತಾನೆ. ಇಂಥವರನ್ನ ಹೇಗೆ ಬದಲಾವಣೆ ಮಾಡೋದು ಅಂತ ಚಿಂತನೆ ಮಾಡತೊಡಗಿದ. ಅವಳು ಕೂಡ ಸುಮ್ಮನೆ ಕೂತು ಅನ್ನ ತಿನ್ನೊಳಲ್ಲ. ದಿನದ ಇಪ್ಪತ್ನಾಲ್ಕು ಗಂಟೆಗಳಲ್ಲಿ ನಿದ್ದೆ ಮಾಡುವ ಏಳೆಂಟು ಗಂಟೆ ಹೊರತು ಪಡಿಸಿದರೆ, ಉಳಿದ ಸಮಯವನ್ನೆಲ್ಲ ಒಂದಿಲ್ಲೊಂದು ಕೆಲಸ ಮಾಡುವುದರಲ್ಲಿ ಕಾಲ ಕಳೆಯುವಂತಹ ಶ್ರಮಜೀವಿ. ನನ್ನ ಮೇಲೆ ಅತಿಯಾದ ಪ್ರೀತಿ ಇಟ್ಕೊಂಡಿರುವವಳು. ಎಂದೂ ನನ್ನೆದುರು ಮಾತಾಡಿದವಳಲ್ಲ, ನನ್ನ ಅವ್ವ, ತಮ್ಮ ಅಷ್ಟೊಂದು ಬೈದರು ಅವರಿಗೂ ಎದುರಾಡಿದವಳಲ್ಲ, ಇಂತಹ ಒಳ್ಳೆಯ ಹೆಂಡತಿ ಸಿಕ್ಕಿರೋದು ನನ್ನ ಪುಣ್ಯವೇ ಸರಿ. ಎಂದೆಲ್ಲ ಚಿಂತನೆ ಮಾಡಿದ ಚಿಕ್ಕಯ್ಯ.

ಆ ಆಲದ ಮರ ನನ್ನ ಕಣ್ಮುಂದೆ ನಿಲ್ಲುತ್ತೆ ನನಗೆ ತಂಪಾದ ಗಾಳಿ ಬೀಸಿ ಅದೇ ನನಗೆ ಜೀವದಾನ ಮಾಡಿದ್ದು. ಅದರ ರಂಬೆ–ಕೊಂಬೆಗಳು, ಹಚ್ಚ ಹಸುರಿನ ಎಲೆ, ಕೆಂಪಾದ ಹಣ್ಣು

ಎಷ್ಟೊಂದು ಚೆನ್ನಾಗಿದ್ದವಲ್ಲ. ಅಂತಹ ಮರಗಳನ್ನು ಬೆಳೆಸಿಯಾದರೂ ನನಗೆ ಮಕ್ಕಳಿಲ್ಲವೆಂಬ ಕೊರತೆಯನ್ನು ನೀಗಿಸಿ ಕೊಳ್ಳೋಣ' ಎಂಬಂತಹ ಚಿಂತನೆಗಳು ನುಗ್ಗಿ ಬರುತ್ತಿದ್ದವು. ಅವಾಗ್ಲೆ 'ಲೇ ಲೇ, ಏನ್ಮಾಡ್ತೀಯಾ?' ಎಂದ ಬಿಕ್ಕಲುಚಿಕ್ಕಯ್ಯ. 'ಅಡುಗೆ ಮಾಡ್ತಿನಿ ಮಾಮ' ಎಂದ್ಲು ತಿಮ್ಮಕ್ಕ. 'ಎಷ್ಟು ಅಡುಗೆ ಮಾಡ್ತೀಯಾ?' ಎಂದ ಚಿಕ್ಕಯ್ಯ. 'ಅಯ್ಯೋ ಮಾರಾಯ ಇನ್ನೆಷ್ಟು ಮಾಡನಾ ನಮ್ಮಿಬ್ಬರಿಗೆ ಆಗೋವಷ್ಟು ಅಡುಗೆ ಮಾಡ್ತೀನಿ' ಎಂದ್ಲು ತಿಮ್ಮಕ್ಕ. 'ನೋಡೆ, ನೀ ಅಡುಗೆ ಮಾಡುವುದಾದರೇ ಎಲ್ಲ ಜೀವರಾಸಿಗಳು ಉಂಡು, ತೃಪ್ತಿ ಪಡುವಂತಹ ಅಡುಗೆ ಮಾಡು, ಇಲ್ಲವಾದರೆ ನೀ ಅಡುಗೇನೆ ಮಾಡಬೇಡ' ಎಂದ ಚಿಕ್ಕಯ್ಯನ ಮಾತಿಗೆ ತಿಮ್ಮಕ್ಕ ನಕ್ಕು 'ಯಾಕ ಮಾಮ ಹಿಂಗ ಮಾತಾಡ್ತಿ, ನಿನ್ನೆ ಹರಿಕಥೆ ಕೇಳಿದಾಗಿನಿಂದ ಸುಮ್ನೆ ಅದಿರಿ. ನನಗೂ ಒಂದು ತರಹ ಆಗ್ಯಾದಾ. ಏನಪ್ಪಾ ಈ ಜೀವನ ಅನ್ನೊಂಗೆ ಅಗ್ಯಾದ' ಅಂದ್ಲು. ಅದಕ್ಕೆ ಚಿಕ್ಕಯ್ಯ 'ನೋಡೆ ನನಗೆ ನೀನು, ನಿನಗೆ ನಾನು. ಕಷ್ಟನೇ ಬರ್ಲಿ, ಸುಖನೇ ಬರ್ಲಿ ಇಬ್ಬರೂ ಅನುಭವಿಸಬೇಕು. ಒಂದು ಮಾತು ಹೇಳ್ತೀನಿ ಕೇಳ್ತಿಯಾ' ಎಂದ ಚಿಕ್ಕಯ್ಯ. 'ಹೇಳು ನಿನ್ನ ಮಾತಿಗೆ ಎಂದಾದರೂ ನಾ ಎದುರಾಡಿದನಾ? ನಿನ್ನ ಕೇಳದಂಗೆ ಏನಾದರೂ ಕೆಲಸ ಮಾಡಿನಾ? ಕೂಲಿ ಕೆಲಸಕ್ಕಾದರೂ ನಿನ್ನ ಕೇಳ್ದಂಗೆ ಹೋಗಿನಾ? ಅದೇನು ಹೇಳು ಮಾಮ' ಅಂದ್ಲು ತಿಮ್ಮಕ್ಕ. 'ನೋಡೆ ಕಲ್ಲ ಹೊಡೆಯುತ್ತಾ ಸುಸ್ತಾಗಿ ಅವೊತ್ತು ಬಿದ್ನೆಲ್ಲ, ಅವೊತ್ತೇನಾದರೂ ಸತ್ತು ಹೋಗಿದ್ದರೇ ಇಷ್ಟೊತ್ತಿಗೆ ನನ್ನ ತಿಥಿ ಎಲ್ಲ ಮುಗಿದು ಹೋಗಿರೋದು' ಎಂದ ಚಿಕ್ಕಯ್ಯನ ಮಾತಿಗೆ 'ಏ ಬಿಡು ಮಾಮ, ಹಂಗಲ್ಲ ಮಾತಾಡಬೇಡ ನೋಡು. ನಿನ್ನ ಬಿಟ್ಟು ಒಂದು ದಿನ ನಾನಿರಲು ಸಾಧ್ಯವಿಲ್ಲ ಗೊತ್ತಾ? ನೋಡು, ಅದೇನೋ ಹೇಳ್ತೀನಿ ಅಂದು ಏನೇನೋ ಹೇಳ್ತಿ. ಅದೇನು ಹೇಳು ಮಾಮ 'ಅಂದ್ಲು ತಿಮ್ಮಕ್ಕ. 'ಅಲ್ಲ ಕಣೆ, ನಿಜವಾಗ್ಲು ಅವೊತ್ತು ನನ್ನ ಬದುಕಿಸಿದ್ದು, ಆ ಆಲದ ಮರ ಅಲ್ವೇನೇ? ಆ ಮರದ ನೆರಳಿಗೆ ಹೊತ್ಕೊಂಡು ಹೋಗಿ ಹಾಕುವತ್ತಿಗೆ ನಾನು ಬದುಕಿರೋದು ಅನ್ಸುತ್ತೆ. ಆ ಸುಡುಬಿಸಿಲಲ್ಲಿ ಇನ್ನೊಷ್ಟೋತ್ತು ಇದ್ದಿದ್ದರೆ ನಾನು ಸತ್ತು ಹೋಗಿಬಿಡುತ್ತಿದ್ದೆನೋ? ಅದಕ್ಕೆ ನಾ ಅನ್ನೋದು ಆಲದ ಮರ ನನ್ನ ಉಳುಸ್ತು. ನೋಡು ನಮ್ಮೂರಿನಿಂದ ಕುದೂರು ರಸ್ತೆ ಮಾಡಿದರಲ್ಲ, ಅದಕ್ಕೆ ಕಲ್ಲು ಹೊಡೆಯುವಾಗ ಎಷ್ಟು ಬಿಸಿಲು. ಅಲ್ಲೆಲ್ಲಿ ಒಂದು ಮರನೂ ಇಲ್ಲ, ನಮ್ಮೂರಿನಿಂದ ಕುದೂರಿಗೆ ಹೋಗುವ ರಸ್ತೆಯ ಅಕ್ಕಪಕ್ಕದಲ್ಲಿ ಆಲದ ಕೊಂಬೆಗಳನ್ನು ನೆಟ್ಟು, ನೀರು ಹಾಕಿ ಬೆಳೆಸೋಣವಾ?' ಎಂದು ಚಿಕ್ಕಯ್ಯ ಹೇಳುತ್ತಿದ್ದಂತೆಯೇ ತಿಮ್ಮಕ್ಕನಿಗೆ ಎಲ್ಲಿಲ್ಲದ ಸಂತೋಷ ಉಕ್ಕಿ ಬಂದು 'ಓ ಓಹೋ ಇದಾ ನೀ ಹೇಳಿದ್ದು ಎಲ್ಲ ಜೀವರಾಸಿಗಳಿಗೂ ತೃಪ್ತಿಯಾಗುವಂತಹ ಅಡುಗೆ ಮಾಡು ಎಂದದ್ದು. ಹಂಗಾದರೆ ಮಾಮ ಮೊದಲು ಆ ಕೆಲಸ ಮಾಡೋಣ ಬಿಡು. ತಗೋ ನೀರು ಉಣ್ಣು. ಆಮೇಲೆ ಹೋಗೋಣ ಇಬ್ಬರು' ಎಂದು ಒಂದೇ ತಟ್ಟೆಯಲ್ಲಿ ಇಬ್ಬರೂ ಊಟ ಮಾಡಿದ್ರು. ಆಮೇಲೆ ನೀರು ಬುತ್ತಿ ತಗೊಂಡು ಹಾರೆ–ಚಲ್ಕೆ ತಗೊಂಡು ಹೊರಟರು.

ಅನಾದಿ ಕಾಲದಿಂದ ಬೆಳೆಯುತ್ತಿರುವ ಆಲದ ಮರವನ್ನು ಸಂಸ್ಕೃತದಲ್ಲಿ 'ವಟವೃಕ್ಷ' ಎನ್ನುವರು. ವಿಶಾಲವಾಗಿ ಹರಡುವ ದೊಡ್ಡ ಮರವಿದು. ಒಂದು ಎಕರೆಗೂ ಹೆಚ್ಚು ಜಾಗವನ್ನು



ಆಕ್ರಮಿಸಿಕೊಂಡಿರುವ ಆಲದ ಮರ ಕಲ್ಕತ್ತದ ರಾಷ್ಟ್ರೀಯ ಸಸ್ಯ ಉದ್ಯಾನವನದಲ್ಲಿದೆ. ಕರ್ನಾಟಕದ ರಾಮೋಹಳ್ಳಿಯ ಹತ್ತಿರವಿರುವ ಆಲದಮರ ವಿಶಾಲವಾಗಿ ಹರಡಿಕೊಂಡು ವಿಹಾರ ಕೇಂದ್ರವಾಗಿ ಪ್ರಸಿದ್ಧಿಯಾಗಿದೆ. ದೊಡ್ಡ ಆಲದಮರ ಮದ್ರಾಸಿನ ಅಡಿಯೂರ್‌ನಲ್ಲೂ ಇದೆ. ನೂರಾರು ವರ್ಷಗಳ ಕಾಲ ಜೀವಿಸಬಲ್ಲ ಆಲದಮರಗಳು ನಮ್ಮ ದೇಶದ ಪ್ರತಿ ಭಾಗದಲ್ಲೂ, ಎಲ್ಲಾ ವಾತಾವರಣದಲ್ಲೂ ಬೆಳೆಯುತ್ತವೆ. ಬೆಳೆದಿವೆ. ಈ ಮರವು ಸ್ವಾಭಾವಿಕವಾಗಿಯೂ ಬೆಳೆಯುತ್ತದೆ. ನೆರಳಿಗಾಗಿ ಸಾಲುಮರಗಳಾಗಿಯೂ ಬೆಳೆಸಲಾಗುತ್ತಿದೆ.

ಆಲದಮರದ ಎಲೆಗಳು ಊಟದ ಎಲೆಗೆ, ಹಾಲನ್ನು ಅನೇಕ ಔಷಧಿಗಳಿಗೆ ಉಪಯೋಗಿಸಲಾಗುತ್ತಿದೆ. ಒಣಗಿದ ದಿಮ್ಮಿಗಳನ್ನು ಕೆರೆಕೊಳಗಳಲ್ಲಿ ದೋಣಿಯಾಗಿ ನಿರ್ಮಿಸಿ, ಉಪಯೋಗಿಸಲು ಬಳಸುತ್ತಾರೆ. ಕುರಿ ಮೇಕೆ ಆನೆಗಳಿಗೆ ಈ ಮರದ ಎಲೆಯು ಬಹು ಒಳ್ಳೆಯ ಆಹಾರವಾಗಿದೆ. "ನೆರಳುವೃಕ್ಷ"ವೆಂದೇ ಪ್ರಸಿದ್ಧಿಯಾಗಿರುವ ಆಲದಮರ ಬೀಜಗಳಿಂದ ವೃದ್ಧಿಯಾಗುತ್ತದೆ. ಹಾಗೆಯೇ ಅದರ ಆರೇಳು ಅಡಿ ಉದ್ದದ ಕಾಂಡದ ತುಂಡುಗಳನ್ನು ಕತ್ತರಿಸಿ, ಎರಡು ಅಡಿ ಆಳವಾಗಿ ತೆಗೆದ ಗುಣಿಗಳಲ್ಲಿ ನೆಟ್ಟು, ಮೇಲಿನ ತುದಿಗೆ ಸಗಣಿ ಸವರಿ, ನೀರು ಹಾಕಿ ಪೋಷಿಸುವುದರಿಂದಲೂ ವೃದ್ಧಿಯಾಗುತ್ತವೆ. ಆಲದಮರ ನೇರವಾಗಿ ಬೆಳೆಯುವ ಇಲ್ಲವೇ ಹರಡುವ ಗುಣವನ್ನೊಂದಿದೆ. ದೀರ್ಘಕಾಲ ಬರಗಾಲ ಬಂದರೂ ಸಹಿಸಿಕೊಂಡು ಜೀವಿಸುವ ಶಕ್ತಿ ಆಲದಮರಕ್ಕಿದೆ. ಈ ಮರದ ಎಲೆಗಳು ಚಳಿಗಾಲ ಮುಕ್ತಾಯಗೊಂಡ ಕಾಲದಲ್ಲಿ ಸಂಪೂರ್ಣವಾಗಿ ಉದುರಿ, ಬೇಸಗೆಯ ಆರಂಭದಲ್ಲಿ ಚಿಗುರುತ್ತವೆ. ಈ ಮರದ ಕಾಂಡ ದಪ್ಪವಾಗಿರುತ್ತದೆ.

ಬಿಕ್ಕಲು ಚಿಕ್ಕಯ್ಯ–ತಿಮ್ಮಕ್ಕ ಇಂತಹ ಆಲದ ಮರಗಳನ್ನು ಹುಲಿಕಲ್ಲಿನಿಂದ ಕುದೂರಿಗೆ ಹೋಗುವ ರಸ್ತೆಯುದ್ದಕ್ಕೂ ಎರಡು ಬದಿಯಲ್ಲಿ ಬೆಳೆಸಬೇಕೆಂದು ತೀರ್ಮಾನಿಸಿದರು. ೧೯೭೦ ಮಾರ್ಚ್ ತಿಂಗಳು ರಣಬಿಸಿಲು ಸುರಿಯುತ್ತಿತ್ತು. ಅಡವಿಯಲ್ಲಿ ದನಕರುಗಳಿಗೆ ಪ್ರಾಣಿ ಪಕ್ಷಿಗಳಿಗೆ ನೆರಳಿಲ್ಲ, ನೀರಿಲ್ಲ. ರಸ್ತೆಯಲ್ಲಿ ಓಡಾಡುವ ಜನರು, ರಸ್ತೆ ಕೆಲಸ ಮಾಡುವ ಮಂದಿ ಆ ಸುಡು ಬಿಸಿಲಿನಲ್ಲಿ ತತ್ತರಿಸುತ್ತಿದ್ದರು. ಆ ಬಿಸಿಲಿನ ಅನುಭವವನ್ನು ಅನುಭವಿಸಿದ ಚಿಕ್ಕಯ್ಯ–ತಿಮ್ಮಕ್ಕ ಆಲದ ಕೊಂಬೆಗಳನ್ನು ನೆಟ್ಟು ಪಶುಪಕ್ಷಿಗಳು, ದಾರಿಹೋಕರು ಬಿಸಿಲಿನ ತಾಪದಿಂದ ಮುಕ್ತರಾಗಬೇಕೆಂದು ಬಯಸಿದರು. ಅಂದು ಅದ್ಯಾವಾ ಶುಭ ಮುಹೂರ್ತವೋ ಏನೋ ಬೆಳಗಿನ ಜಾವ ನಾಲ್ಕು ಗಂಟೆಗೆ ಎದ್ದು ಕೈಕಾಲುಮುಖ ತೊಳೆದು, ತಮ್ಮ ಮನೆದೇವರನ್ನು ಸ್ಮರಿಸಿಕೊಂಡ್ರು. ತಿಮ್ಮಕ್ಕ ಒಂದು ಗಡುಗೆ ನೀರನ್ನು ತಲೆಯ ಮೇಲೆ ಇಟ್ಟುಕೊಂಡ್ರು. ಬಿಕ್ಕಲು ಚಿಕ್ಕಯ್ಯ ಛಲಕೆ–ಹಾರೆಯನ್ನು ಹೆಗಲ ಮೇಲೆ ಇಟ್ಟುಕೊಂಡು ತಮ್ಮೂರಿನಿಂದ ಕುದೂರಿಗೆ ಹೋಗುವ ರಸ್ತೆಗೆ ಹೋಗಿ ಬದಿಯಲ್ಲಿ ಗುಣಿ ತೆಗೆಯಲು ಆರಂಭಿಸಿದ್ರು. ಚಿಕ್ಕಯ್ಯ ಹಾರೆ ಹಾಕಿದಂತೆಲ್ಲ ತಿಮ್ಮಕ್ಕ ಛಲಕೆ ಹಿಡಿದುಕೊಂಡು ಮಣ್ಣು ಎತ್ತಿಹಾಕುತ್ತಿದ್ದರು. ಬೆಳಗಿನ ಒಂಬತ್ತು ಗಂಟೆ ಹೊತ್ತಿಗೆ ಐದು ಗುಣಿ ತೆಗೆದರು. ಸುಸ್ತಾಯಿತು, ಬೆವರು ನೀರು ಇಳಿಯುತ್ತಿತ್ತು. ಆದರೂ ಏನೋ ಉತ್ಸಾಹ, ಉಲ್ಲಾಸ, ಸಂತೋಷ ಅವರಿಬ್ಬರ ಮನದಲ್ಲಿತ್ತು. ಅಲ್ಲಿಗೆ ಅವೊತ್ತಿನ

ಕೆಲಸ ನಿಲ್ಲಿಸಿ ಮನೆಗೆ ಹೋದ್ರು. ತಿಮ್ಮಕ್ಕ ಅಡುಗೆ ಮಾಡಿದ್ರು. ಚಿಕ್ಕಯ್ಯ ಅಷ್ಟೊತ್ತಿಗೆ ಮನೆಗೆ ನೀರು ತಂದ್ರು. ಇಬ್ರು ಊಟ ಮಾಡಿ ಸಾಹುಕಾರರ ಹೊಲದ ಕೂಲಿ ಕೆಲಸಕ್ಕೆ ಹೋದ್ರು.

ಕೆಲಸ ಮುಗಿಸಿಕೊಂಡು ಬರುವಾಗ ಈಚಲು ಗರಿಗಳನ್ನು ಕತ್ತರಿಸಿಕೊಂಡು ಅಲ್ಲಿಯೇ ಇದ್ದ ಒಂದಿಷ್ಟು ಉಗುಣಿ ಬಳ್ಳಿ ಕತ್ತರಿಸಿಕೊಂಡು ಅವೆರಡನ್ನು ಸೇರಿಸಿ ಎರಡು ಪೆಂಡೆ ಕಟ್ಟಿದ್ರು. ಇಬ್ಬರೂ ಒಂದೊಂದು ಪೆಂಡೆ ತಲೆ ಮೇಲಿಟ್ಟುಕೊಂಡು ಬಂದ್ರು. ರಾತ್ರಿ ಊಟ ಮಾಡಿದ್ರು ಮಲಗಿದ್ರೂ ಆಲದ ಮರ ಕಣ್ಮುಂದೆ ನಿಲ್ಲುತ್ತಿತ್ತು.

ಬೆಳಗಿನ ಜಾವ ಎದ್ರು. ಕೈಕಾಲು ಮುಖ ತೊಳೆದುಕೊಂಡ್ರು. ಮನೆ ದೇವರನ್ನು ಸ್ಮರಿಸಿಕೊಂಡ್ರು. ಛಲಕೆ ಹಾರೆ ತಕ್ಕೊಂಡು ಕುದೂರು ರಸ್ತೆಗೆ ಹೋಗಿ ಗುಣಿ ತೆಗೆಲಿಕ್ಕೆ ಹತ್ತಿದರು. ಅವೊತ್ತು ಐದು ಗುಣಿ ತೆಗೆದು ಹೋದ್ರು. ಕೂಲಿ ಕೆಲಸ ಮುಗಿಸಿಕೊಂಡು ಬಂದಾಗ ಸಂಜೆ ಆರು ಗಂಟೆ ಆಗಿತ್ತು. ಮನೆಯ ಸೂರಿಗೆ ಸಿಕ್ಕಿಸಿದ್ದ ನೀರು ತರುವ ಗಳವನ್ನು ಚಿಕ್ಕಯ್ಯ ತಕ್ಕೊಂಡು 'ಏ ಬಾ, ಆ ಗುಣಿಗಳಿಗೆ ನೀರು ಹಾಕಿ ಬರೋಣ, ನಾಳೆ ಶುಕ್ರವಾರ ಆಲದ ಕೊಂಬೆ ನೆಡೋಣ' ಅಂತ ಹೇಳುತ್ತಿದ್ದಂತೆಯೇ ತಿಮ್ಮಕ್ಕ ಮರು ಮಾತಾನಾಡದೆ ಆಕಿನೂ ಎರಡು ಗಡಿಗೆ ತಕ್ಕೊಂಡು ಹೊರಟ್ರು. ಚಿಕ್ಕಯ್ಯ ಗಳದ ಎರಡು ತುದಿಗೆ ಎರಡು ತುಂಡು ಹಗ್ಗ ಕಟ್ಟಿ, ಅದಕ್ಕೊಂದೊಂದು ಗಡಿಗೆ ಕಟ್ಟಿಕೊಂಡು ಹೆಗಲ ಮೇಲೆ ಆ ಗಳವನ್ನೊತ್ತುಕೊಂಡು ನೀರು ತಂದು ಹಾಕಿದ್ರೆ, ತಿಮ್ಮಕ್ಕ ಬಗಲಲ್ಲಿ ಒಂದು ಗಡಿಗೆ, ತಲೆಯ ಮೇಲೊಂದು ಗಡಿಗೆಯಲ್ಲಿ ನೀರನ್ನು ಸುಮಾರು ಒಂದು ಫರ್ಲಾಂಗು ದೂರದಿಂದ ಹೊತ್ತು ತಂದು ಆ ಗುಣಿಗಳಿಗೆ ಹಾಕಿದ್ರು. ರಾತ್ರಿ ಎಂಟು ಗಂಟೆ ಆಯಿತು ಅಷ್ಟೊತ್ತಿಗೆ ಒಂದೊಂದು ಗುಣಿಗೆ ಎರೆಡೆರಡು ಗಡಿಗೆಯಂತೆ ಇಪ್ಪತ್ತು ಗಡಿಗೆ ನೀರು ಹಾಕಿದ್ರು. ಗಡಿಗೆ ಅಂದರೆ ಅವು ಎಂಥವು ಗೊತ್ತಾ? ಕುಂಬಾರಣ್ಣ ಮಣ್ಣನ್ನು ಹದ ಮಾಡಿ, ಗಡಿಗೆ ಮಾಡಿ, ಅದನ್ನು ಸುಟ್ಟು ತಯಾರು ಮಾಡಿದ್ದ ಇಪ್ಪತ್ತು ಲೀಟರ್ ನೀರು ಹಿಡಿಯುವ ಗಡಿಗೆ.

ಮಾರನೆಯ ದಿನ ಬೆಳಗಿನ ಜಾವ ಕುಡುಗೋಲು, ಮಚ್ಚು ತೆಗೆದುಕೊಂಡು ಚಿಕ್ಕಯ್ಯನಿಗೆ ಜೀವದಾನ ಮಾಡಿದ್ದ ಆ ಆಲದ ಮರಕ್ಕೆ ದಂಪತಿಗಳಿಬ್ಬರು ಹೋದ್ರು. ಆಲದ ಮರಕ್ಕೆ ಶರಣು ಮಾಡಿ, ಮನೆ ದೇವರನ್ನು ಸ್ಮರಿಸಿಕೊಂಡು ಚಿಕ್ಕಯ್ಯ ಮರವನ್ನು ಹತ್ತಿದ. ತುಂಬಾ ದಷ್ಟ–ಪುಷ್ಟವಾಗಿರುವ ಕೊಂಬೆಗಳನ್ನು ಕತ್ತರಿಸಿ ಕೆಳ ಹಾಕಿದ. ಕೆಳಕ್ಕಿಳಿದು ಆರು ಅಡಿ ಉದ್ದದ ಹತ್ತನ್ನೆರಡು ತುಂಡುಗಳನ್ನು ಮಾಡಿದ. ಎರಡು ಪೆಂಡೆ ಮಾಡಿಕೊಂಡು ಇಬ್ರು ಹೊತ್ತುಕೊಂಡು ಗುಣಿಯ ಹತ್ತಿರ ಬಂದ್ರು. ಅಲ್ಲಿ ಆ ತುಂಡುಗಳನ್ನು ಹಾಕಿದ್ರು. ತಿಮ್ಮಕ್ಕ ಸಗಣಿ ಆಯ್ದುಕೊಂಡು ಬಂದ್ರು. ಚಿಕ್ಕಯ್ಯ ಮನೆಗೆ ಹೋಗಿ ನಿನ್ನೆ ತಂದಿಟ್ಟಿದ್ದ ಈಚಲಗರಿ, ಉಗುಣಿಬಳ್ಳಿ ಪೆಂಡೆ ಹೊತ್ತುಕೊಂಡು ಬಂದ್ರು. ಶುಭವೇಳೆ ದೇವರನ್ನು ಸ್ಮರಿಸಿಕೊಂಡು ಚಿಕ್ಕಯ್ಯ ಎರಡು ಗುಣಿಯೊಳಕ್ಕೆ ಆಲದ ಕೊಂಬೆಯ ತುಂಡುಗಳನ್ನು ನೆಟ್ರು. ತಿಮ್ಮಕ್ಕ ಎಂಟು ಗುಣಿಗಳಿಗೆ ಆಲದ ಕೊಂಬೆಯ ತುಂಡುಗಳನ್ನು ನೆಟ್ರು. ಆಮೇಲೆ ಪ್ರತಿ ತುಂಡಿನ ತುದಿಗೆ ಸಗಣಿ ಉಂಡೆ ಮಾಡಿ ಇಟ್ಟರು. ದನಕರು, ಕುರಿ, ಮೇಕೆ ತೊಂದರೆ ಮಾಡಬಾರದೆಂದು ಚಿಕ್ಕಯ್ಯ ಈಚಲು ಗರಿಗಳನ್ನು ಸುತ್ತ



ನಿಲ್ಲಿಸಿ, ಉಗುಣಿ ಬಳ್ಳಿಯಿಂದ ಕಟ್ಟಿದರು. ಅಂದು ಹತ್ತು ಆಲದ ಕೊಂಬೆಗಳನ್ನು ನೆಟ್ಟಿದ್ದರಿಂದ ಅವರಿಬ್ಬರಿಗೆ ಆದ ಆನಂದ ಅಪರಿಮಿತವಾದುದು. ತುಂಬಾ ಸಂತಸದಿಂದ ಮನೆಗೆ ಹೋದ್ರು. ಅಷ್ಟೊತ್ತಿಗೆ ಚಿಕ್ಕಯ್ಯ ತಿಮ್ಮಕ್ಕರು ರಸ್ತೆಯ ಬದಿಗೆ ಗಿಡ ಹಾಕ್ತರಂತೆ ಎಂಬ ಸುದ್ದಿ ಊರೆಲ್ಲ ಗುಲ್ಲೆದ್ದಿತು. ಪಕ್ಕದ ಮನೆ ರಂಗವ್ವ 'ಮಕ್ಕಳಿಲ್ಲದೆ ಇನ್ನೇನ್ ಮಾಡ್ತವೆ, ಮಕ್ಕಳಿದ್ದಿದ್ದರೆ ಅವನ್ನ ಆಡಿಸ್ತಾ ಕಾಲ ಕಳೆಯುತ್ತಿದ್ದವು. ಅಲ್ವೇನೇ ರಾಮವ್ವ' ಎಂದ್ಲು. 'ಹೌದು ಕಣೆ ರಂಗವ್ವ ಸೀಮೆಗಿಲ್ದವೋ ಅನ್ನೊಂಗ ಆಡ್ತವೆ, ತಿಮ್ಮವ್ವನ್ನ ಕೈಯಾಗೆ ಬೊಬ್ಬೆ ಬಂದವಂತೆ, ಅದೇನ್ ಹೇಳ್ತಿ ರಂಗವ್ವ, ಬೆಳಗಿನ ಜಾವಕ್ಕೆ ಎದ್ದು ಹೋಗಿ ದಿನಾಲು ನೀರು ಹಾಕ್ತವಂತೆ' ಎಂದ್ಲು ರಾಮವ್ವ.

'ಊರು ಉಪಕಾರ ಅರಿಯದು ಹೆಣ ಶೃಂಗಾರ ಅರಿಯದು' ಎಂಬಂತೆ ಏನೇ ಉಪಕಾರವನ್ನು ಸಹಕಾರವನ್ನು ಊರಿಗಾಗಿ ಮಾಡಿದ್ರೂ ಯಾರದಾರೊಬ್ಬರು ಜರಿಯುತ್ತಾರೆ ಇಲ್ಲವೇ ಬೈಯುತ್ತಾರೆ. ಇಡೀ ಊರೆ ಸೈ ಸೈ ಎನ್ನುವಂತೆ ಯಾವುದೊಂದು ಕೆಲಸ ಮಾಡಲು ಸಾಧ್ಯವಿಲ್ಲ, ಮಾಡಿದ್ರು ಕೂಡ ಅದನ್ನು ಅರಿತುಕೊಳ್ಳದೆ ನಿಷ್ಠುರ ಮಾಡುವರು ಇದ್ದೆ ಇರುತ್ತಾರೆ. ಹಾಗೆಯೇ ಹೆಣಕ್ಕೆ ಏನೆಲ್ಲಾ ಶೃಂಗಾರ ಮಾಡಿದ್ರು ಅದಕ್ಕೇನು ಅರ್ಥವಾಗುವುದಿಲ್ಲ, ಸಂತಸಪಡಲಿಕ್ಕು ಸಾಧ್ಯವಿಲ್ಲ. ಅಂತೆಯೇ ತಿಮ್ಮಕ್ಕ–ಚಿಕ್ಕಯ್ಯರು ಮಾಡುತ್ತಿರುವ ನಿಸ್ವಾರ್ಥ ತ್ಯಾಗದ ಕಾರ್ಯವನ್ನು ಅರಿಯದೆ ಟೀಕೆ ಮಾಡುತ್ತಿರುವರು.

'ಪ್ರೇಮಕವಿ'ಎಂದೇ ಪ್ರಸಿದ್ಧರಾಗಿರುವ ಕೆ.ಎಸ್. ನರಸಿಂಹಸ್ವಾಮಿಯವರು 'ಇಕ್ಕಳ' ಎಂಬ ತಮ್ಮ ಕವನವೊಂದರಲ್ಲಿ ಟೀಕೆ ಮಾಡುವವರನ್ನು ಕುರಿತು ಹೇಳಿರುವುದು ಹೀಗಿದೆ:

'ಚಳಿಗಾಲ ಬಂದಾಗ ಎಷ್ಟು ಚಳಿ? ಎಂದರು
ಬಂತಲ್ಲ ಬೇಸಿಗೆ, ಕೆಟ್ಟ ಬಿಸಿಲೆಂದರು
ಮಳೆ ಬಿತ್ತೊ ಬಿಡದಲ್ಲ ಶನಿ! ಎಂಬ ಟೀಕೆ;
ಇವರು ಮೆಚ್ಚುವ ವಸ್ತು ಇಲ್ಲಿಲ್ಲ ಜೋಕೆ !

......ನಿಂತವರ ಕೇಳುವರು; ನೀನೇಕೆ ನಿಂತೆ?
ಮಲಗಿದರೆ ಗೊಣಗುವರು ನಿನಗಿಲ್ಲ ಚಿಂತೆ
ಓಡಿದರೆ ಬೆನ್ನ ಹಿಂದೆಯೆ ಇವರ ಟೀಕೆ
ಇವರು ಮೆಚ್ಚುವ ವಸ್ತು ಇಲ್ಲಿಲ್ಲ ಜೋಕೆ"

ಎಂಬಂತೆ ತಿಮ್ಮಕ್ಕ–ಚಿಕ್ಕಯ್ಯರ ಕಾರ್ಯಶೀಲತೆಯನ್ನು ಮೆಚ್ಚುವುದಕ್ಕಿಂತ ಟೀಕೆ ಮಾಡುವವರು ಹೆಚ್ಚಿದ್ದರೂ, ತಿಮ್ಮಕ್ಕ–ಚಿಕ್ಕಯ್ಯರು ಯಾರು ಏನೇ ಅಂದ್ರು ತಲೆಕೆಡಿಸಿಕೊಳ್ಳದೇ ತಮ್ಮ ಕಾಯಕದಲ್ಲಿ ನಿತ್ಯನಿರತರಾದರು. ಆಲದ ಕೊಂಬೆಗಳು ಚಿಗುರೊಡೆಯ ತೊಡಗಿದವು. ಅವು ಚಿಗಿದಂತೆಯೇ ದಂಪತಿಗಳ ಮನದಾಳದಲ್ಲಿ ಸಂತಸವು ಚಿಗಿಯುತ್ತಿತ್ತು. ಹೀಗೆ ಆರು ತಿಂಗಳು ಕಳೆದ್ರು. ಮತ್ತೆ ತಮ್ಮ ನಿತ್ಯ ಕೂಲಿ ಕೆಲಸದ ಜೊತೆ ಜೊತೆಯಲ್ಲಿ ಮತ್ತೊಂದು ಹತ್ತು ಗುಣಿಗಳನ್ನು ತೋಡಿ ಹತ್ತು ಆಲದ ಕೊಂಬೆಗಳನ್ನು ನೆಟ್ರು, ದಿನಾಲು ಬೆಳಗ್ಗೆ ಹೊತ್ತು ನೀರು ಹಾಕುವುದು. ಸಂಜೆ

ಹೊತ್ತು ಜಂಗುಳಿ ದನಗಳು, ಕುರಿಮೇಕೆಗಳು ಬರುವಾಗ ಕೊಂಬೆಗಳನ್ನು ಅಲುಗಾಡಿಸುತ್ತವೆಂದು ಕಾಯುತ್ತಿದ್ದರು. ದನಕುರಿಗಳ ಸಗಣಿಯನ್ನು ಕೂಡಿಟ್ಟು ಪ್ರತಿ ಗುಣಿಗಳಿಗೆ ಹಾಕುತ್ತಿದ್ದರು.

೧೯೭೧ರ ಏಪ್ರಿಲ್ ತಿಂಗಳ ಎರಡನೇ ಶುಕ್ರವಾರ ಬೆಳಗಿನ ಜಾವ ತಿಮ್ಮಕ್ಕ–ಚಿಕ್ಕಯ್ಯ ಹಾರೆ–ಛಲಕಿ ತೆಗೆದುಕೊಂಡು ಹೋಗಿ, ಹತ್ತು ಗುಣಿಗಳನ್ನು ತೆಗೆದ್ರು. ಚಿಕ್ಕಯ್ಯನಿಗೆ ಯಾಕೋ ಮೈಕೈ ನೋವು ಆಗಿ ಸಂಜೆ ಹೊತ್ತಿಗೆ ವಿಪರೀತ ಜ್ವರ ಬಂದು ಬಿಟ್ಟವು. ಊರ ಹೊರಗೆ ದೊಡ್ಡ ಬೇವಿನ ಮರವಿತ್ತು. ತಿಮ್ಮಕ್ಕ ಅದರ ಬಡ್ಡೆಯ ಚಕ್ಕೆಯನ್ನು ಕೆತ್ತಿಕೊಂಡು ಬಂದು ಅದನ್ನು ಕುಟ್ಟಿ, ಕಷಾಯ ಮಾಡಿ ಕುಡಿಸಿದ್ರು. ರಾತ್ರಿ ಹನ್ನೊಂದು ಗಂಟೆ ಹೊತ್ತಿಗೆ ಜ್ವರ ಬಿಟ್ಟವು. ಚೆನ್ನಾಗಿ ನಿದ್ದೆ ಮಾಡಿದ ಚಿಕ್ಕಯ್ಯ ಬೆಳಗಿನ ಜಾವ ಐದು ಗಂಟೆಗೆ ಎದ್ದು, ತಿಮ್ಮಕ್ಕನನ್ನು ಕರೆದುಕೊಂಡು ಗುಣಿ ತೊಡಲು ಹೋದ್ರು. ಹತ್ತು ಗುಣಿಗಳನ್ನು ತೋಡಿ ಮನೆಗೆ ಬಂದು, ಊಟ ಮಾಡಿ ಕೂಲಿ ಕೆಲಸಕ್ಕೆ ಹೋದ್ರು.

ಸಾಯಂಕಾಲ ಹೊತ್ತಿಗೆ ತಿಮ್ಮಕ್ಕನ ತಾಯಿ ವಿಜಿಯಮ್ಮ ಬಂದಿದ್ರು. ಅತ್ತೆ ಬಂದಿದ್ದಾರಂತ ಚಿಕ್ಕಯ್ಯ ಹುಂಜನ್ನ ತಂದ್ರು. ತಿಮ್ಮಕ್ಕ ಕೋಳಿ ಸಾರು, ಮುದ್ದೆ ಮಾಡಿದ್ರು. ಊಟ ಮಾಡಲು ಕುಳಿತಾಗ ವಿಜಿಯಮ್ಮ 'ಚಿಕ್ಕಣ್ಣ ನಿನಗೇನು ಬುದ್ಧಿಗಿದ್ದಿ ಐತೋ? ಇಲ್ವೋ? ನಿನಗೇನು ತಲೆ ಕೆಟ್ಟಿದಿಯೋ ಹೋಗಿ ಹೋಗಿ ದಾರಿ ಬದಿಗೆ ಆಲದಕೊಂಬೆ ನೆಟ್ಟಿದಿರಿ ಅಂತೆ, ಅವುಕ್ಕೆ ದಿನಾಲು ನೀರು ಬೇರೆ ಹಾಕ್ತಿರಂತೆ, ಕೂಲಿ ಮಾಡಿಯೇ ಜೀವ ತೇಯಿತ್ತಾ ಇದೀರಿ ಅಂತದ್ರಲ್ಲಿ ಅದೊಂದಿಷ್ಟು ಮೈಕೈನೋವು ಮಾಡಿಕೊಳ್ತೀರೇನು? ಸುಮ್ನೆ ಇರ್ರಪ್ಪ, ಯಾರೇನು ನಿಮ್ಗೆ ಕಿರೀಟ ಇಡಲ್ಲ' ಎಂದ್ಲು. ಅದಕ್ಕೆ ಚಿಕ್ಕಯ್ಯ 'ನಮ್ಗೆ ಯಾರು ಕಿರೀಟ ಇಡೋದೇನು ಬೇಡ ಅತ್ತೆ. ನಮ್ಮ ಸಂತೋಸಕ್ಕೆ ಮರಗಳನ್ನೇ ಮಕ್ಕಳಂತ ತಿಳ್ಕೊಂಡು ಸಾಕ್ತೀವಿ. ನಿನ್ ಮಗಳು ಕೂಡ ಆ ಮರಗಳನ್ನ ಸಾಕೋದ್ರಿಂದ ಖುಷಿಯಾಗಿದ್ದಾಳೆ' ಎಂದ್ರು. ಅದಕ್ಕೆ ವಿಜಿಯಮ್ಮ 'ಅಯ್ಯೋ ಚಿಕ್ಕಣ್ಣ ಇವಳದೇನು ಕೇಳ್ತಿ, ಆರೇಳು ವರ್ಷದವಳಿದ್ದಾಗ್ಲೆ ಮನೆಯ ಸೂರಿನ ಹಿಂಡಿನಲ್ಲಿ ದುಡ್ಡು ಇಟ್ಟಿದ್ದರೇ ಅದನ್ನು ತೆಗೆದುಕೊಂಡು ಭಿಕ್ಷುಕರಿಗೆ ಕೊಡುತ್ತಿದ್ಲು. ಅವಳೇನಾದ್ರೂ ಊಟ ಮಾಡುತ್ತಿರುವಾಗ ಯಾರಾದರೂ ಬಂದು ಅಮ್ಮಾ ಅನ್ನ ಕೊಡ್ರಮ್ಮ ಅಂದ್ರೆ ಸಾಕು ಅವಳಿಗಿಲ್ಲದಿದ್ರೂ ಭಿಕ್ಷುಕರಿಗೆ ಕೊಟ್ಟುಬಿಡುತ್ತಿದ್ಲು. ಒಂದು ಸಾರಿ ಊಟದ ಎಲೆ ಎಣೆದುಕೊಂಡು ಗುಬ್ಬಿ ಪೇಟೆಯಲ್ಲಿ ಮಾರಿಕೊಂಡು ಒಂದಿಷ್ಟು ಕಾಸು ತರುವಾಗ್ಲು 'ಊರಿ ಮಾರಮ್ಮ, ಕೇರಿದುರುಗಮ್ಮ ಅಂತ ಹೇಳ್ತಾ, ಛಾಟಿ ಏಟನ್ನು ಹೊಡೆದುಕೊಳ್ಳುತ್ತಾ ಬಾಯಿಯಲ್ಲಿ ಅರ್ಧ ಅಡಿ ದಬ್ಬಳ ಚುಚ್ಚಿಕೊಂಡವರಿಗೆ ಎಲ್ಲ ಕಾಸುಕೊಟ್ಟು ಬಂದವಳಪ್ಪಾ. ಹೋಗಿ ಹೋಗಿ ಅವಳ ಮಾತು ಕೇಳುಕೊಂಡು 'ನೆಲ ಗುದ್ದಿ ಮೈನೋವು ಮಾಡಿಕೊಂಡಿರೆಂಗೆ, ಸುಮ್ನೆ ಮೈನೋವು ಮಾಡಿಕೊಳ್ಳಬ್ಯಾಡ್ರಪ್ಪಾ' ಎಂದ್ಲು. ತಕ್ಷಣನೇ ತಿಮ್ಮಕ್ಕ 'ಅವ್ವ ಈಗಲಾದ್ರು ಸುಮ್ನೆ ಇರವ್ವ. ಸಣ್ಣ ಹುಡುಗಿದ್ದಾಗ ನಾನೇನೇ ಕೆಲಸ ಮಾಡಿದ್ರು ಸೇರಲಿಲ್ಲ. ಈಗೊಂದು ಒಳ್ಳೆ ಕೆಲ್ಸನ ನನ್ಗಂಡನ ಜೊತೆಗೆ ಮಾಡ್ತಿನಿ. ಅವ್ವ ಆ ಆಲದ ಕೊಂಬೆ ನೆಟ್ಟು ನೀರು ಹಾಕುತ್ತಿದ್ದಾಗ ಆಗುವ ಸಂತೋಸ ಹೇಳಲಿಕ್ಕೆ ಆಗಲ್ಲ ಕಾಣವ್ವ. ಅವು ನೆರಳಾಗುವಂತಹ ಮರ ಆಗ್ಲಿ, ಆಗ ನಿಂಗೆ ಗೊತ್ತಾಗ್ತೆ. ನನ್ನ ಮಗಳು–ಅಳಿಯ ಎಂತಹ ಒಳ್ಳೆ ಕೆಲ್ಸ ಮಾಡ್ಯಾರೇ ಅಂತ. ಅವ್ವ



ಸುಮ್ನೆ ಹೊಟ್ಟೆ ತುಂಬಾ ಉಣ್ಣು, ಕಣ್ತುಂಬ ನಿದ್ದೆ ಮಾಡು' ಎಂದ್ಲು. ವಿಜಿಯಮ್ಮಗೆ ಎಲ್ಲಿಲ್ಲದ ಸಿಟ್ಟು ಬಂತೋ ಏನೋ 'ಏನೇ ನಿನ್ನ ಮನೆ ಕೂಳಿಗೆ ಬಂದಿನಿ ಏನೇ, ಏನೋ ಕಷ್ಟ ಪಡ್ತಳಲ್ಲಾ ಹಂಗ ಕಷ್ಟ ಪಡದೋ ಬೇಡ ಅಂತ ಹೇಳಿದ್ರೆ ಸುಮ್ನೆ ಉಣ್ಣು ಅಂತಿಯಾ ನಾ ಈಗ್ಲೇ ಹೊರಟೇ ಅಂತ ಉಣ್ಣೋದು ಬಿಟ್ಟು ಎದ್ದೆಬಿಟ್ಲು. ಆಗ ಚಿಕ್ಕಯ್ಯನೇ ತಾಯಿ–ಮಗಳಿಗೆ ಸಮಾಧಾನ ಹೇಳಿ ಸುಮ್ಮನೇ ಮಾಡಿದ್ರು. ಬೆಳಿಗ್ಗೆ ಎದ್ದವಳೇ ಮಗಳ ಮೇಲೆ ಮುನಿಸಿಕೊಂಡೇ ತನ್ನೂರಿಗೆ ಹೋದ್ಲು.

ತಿಮ್ಮಕ್ಕ–ಚಿಕ್ಕಯ್ಯ ಹಾರೆ ಛಲಕೆ ಹೊತ್ತುಕೊಂಡು ಬಂದು ಹತ್ತು ಗುಣಿಗಳನ್ನು ತೋಡಿ ಅನಂತರ ಕೂಲಿ ಕೆಲಸಕ್ಕೆ ಹೋದ್ರು. ಸಂಜೆ ಬರುವಾಗ ಆಲದ ಕೊಂಬೆಗಳ ಗುಣಿ ಹತ್ತಿರ ಹೋಗಿ ಪಾತಿ ಮಾಡಿದ್ರು. ಯಾರೋ ಎರಡು ಕೊಂಬೆಗಳ್ನ ಕಿತ್ತುಹಾಕಿದ್ರು. ಅದ್ನ ನೋಡಿ ತಿಮ್ಮಕ್ಕಗೆ ತುಂಬಾ ದುಃಖ ಆಯಿತು. ಅಲ್ಲೇ ಕುತ್ಕೊಂಡು ತುಂಬಾ ಅಳತೊಡಗಿದ್ರು. ಚಿಕ್ಕಯ್ಯನೇ ಸಮಾಧಾನ ಮಾಡಿ ಮತ್ತೇ ಆ ಕೊಂಬೆಗಳನ್ನ ನೆಟ್ಟು ನೀರು ಹಾಕಿದ್ರು. ಬೆಳಿಗ್ಗೆ ತೊಡಿದ್ದ ಹತ್ತು ಗುಣಿಗಳಿಗೂ ನೀರು ಹಾಕಿ, ಮನೆಗೆ ಬಂದು 'ಯಾ ನನ್ನ ಸವತಿ ಮಕ್ಕಳೇನ ನನ್ನ ಗಿಡಗಳನ್ನ ಕಿತ್ತು ಹಾಕಿದರೆ ಅವರ್ಕೈಗೆ ಹಾವು ಕಡೀಲಿ' ಅಂತ ತಿಮ್ಮಕ್ಕ ಬೈಯತೊಡಗಿದಳು. ರಂಗವ್ವ ಸುಮ್ನೆ ಇರದೇ 'ಆ ಜಾಗ ನಿಮ್ಮಪ್ಪನ್ದ, ನಿಮ್ಮಜ್ಜನ್ದ ಅಂತ ಜಗಳ ಸುರ್ವು ಮಾಡಿದ್ಲು'. ಚಿಕ್ಕಯ್ಯ ಹೆಂಡ್ತಿಗೆ ಸಮಾಧಾನ ಮಾಡಿ ಸುಮ್ನೆ ಮಾಡಿದ. ರಾತ್ರಿ ಊಟ ಮಾಡದೆ ತಿಮ್ಮಕ್ಕ ಅಳುತ್ತಾ ಹಂಗೆ ಮಲಗಿ ಬಿಟ್ಲು. ಬೆಳಗಿನ ಜಾವ ಆಕೆ ಮೊದ್ಲು ಎದ್ದು, ಗಂಡ್ನ ಕರ್ಕೊಂಡು, ಆಲದ ಕೊಂಬೆಗಳ್ನ ತಂದು ನೆಟ್ರು. ಮತ್ತೇ ಯಥಾ ರೀತಿ ಕೂಲಿ ಕೆಲಸಕ್ಕೆ ಹೋದ್ರು. ದಿನಾಲು ಅವುಗಳ ಹಾರೈಕೆ ಮಾಡೋದಕ್ಕೆ ಶೇಕಡ ಐವತ್ತರಷ್ಟು ಇನ್ನ ಐವತ್ತರಷ್ಟು ತಮ್ಮ ಹೊಟ್ಟೆಪಾಡಿಗೆ ಆಸಕ್ತಿಯನ್ನು ಕೊಡುತ್ತಿದ್ದರು.

೧೯೭೨ರ ಜೂನ್‌ನಲ್ಲಿ ಒಂದು ವಾರದ ತನಕ ಮುವತ್ತು ಗುಣಿಗಳನ್ನ ತೋಡಿ ಆಲದ ಕೊಂಬೆಗಳ್ನ ನೆಟ್ಟು, ತಿಮ್ಮಕ್ಕ–ಚಿಕ್ಕಯ್ಯ ಅವರಿವರು ಏನೇ ಟೀಕೆ ಮಾಡಿದ್ರು, ಛಲದಿಂದ ತಾವು ಹಿಡಿದ ಕೆಲ್ಸ ಮಾಡ ತೊಡಗಿದ್ರು. ಹಗಲಿರುಳು ಆಲದ ಗಿಡಗಳ ಹಾರೈಕೆಯಲ್ಲಿ ಕಾಲ ಕಳೆಯತೊಡಗಿದ್ರು. ಒಬ್ಬರು ಕೂಲಿ ಕೆಲ್ಸಕ್ಕೆ ಹೋದರೇ ಇನ್ನೊಬ್ಬರು ಗಿಡಗಳನ್ನ ಹಾರೈಕೆ ಮಾಡ್ತಿದ್ದರು.

೧೯೭೩ರ ಮೇ ತಿಂಗಳಲ್ಲಿ ಒಂದು ವಾರದ ಕಾಲ ಮುಂಗಾರು ಮಳೆ ಬಂತು. ಭೂಮಿ ಒಳ್ಳೆ ಹದವಾಗಿತ್ತು. ಚಿಕ್ಕಯ್ಯ–ತಿಮ್ಮಕ್ಕ ಆ ತಿಂಗಳಲ್ಲಿ ಮುವತ್ತೈದು ಗುಣಿಗಳನ್ನು ತೆಗೆದು ಆಲದ ಕೊಂಬೆಗಳನ್ನು ನೆಟ್ರು. ಅವುಗಳಿಗೆ ಈಚಲಗರಿ ಕಟ್ಟಿದ್ರು. ಕೆಲವಕ್ಕೆ ಜಾಲಿ ಬೇಲಿ ಕಟ್ಟಿದ್ರು ಮಳೆ ಒಂದ್ಹದಿನೈದು ದಿನಗಳೇನಾದ್ರು ಬರದೇ ಹೋದ್ರೆ, ಗಂಡ ಹೆಂಡ್ತಿ ಒಂದೊಂದು ಗಿಡಕ್ಕೆ ನಾಲ್ಕೈದು ಗಡಿಗೆ ನೀರು ಹಾಕುತ್ತಿದ್ರು. ಹೊಂಗೆ ಎಲೆ, ಬೇವಿನ ಎಲೆ, ಆಲದ ಎಲೆ, ತಂಗಟಿ ಸೊಪ್ಪು ತಂದು, ಪ್ರತಿ ಗುಣಿಗೂ ಹಾಕುತ್ತಿದ್ರು. ಅದರ ಮೇಲೆ ಮಣ್ಣು ಹಾಕಿ ನೀರು ಹಾಕುತ್ತಿದ್ರು. ಅದೊಂದು ರೀತಿ ಕಾಂಪೋಸ್ಟ್ ಗೊಬ್ಬರ ಆಗುತ್ತಿತ್ತು. ಆಲದ ಕೊಂಬೆಗಳು ದಿನದಿನಕ್ಕೂ ಚೆನ್ನಾಗಿ ಬೆಳೆಯತೊಡಗಿದವು.

ಸಮಷ್ಠಿಯ ಒಂದು ಘಟಕ ವ್ಯಷ್ಠಿ. ಆ ವ್ಯಕ್ತಿಯು ತನ್ನ ಬಾಳಿನಲ್ಲಿ ಸಂತೃಪ್ತಿ ಸಮಾಧಾನಗಳನ್ನ ಯಾವುದೇ ಮಾರುಕಟ್ಟೆ, ಸಂತೆಗಳಿಂದ ತರಲು ಸಾಧ್ಯವಿಲ್ಲ. ದುಡ್ಡು ಇದ್ದರೆ, ಏನೆಲ್ಲ ಕೊಳ್ಳಬಹುದು, ಪಡೆಯಬಹುದೆನ್ನುತ್ತಾರೆ. ಆದರೆ ಶಾಂತಿನೆಮ್ಮದಿಯನ್ನು ದುಡ್ಡಿನಿಂದ ಪಡೆಯಲಾಗದು. ಅದು ನಮ್ಮ ನಮ್ಮ ಅಂತರಂಗದ ವಿಕಾಸದಿಂದ ನಾವು ಮಾಡುವ ಸತ್ಯಶುದ್ದ ಕಾಯಕದಿಂದ ಮಾತ್ರ ದೊರೆಯುವುದು. ಮನದೊಳಗೆ ನೆಮ್ಮದಿ ಇಲ್ಲದೆ ಹೋದರೇ ಅದು ಅಗ್ನಿಕುಂಡವಾಗುತ್ತದೆ. ಅದು ಸದಾನಂದದ ಕುಂಡವಾಗುವಂತೆ ನೋಡಿಕೊಳ್ಳಲು ಆಸೆಯ ಅನಾಹುತವನ್ನು ಅರಿಯಬೇಕು. ತಿಮ್ಮಕ್ಕ–ಚಿಕ್ಕಯ್ಯರು ಯಾವುದೇ ಆಸೆ–ಆಕಾಂಕ್ಷೆಗಳಿಲ್ಲದೆ ಸಾರ್ವಜನಿಕ ರಸ್ತೆಯಲ್ಲಿ ಗಿಡಗಳನ್ನು ನೆಟ್ಟು ಬೆಳೆಸುವುದರಲ್ಲಿ ಆಪಾರ ಆನಂದವನ್ನು ಪಡೆಯುತ್ತಿದ್ದರು.

೧೯೭೪ನೇ ವರ್ಷದಲ್ಲಿ ಮುವತ್ತು, ೧೯೭೫ರಲ್ಲಿ ಮುವತ್ತು, ೧೯೭೬ರಲ್ಲಿ ನಲವತ್ತು ಗುಣಿಗಳನ್ನು ತೋಡಿ, ಆಲದ ಕೊಂಬೆಗಳನ್ನು ನೆಟ್ರು. ವರ್ಷದಿಂದ ವರ್ಷಕ್ಕೆ ಕೊಂಬೆಗಳ್ನ ನೆಡುವುದನ್ನ ಹೆಚ್ಚಿಸಿದ್ರು. ಹಿಂದೆ ನೆಟ್ಟ ಕೊಂಬೆಗಳು ಗಿಡಗಳಾಗಿ ಬೆಳಯತೊಡಗಿದವು. ಅವುಗಳು ತಿಮ್ಮಕ್ಕ–ಚಿಕ್ಕಯ್ಯರ ನೀರನ್ನು ಆಶ್ರಯಿಸದೇ, ಮಳೆ ನೀರಿಗೆ ಸಮೃದ್ಧವಾಗಿ ಬೆಳೆಯತೊಡಗಿದವು. ಒಂದೆರೆಡು ವರ್ಷದ ಕೊಂಬೆಗಳಿಗೆ ಮಾತ್ರ ನೀರು ಉಣಿಸುವುದನ್ನು, ರಕ್ಷಣೆಗೆ ಈಚಲು ಗರಿ ಕಟ್ಟುವುದನ್ನು ಮಾಡುತ್ತಿದ್ದರು.

೧೯೭೭ರಲ್ಲಿ ಮೂವತ್ತೈದು ಆಲದ ಕೊಂಬೆಗಳನ್ನ ನೆಟ್ಟ ಚಿಕ್ಕಯ್ಯ–ತಿಮ್ಮಕ್ಕ ೧೯೭೮ರಲ್ಲಿ ಮೂವತ್ತೈದು ಕೊಂಬೆಗಳನ್ನು ನೆಟ್ರು. ಒಂದು ದಿನ ಕೂಲಿ ಕೆಲ್ಸಕ್ಕೆ ಬೆಳಗ್ಗೆ ಹೋಗಿ, ಮಧ್ಯಾಹ್ನ ಬರುವಾಗ ತಾವು ಹಾಕಿದ ಗಿಡಗಳು ನೆರಳಾಗುತ್ತಿದ್ದವು. ಆ ನೆರಳಲ್ಲಿ ಕುಳಿತು ಗಂಡ–ಹೆಂಡತಿ ಅಡಿಕೆ ಎಲೆ ಹಾಕಿಕೊಂಡ್ರು. ಚಿಕ್ಕಯ್ಯ 'ಲೇ ಯಾಕೋ ತಲೆಯಲ್ಲಿ ಬುಳು ಬುಳು ಅಂತಿದೆ ಹೇನು ಏನಾದ್ರೂ ಇರಬೇಕು, ತಲೆ ನೋಡು' ಎಂದ. ಅದಕ್ಕೆ ತಿಮ್ಮಕ್ಕ 'ಆಗಲಿ ಮಾಮ, ನನ್ನ ತೊಡೆಯ ಮೇಲೆ ಮಲಗಿಕೋ, ಹೇನು ನೋಡ್ತೀನಿ ಅಂತ ತಲೆಯಲ್ಲಿ ಹೇನು ಹುಡುಕುತ್ತಾ ಇದ್ರು. ಅಷ್ಟೊತ್ತಿಗೆ ಒಬ್ಬ ಸಾಧು ಅವರ ಹತ್ತಿರ ಬಂದು ನೆರಳಲ್ಲಿ ಕುಳಿತ್ಕೊಂಡ. 'ಅವ್ವ ಒಸಿ ಅಡಿಕೆ ಎಲೆ ಕೊಡು' ಎಂದ. ತಿಮ್ಮಕ್ಕ ಗಂಡ್ನ ಎಬ್ಬಿಸಿದ್ಲು ಎಚ್ಚರಗೊಂಡ ಚಿಕ್ಕಯ್ಯ ಸಾಧುವಿಗೆ ನಮಸ್ಕಾರ ಮಾಡಿದ್ರು. ತಿಮ್ಮಕ್ಕ ಸಾಧುವಿಗೆ ನಮಸ್ಕಾರ ಮಾಡಿ ಅಡಿಕೆ ಎಲೆ ಕೊಟ್ರು. ಸಾಧು ಅಡಿಕೆ ಎಲೆ ಹಾಕಿಕೊಂಡು 'ಇಂತಹ ನೆರಳಾಗುವ ಗಿಡಗಳನ್ನ ಹಾಕಿದೋರಿಗೆ ದೇವರು ಒಳ್ಳೆದು ಮಾಡ್ಲಿ' ಎಂದ. ಸ್ವಲ್ಪ ಹೊತ್ತು ಸುಮ್ಮನಿದ್ದ ಚಿಕ್ಕಯ್ಯ 'ಸ್ವಾಮಿ ನಮಗೆ ಮಕ್ಕಳಿಲ್ಲ ಆ ದುಃಖನಾ ಹ್ಯಾಂಗ ಮರೆಯೋಣ ಅಂತ ಯೋಚನೆ ಮಾಡ್ದಿವಿ. ಮರಗಳನ್ನ ಹಾಕೋಣ ಅಂತ ತೀರ್ಮಾನ ಮಾಡಿ, ಈ ಗಿಡಗಳ್ನ ನಾವೇ ಸ್ವಾಮಿ ಬೆಳೆಸಿದವರು' ಎಂದ. ತಕ್ಷಣವೇ ಆ ಸಾಧು ಎರಡು ಕೈಜೋಡಿಸಿ ಆ ದಂಪತಿಗಳಿಗೆ ಶರಣು ಮಾಡಿ 'ನಿಮ್ಮ ಜೀವನ ಸಾರ್ಥಕವಾಯಿತು ಕಣ್ರಪ್ಪ' ಎಂದ್ರು. ತಕ್ಷಣವೇ ತಿಮ್ಮಕ್ಕ – 'ಸ್ವಾಮಿಗಳೇ ಜೀವನವೆಂದರೇನು?' ಎಂದ್ರು. ಅದಕ್ಕೆ ಸಾಧುಗಳು ಒಂದು ಕಥೆನೇ ಹೇಳಿದ್ರು. 'ತಿಮ್ಮಕ್ಕ–ಚಿಕ್ಕಯ್ಯರೆ ಕೇಳ್ರಿ 'ಒಬ್ಬ ಯೋಗಿಗೆ ನಿಮ್ಮ ತರಹವೇ ಜೀವನ ಎಂದರೇನು?' ಎಂಬ ಪ್ರಶ್ನೆ ಹಲವಾರು ವರ್ಷಗಳ ಕಾಲ ಕಾಡುತ್ತಿತ್ತು. ಅದಕ್ಕೆ ಆ ಯೋಗಿ ಏನ್ಮಾಡಿದನೆಂದರೆ ಈ



ಮನುಷ್ಯರ ಹತ್ತಿರ ಜೀವನದ ಬಗ್ಗೆ ಕೇಳೋದೆ ಬೇಡ. ಮನುಷ್ಯರಿಗಿಂತ ತಂಬಾ ಪ್ರಾಮಾಣಿಕವಾಗಿ ಜೀವಿಸುವ ಪಶು–ಪಕ್ಷಿ, ಗಿಡ–ಗಂಟೆ, ಹಳ್ಳ–ಕೊಳ್ಳಗಳನ್ನು ಕೇಳೋಣವೆಂದು ತೀರ್ಮಾನಿಸಿ, ಒಂದು ದಟ್ಟವಾದ ಅರಣ್ಯಕ್ಕೆ ಹೋದ. ಮೊದಲಿಗೆ ಮಧುವನ್ನು ಸವಿಯುತ್ತಿರುವ ಹೆಜ್ಜೇನುಗಳನ್ನು ನೋಡಿ ಅವುಗಳಿಗೆ 'ಜೀವನವೆಂದರೇನು?' ಎಂದು ಕೇಳಿದ. ಅದಕ್ಕೆ ಆ ಹೆಜ್ಜೇನುಗಳು 'ಪ್ರತಿಕ್ಷಣ ಪ್ರತಿದಿನ ಒಳ್ಳೆ ಮಕರಂದವನ್ನು ಸಂಗ್ರಹಿಸುವುದು ಅದನ್ನೆಲ್ಲ ಒಟ್ಟುಗೂಡಿಸಿ, ಆ ಸವಿಯನ್ನು ಸವಿಯುವುದು. ಎಲ್ಲರಿಗೂ ಸವಿಯನ್ನು ಹಂಚುವುದು. ಇದುವೇ ಜೀವನ' ಎಂದು ಹೇಳಿದವು. ಯೋಗಿಗೆ ತುಂಬಾ ಸಂತೋಷವಾಯಿತು. ಮತ್ತೇ ಮುಂದೆ ಮುಂದೆ ನಡೆಯತೊಡಗಿದ. ಕುಹು ಕುಹೂ ಎಂದು ಇಂಪಾಗಿ ಕೂಗುವ ಕೋಗಿಲೆಯನ್ನು ಕಂಡು ಅದಕ್ಕೆ 'ಜೀವನವೆಂದರೇನು? ಎಂದು ಕೇಳಿದ. ಕೋಗಿಲೆ "ಈ ಸೃಷ್ಟಿಯ ಸೊಬಗನ್ನು ಅನುಭವಿಸುತ್ತಾ, ಸಂತಸದಿಂದ ಕೂಗಿ, ಸಂತಸಗೊಳಿಸುವುದೇ ಜೀವನ' ಎಂದಿತು. ಆ ಯೋಗಿ ತುಂಬಾ ಸಂತಸಗೊಂಡು, ಚಿಂತನೆ ಮಾಡುತ್ತಾ ಮುಂದೆ ಮುಂದೆ ನಡೆಯತೊಡಗಿದ. ಅಲ್ಲೊಂದು ಪ್ರಶಾಂತವಾಗಿ ಜುಳುಜುಳನೇ ಹರಿಯುವ ನದಿಯನ್ನು ಕಂಡು ಅದಕ್ಕೂ 'ಜೀವನವೆಂದರೇನು'? ಎಂದು ಪ್ರಶ್ನಿಸಿದ. ಅದಕ್ಕೆ ಆ ನದಿ 'ಎಲ್ಲಿ ನಿಲ್ಲದೆ ಹರಿಯುವುದು, ಸದಾ ಹಸನಾಗುವುದು, ಈ ಜಗತ್ತನ್ನು ಹಸಿರಾಗಿಸುವುದು, ಒಂದು ದಿನ ಮಹಾಸಾಗರದೊಳಗೆ ಬೆರೆತು ಮರೆಯಾಗುವುದೇ ಜೀವನ' ಎಂದಿತು. ಯೋಗಿಯು ತುಂಬಾ ಸಂತಸಗೊಂಡು, ಇದು ನಿಜವಾಗ್ಲು ಜೀವನ. ನಾನು ಕೂಡ ಜೇನುನೊಣಗಳಂತೆ, ಕೋಗಿಲೆಯಂತೆ, ನದಿಯಂತೆ ಈ ಜೀವನವನ್ನು ಸಾರ್ಥಕಗೊಳಿಸಿಕೊಳ್ಳಬೇಕೆಂದು ತೀರ್ಮಾನಿಸಿ, ಅಂತೆಯೇ ತನ್ನ ಜೀವನವನ್ನು ಅನುಷ್ಠಾನಗೊಳಿಸಿದ. ಅಂತೆಯೇ ನಿಮ್ಮಿಬ್ಬರ ಈ ನಿಸ್ವಾರ್ಥ ಸೇವೆ ನಿಮ್ಮ ಜೀವನವನ್ನು ಸಾರ್ಥಕಗೊಳಿಸಿದೆ. ಈ ನಿಮ್ಮ ಜೀವನ ಪಾವನವಾಗಿದೆ. ಮನುಕುಲಕ್ಕೆ ಮಾದರಿಯಾಗಿದೆ. ನಿಮಗೆ ಒಳ್ಳೆಯದಾಗಲಿ" ಎಂದು ಹಾರೈಸಿ ಆ ಸಾಧು ಹೊರಟು ಹೋದ. ಅಂದು ಚಿಕ್ಕಯ್ಯ–ತಿಮ್ಮಕ್ಕ ಅವರಿಗೆ ಆದ ಸಂತಸಕ್ಕೆ ಮಿತಿಯಿಲ್ಲ. ಅಷ್ಟೊಂದು ಆನಂದವನ್ನು ಅನುಭವಿಸಿದರು. ಮಕ್ಕಳನ್ನು ಮುದ್ದಿಸಿ, ಆನಂದಿಸುವಂತೆ ಬೆಳೆದು ನಿಂತಿರುವ ತಮ್ಮ ಎಲ್ಲ ಮರಗಳ ಹತ್ತಿರ ಹೋಗಿ, ಮುಟ್ಟಿ ಮುಟ್ಟಿ ಆನಂದಿಸಿದರು. ಅಷ್ಟೊತ್ತಿಗೆ ಸಂಜೆ ಹೊತ್ತಾಗಿತ್ತು. ಮನೆಗೆ ಬಂದ್ರು.

ಕುಂತ್ರು ನಿಂತ್ರು ಮರಗಳು, ಗಿಡಗಳು, ಚಿಗುರೊಡೆಯುವ ಕೊಂಬೆಗಳು, ಅವುಗಳಿಗೆ ಕಟ್ಟಿದ ಈಚಲಗರಿ, ಕೊಂಬೆಗಳಿಗೆ ಸವರಿದ ಸಗಣಿ ಉಂಡೆ, ನೀರು ತಂದು ಹಾಕುವ ಗಳ, ಗಡಿಗೆಗಳು, ಗುಣಿ ತೋಡುವ ಹಾರೆ–ಛಲ್ಕೆ, ಕುಡುಗೋಲು–ಮಚ್ಚು, ಗುಣಿಗಳಿಗೆ ಹಾಕುವ ಸೊಪ್ಪು ಸದೆಗಳದೇ ಧ್ಯಾನ. ಅವುಗಳೇ ಅವರಿಗೆ ದೇವರು–ದಿಂಡ್ರು. ಹೀಗೆ ಗಿಡ–ಮರಗಳನ್ನು ಬೆಳೆಸುವ ಕಾಯಕದಲ್ಲಿ ತೊಡಗಿದ್ದ ಚಿಕ್ಕಯ್ಯ–ತಿಮ್ಮಕ್ಕ ೧೯೭೯ನೇವರ್ಷ ಏಪ್ರಿಲ್ ತಿಂಗಳ ಮೂರನೇ ವಾರದಲ್ಲಿ ಗುಣಿ ತೋಡಲು ಹೋದ್ರು. ಮೊದಲನೇ ದಿನದ ಬೆಳಗ್ಗೆ ಹತ್ತು ಗುಣಿಗಳನ್ನು ತೋಡಿದ್ರು ಆನಂತರ ರಸ್ತೆ ರಿಪೇರಿ ಕೆಲಸಕ್ಕೆ ಕೂಲಿ ಕರೆದಿರುವರೆಂದು ಜಲ್ಲಿ ಕುಟ್ಟಲಿಕ್ಕೆ ಹೋದ್ರು. ಅವೊತ್ತು ತಿಮ್ಮಕ್ಕ ತುಂಬಾ ಹುರುಪಿನಿಂದಲೇ ಜಲ್ಲಿ ಕುಟ್ಟುತ್ತಾ ಇದ್ದರು. ಮಟ ಮಟ ಮಧ್ಯಾಹ್ನ ಹೊತ್ತಿನ್ಯಾಗ ಜಲ್ಲಿ ಕುಟ್ಟುತ್ತಾ ಇರುವಾಗ ಒಂದು ಜಲ್ಲಿಯ ಸಣ್ಣ

ತುಣುಕು ಕಣ್ಣಿಗೆ ಬಡಿದು ಬಿಡ್ತು. 'ಅಯ್ಯೋಪ್ಪೋ ಸತ್ತನ್ಯಪ್ಪಾ ನನ್ನ ಕಣ್ಣು ಹೋಯಿತಪ್ಪೋ' ಅಂತ ಕೂಗಿಕೊಂಡ್ರು. ಅಲ್ಲೆ ಕೆಲಸ ಮಾಡುತ್ತಿದ್ದವರೆಲ್ಲ ಬಂದ್ರು. ಚಿಕ್ಕಯ್ಯ ತೊಡೆ ಮೇಲೆ ಮಲಗಿಸಿಕೊಂಡು ಕಲ್ಲು ಬಡಿದಿರುವ ಎಡಗಣ್ಣನ್ನು ಬಿಡಿಸಿ ನೋಡಿದ್ರು ಗಾಳಿ ಊದಿದ್ರು ಉರಿ–ಹೊಡೆತ ಬಿಡಲಿಲ್ಲ. ಹುಲಿಕಡ್ಡಿ ತಂದು, ಅದರ ಹಾಲು ಬಿಟ್ಟರು. ಆಗ ಒಂದಿಷ್ಟು ಕಣ್ಣು ತಣ್ಣಾಗಾದ್ರೂ ಮತ್ತೇ ಅದೇ ಉರಿ–ಹೊಡೆತ ಹೆಚ್ಚಾಯಿತು. ಆಸ್ಪತ್ರೆಗೆ ಕರೆದುಕೊಂಡು ಹೋದರು. ಡಾಕ್ಟರುಗಳಿಗೂ ತೋರಿಸಿದ್ರು. ಅವರೆಲ್ಲ ಪ್ರಯತ್ನ ಮಾಡಿದ್ರು ಎಡಗಣ್ಣಿಗೆ ದೃಷ್ಟಿನೇ ಬರಲಿಲಿಲ್ಲವಾದ್ರು ತಿಮ್ಮಕ್ಕ ಧೈರ್ಯಗುಂದಲಿಲ್ಲ.

ಹದಿನೈದು ದಿನ ವಿಶ್ರಾಂತಿ ಪಡೆದ ಮೇಲೆ ಮತ್ತೇ ಚಿಕ್ಕಯ್ಯನಿಗೆ ಹೇಳಿದ್ರು 'ಮಾಮ ಆ ಗುಣಿಗಳನ್ನ ತೋಡಿ, ಸುಮ್ನೆ ಬಿಟ್ರೆ, ಮಣ್ಣು ತುಂಬಿಕೊಂಡ್ಬಿಡುತ್ತೇ. ತೋಡಿದ್ದು ಪ್ರಯೋಜನಕ್ಕೆ ಬರೋಲ್ಲ ನಡಿ ಈವೊತ್ತು ಹೋಗಿ ಆಲದ ತುಂಡುಗಳನ್ನು ತಂದು ನೆಡೋಣ' ಎಂದ್ರು. ಅದಕ್ಕೆ ಚಿಕ್ಕಯ್ಯ 'ಅಲ್ಲ ನಿನ್ನ ಕಣ್ಣು ನೋವಾಗಿದೆ. ಸುಮ್ನೆ ಇನ್ನೂ ಸ್ವಲ್ಪ ದಿನ ಇರು. ನೀನು ಚೆನ್ನಾಗಿ ಆದ ಮೇಲೆ ಹೋಗಿ ಕೊಂಬೆ ನೆಡೋಣ' ಅಂತ ಚಿಕ್ಕಯ್ಯ ಹೇಳಿದ್ದಕ್ಕೆ 'ನೋಡು ಮಾರಾಯ ನಾನು ಚೆನ್ನಾಗಿದಿನಿ ನೀ ಹೊರಡು ಇನ್ನೂ ಇಪ್ಪತ್ತೈದು ಗುಣಿಗಳನ್ನು ತೋಡೋಣ. ಆಮೇಲೆ ಒಂದೆ ಸಾರಿ ನಾವೇ ನೆಟ್ಟ ಮೊದಲ ವರ್ಷದ ಆಲದ ಮರದಲ್ಲಿನ ಕೊಂಬೆಗಳನ್ನೆ ಕತ್ತರಿಸಿ ನೆಡೋಣ' ಎಂದ್ರು. ಚಿಕ್ಕಯ್ಯ ಆಯಿತು ನಡಿ ಅಂತ ಹೇಳಿ ಹಾರೆ–ಛಲ್ಕೆ ಹೊತ್ತುಕೊಂಡು ರಸ್ತೆ ಬದಿಗೆ ಹೋದ್ರು. ಅವೊತ್ತು ಹತ್ತು ಗುಣಿಗಳ್ನ, ಮಾರನೆಯ ದಿನ ಹತ್ತು, ಇನ್ನೊಂದು ದಿನ ಐದುಗುಣಿಗಳನ್ನ ತೋಡಿದ್ರು. ಒಂದೆರೆಡು ದಿನ ಈಚಲಗರಿಗಳನ್ನು ಕೂಡಿಟ್ಟರು. ನಾಲ್ಕೈದು ದಿನಗಳು ಕಾಲ ಗುಣಿಗಳಿಗೆ ನೀರು ಹಾಕಿದ್ರು. ನಂತರ ಮೊದಲು ವರ್ಷ ಹಾಕಿದ ಕೊಂಬೆಯ ಮರಗಳಲ್ಲಿ ಕೊಂಬೆಗಳನ್ನ ಕತ್ತರಿಸಿದ್ರು. ಮೂವತ್ತೈದು ತುಂಡುಗಳನ್ನು ತಿಮ್ಮಕ್ಕನವರು ನೆಟ್ಟು ಅವುಗಳಿಗೆ ಸಗಣಿಯನ್ನು ಹಚ್ಚುತ್ತಾ ಬಂದ್ರು. ಚಿಕ್ಕಯ್ಯರು ಈಚಲಗರಿ ಕಟ್ಟಿದರು. ಹೀಗೆ ಸುಮಾರು ಒಂದು ದಶಕಗಳ ಕಾಲ ಆಲದ ಕೊಂಬೆ ನೆಡುವುದು, ನೀರು ಹಾಕುವ ಕಾಯಕದಲ್ಲಿ ನಿರತರಾಗಿ ಬೆಳೆಸಿದ್ರು. ಒಂದು ದಶಕ ಕಾಲಕ್ಕೂ ಮೀರಿದ ಗಿಡಮರ ಪೋಷಿಸುವಂತಹ ತಪಸ್ಸಿನಿಂದ ತಿಮ್ಮಕ್ಕ–ಚಿಕ್ಕಯ್ಯರು ಆಗಾಧವಾದ ಆನಂದವನ್ನು ಅನುಭವಿಸಿದ್ರು. ಮುಂದುವರೆದಂತೆ ದಿನಾಲೂ ಆ ಗಿಡಮರಗಳನ್ನು ರಕ್ಷಣೆ ಮಾಡುವುದು ಮತ್ತು ಹೊಟ್ಟೆ–ಬಟ್ಟೆಗಾಗಿ ಅವರಿವರ ಹೊಲದಲ್ಲಿ ಕೂಲಿ ಕೆಲಸದಲ್ಲಿ ನಿರತರಾಗುವುದು ಮುಗ್ಧ ಜೀವಿಗಳ ಕಾಯಕವಾಗಿತ್ತು.

ನೆಂಟರು, ಸಂಬಂಧಿಕರು ಕರೆದ ಹಬ್ಬ, ಜಾತ್ರೆಗಳಿಗೆ ತಿಮ್ಮಕ್ಕ–ಚಿಕ್ಕಯ್ಯ ಜೊತೆಗೂಡಿ ಹೋಗುವರು. ಅಲ್ಲಿ ಸೇರಿದ ಸಂಬಂಧಿಕರಲ್ಲಿ ಕೆಲವರು ಅವರು ಗಿಡಮರ ಸಾಕುವುದಕ್ಕೆ ಸಂತೋಷಪಡುತ್ತಾ, ಮೆಚ್ಚುಗೆ ಸೂಚಿಸುವರು. ಕೆಲವರು ಅಸೂಯೆಪಡುತ್ತಾ ಹೊಟ್ಟೆಕಿಚ್ಚಿನಿಂದ ವ್ಯಂಗ್ಯವಾಗಿ ಮಾತಾಡುವರು. ಮರಗಳ್ನ ನೋಡಿದವರು, ಆ ನೆರಳಿನಲ್ಲಿ ತಂಪಾದ ಸುಖವನ್ನು ಅನುಭವಿಸಿದವರು ತಿಮ್ಮಕ್ಕ–ಚಿಕ್ಕಯ್ಯನ್ನ ನೋಡೋದೆ ಒಂದು ರೀತಿ ಸೌಭಾಗ್ಯ ಅಂತ ಭಾವಿಸಿಕೊಂಡು ನೋಡಲು ಬಂದು, ಮಾತಾಡಿಸಿ, ಖುಷಿಯಾಗಿ ಹೋಗುವರು. ತಿಮ್ಮಕ್ಕ–ಚಿಕ್ಕಯ್ಯ ಊರೊಳಗೆ ಓಡಾಡುತ್ತಿದ್ದರೆ ದೊಡ್ಡರು–ಸಣ್ಣರು ಗೌರವ ಕೊಡಲು ಪ್ರಾರಂಭಿಸಿದ್ರು.



'ಹಾಸಿಗೇ ಹಾಸೆಂದಾ ಮಲ್ಲೀಗಿ ಮುಡಿಯೆಂದಾ ।
ಬ್ಯಾಸತ್ತರ ಮಡದಿ ಮಲಗೆಂದ । ನನರಾಯಾ ।
ತನ ನೋಡಿ ತವರು ಮರಿಯೆಂದಾ ॥'

ಎಂಬ ಜನಪದ ವಾಣಿಯಂತೆ ತಿಮ್ಮಕ್ಕನ ತವರೂರು ಮರೆಯಿಸಿದ ಬಿಕ್ಕಲು ಚಿಕ್ಕಯ್ಯ, ಹೆಂಡ್ತಿಯನ್ನು ಚೆನ್ನಾಗಿ ನೋಡಿಕೊಂಡವರು. ತಿಮ್ಮಕ್ಕ ಚಿಕ್ಕಯ್ಯನ ಬಗ್ಗೆ ಅತೀವ ಪ್ರೀತಿ, ಕಾಳಜಿ ಇಟ್ಟುಕೊಂಡವರು. ಅವರ ಸಂಸಾರದ ಬಂಡಿಯನ್ನು ಏರುಪೇರು ಮಾಡುವ ಸಲುವಾಗಿ ನೆರೆಹೊರೆಯವರು. ಸಂಬಂಧಿಕರು ಪ್ರಯತ್ನಪಟ್ಟರು. ಇಬ್ಬರಲ್ಲೂ ವೈಮನಸ್ಸು ತಂದಿಟ್ಟರು. ಅತ್ತೆ–ಸೊಸೆಗೆ ಜಗಳ, ಅತ್ತಿಗೆ–ಮೈದುನನಿಗೆ ಜಗಳ, ಅಣ್ಣ–ತಮ್ಮನಿಗೆ ಜಗಳ ತಂದಿಟ್ಟು ಖುಷಿಪಟ್ಟರು. ಎಷ್ಟೇ ಕಷ್ಟ ಬಂದರು ತಿಮ್ಮಕ್ಕ–ಚಿಕ್ಕಯ್ಯರು ಹೆದರದೆ ಸಮಸ್ಯೆಗಳನ್ನು ಎದುರಿಸಿದ ಆದರ್ಶ ದಂಪತಿಗಳು.

"ಸತಿ–ಪತಿಗಳೊಂದಾದ ಭಕ್ತಿ
ಹಿತವಾಗಿಪ್ಪದು ಶಿವಂಗೆ
ಸತಿಪತಿಗಳೊಂದಾಗದವರ ಭಕ್ತಿ
ಅಮೃತದೊಳಗೆ ವಿಷವ ಬೆರೆಸಿದಂತೆ ಕಾಣಾ ರಾಮಾನಾಥ"

ಎಂಬ ಆದ್ಯವಚನಕಾರ ದಾಸಿಮಯ್ಯನವರ ವಚನ ವಾಣಿಯಂತೆ ಬಿಕ್ಕಲುಚಿಕ್ಕಯ್ಯ–ತಿಮ್ಮಕ್ಕ ದಂಪತಿಗಳು ಒಂದಾಗಿ ಪ್ರಕೃತಿ ಮಾತೆಯ ಪೂಜೆ ಮಾಡಿ; ಪ್ರಕೃತಿ ದೇವಿಯ ಕೃಪೆಗೆ ಪಾತ್ರರಾದ ಆದರ್ಶ ದಂಪತಿಗಳು.

"ಆತ್ಮ ಶ್ರದ್ಧೆ ನಮಗೆ ಮಹೋಪಕಾರಿ ಆತ್ಮ ಶ್ರದ್ಧೆಯ ತತ್ತ್ವವನ್ನು ಜನರಿಗೆಲ್ಲ ಬೋಧಿಸಿದ್ದರೆ, ಅದನ್ನು ಅವರು ಅನುಷ್ಠಾನದಲ್ಲಿ ತಂದಿದ್ದರೆ, ನಮ್ಮಲ್ಲಿರುವ ಬಹುಪಾಲು ಶೋಕ ತಾಪಗಳು ಮಾಯಾವಾಗುತ್ತಿದ್ದವು ಎನ್ನುವುದರಲ್ಲಿ ಸಂದೇಹವಿಲ್ಲ. ಜೀವನದ ಮಹಾಮಹಿಮರಾದ ಸ್ತ್ರೀಪುರುಷರ ಶೀಲಗಳಲ್ಲಿ ಕ್ರಿಯೋತ್ತೇಜಕ ಶಕ್ತಿಗಳಲ್ಲಿ ಅತಿ ಶ್ರೇಷ್ಠವಾದುದೇ ಅವರಲ್ಲಿದ್ದ ಆತ್ಮ ಶ್ರದ್ಧೆ ಎಂಬುದು ನಮಗೆ ಅರಿವಾಗುವುದು. ತಾವು ಮಹಾಪುರುಷರಾಗುವುದಕ್ಕೆ ಜನ್ಮವೆತ್ತಿರುವುದು ಎಂದು ನಂಬಿದ್ದರಿಂದ ಅವರು ಮಹಾಪುರುಷರಾದರು" ಎಂಬ ಸ್ವಾಮಿವಿವೇಕಾನಂದರ ವಾಣಿಯಂತೆಯೇ ಆತ್ಮಶ್ರದ್ಧೆಯಿಂದಲೇ ತಿಮ್ಮಕ್ಕ–ಚಿಕ್ಕಯ್ಯನವರು ಸಾಧನೆಯ ಸೌಧವನ್ನು ಏರಿ ಮುಗಿಲು ಮುಟ್ಟಿದರು.

"ಆಃ ನಿಂತು ನೋಡಲ್ಲಿ;
ಸ್ವರ್ಗವರಳುತಿದೆ ಆ ಮರದ ಮೈಸಿರಿಯಲ್ಲಿ!
ಊರ್ವಶಿ ತಿಲೋತ್ತಮೆಯರೆಲ್ಲ ನರ್ತಿಪರಲ್ಲಿ
ಆ ಮರದ ಕೆಂದಳಿರಿನಿಂದ್ರನಾಸ್ಥಾನದಲ್ಲಿ।
ನಿಂತ ಹೆಜ್ಜೆಯ ಕೀಳಲಾರದೆಯೆ ನಡೆಗೆಟ್ಟು।
ನೋಡುತಿಹೆ ನಾನೊಂದು ಮರವಾಗಿ ಮರವಟ್ಟು।
ಅಯ್ಯೋ ಬೇಡುವೇ ನಾನು! ಆಃ ನಿಂತು ನೋಡಿಲ್ಲಿ!
ಚೇತನದ ಚಿಲುಮೆ ಚಿಮ್ಮುತಿದೆ ಆ ಮರದಲ್ಲಿ"

ಎಂಬ ರಾಷ್ಟ್ರಕವಿ ಕುವೆಂಪುರವರ ಕವಿ ವಾಣಿಯಂತೆ ತಿಮ್ಮಕ್ಕ–ಚಿಕ್ಕಯ್ಯರು ನೆಟ್ಟು ಬೆಳೆಸಿರುವ ಆಲದ ಹೆಮ್ಮರಗಳು ಇಂದು ಕಾಣುತ್ತಿವೆ.

ಚಿಕ್ಕಯ್ಯ–ತಿಮ್ಮಕ್ಕ ದಂಪತಿಗಳು ಅನರಕ್ಷಸ್ಥರು. ಅಕ್ಷರದ ಅರಿವಿಲ್ಲ. ಆಗರ್ಭಶ್ರೀಮಂತರಾಗಿ ಮೆರೆಯಬೇಕೆಂಬ ಅಸೆಯಂತೂ ಕನಸ್ಸಿನಲ್ಲೂ ಇಲ್ಲ, ನಮ್ಮನ್ನ ಜನರು ಸೈ ಸೈ ಎನ್ನಬೇಕೆಂಬ ಹಂಬಲವೂ ಇಲ್ಲ. ಹಣ, ಕೀರ್ತಿಯ ಹೆಬ್ಬಯಕೆಯೂ ಇಲ್ಲ. ಮುಗ್ಧ ದಂಪತಿಗಳು ಮಕ್ಕಳಿಲ್ಲವೆಂದು ಕೊರಗುವ ಬದಲು ಮರಗಳನ್ನೆ ಮಕ್ಕಳೆಂದು ತಿಳಿದು ಆಲದ ಕೊಂಬೆ ನೆಟ್ಟು, ಪೋಷಿಸಿ, ಹೆಮ್ಮರಗಳನ್ನಾಗಿಸಿದ ಮಹಾನ್ ಮಾತಾ–ಪಿತೃಗಳಾಗಿರುವುದು ಈ ನಮ್ಮ ನಾಡಿನ ಸೌಭಾಗ್ಯವಾಗಿದೆ.

“ಆಸೆಯಂಬುದು ಅರಸಂಗಲ್ಲದೆ ಶಿವಭಕ್ತರಿಗುಂಟೆ ಅಯ್ಯಾ?
ರೋಷವೆಂಬುದು ಯಮದೂತರಿಗಲ್ಲದೆ ಅಜಾತರಿಗುಂಟೆ ಅಯ್ಯಾ ?
ಈಸಕ್ಕಿಯಾಸೆ ನಿಮಗೇಕೆ? ಈಶ್ವರನೊಪ್ಪಾ
ಮಾರಯ್ಯ ಪ್ರಿಯ ಅಮರೇಶ್ವರ ಲಿಂಗಕ್ಕೆ ದೂರ ಮಾರಯ್ಯ”

ಎಂಬ ತಮ್ಮ ವಚನವಾಣಿಯಂತೆಯೇ ಶರಣ ದಂಪತಿಗಳಾದ ಆಯ್ದಕ್ಕಿಲಕ್ಕಮ್ಮ–ಆಯ್ದಕ್ಕಿಮಾರಯ್ಯ ೧೨ನೇ ಶತಮಾನದಲ್ಲಿ ದುರಾಸೆಯಿಲ್ಲದೆ ಆದರ್ಶವಾಗಿ ಬಾಳಿ ಬದುಕಿದವರು. ಅಂತೆಯೇ ನಿಸ್ವಾರ್ಥವಾಗಿ ಜನಹಿತ, ಜಾನುವಾರುಹಿತ, ಪಕ್ಷಿಸಂಕುಲದಹಿತ, ಸಮಸ್ತ ಪ್ರಕೃತಿಹಿತಕ್ಕಾಗಿ ಬಾಳುತ್ತಿರುವ ಆಧುನಿಕ ಶರಣದಂಪತಿಗಳಾದ ಬಿಕ್ಕಲುಚಿಕ್ಕಯ್ಯ–ತಿಮ್ಮಕ್ಕ ನಮ್ಮ ಕಣ್ಮುಂದೆ ಆದರ್ಶವಾಗಿ ನಿಂತಿದ್ದಾರೆ.

“ಬಹುತೇಕ ಸ್ತ್ರೀಯರು ಇಂದು ತಮ್ಮ ಗಂಡಂದಿರಿಗೆ ಒಡವೆ, ಮನೆ, ಮಂಚ, ಫ್ರಿಜ್, ವಾಷಿಂಗ್‌ಮಿಷಿನ್, ಟಿವಿ, ಫ್ಯಾನ್, ರೇಷ್ಮೆ ಸೀರೆ ಇತ್ಯಾದಿ ವಸ್ತುಗಳು ಬೇಕೆಂದು ಹಠ ಹಿಡಿಯುವರು. ಪತ್ನಿಯರ ಬೇಕುಗಳಿಗಾಗಿ ಲಂಚ ಹೊಡೆಯುವುದು, ಸುಳ್ಳು ಹೇಳುವುದು, ಅನ್ಯರ ಹಣವನ್ನು ಅಪಹರಿಸುವುದು, ಮುಂತಾದ ದುಷ್ಕೃತ್ಯಗಳಲ್ಲಿ ತೊಡಗಿರುವವರನ್ನು ಕಾಣುತ್ತಿದ್ದೇವೆ. ಹೀಗೆ ಸ್ವಾರ್ಥಿಯಾಗಿ ಬದುಕುತ್ತಿರುವವರ ನಡುವೆ, ನಿಸ್ವಾರ್ಥವಾಗಿ ಬಾಳುತ್ತಿರುವ ಚಿಕ್ಕಯ್ಯ–ತಿಮ್ಮಕ್ಕ ಸುಖಜೀವನಕ್ಕೆ ಆಸೆ ಪಟ್ಟವರಲ್ಲ. ಬಟ್ಟೆ, ಒಡವೆಗಳಿಗೆ ಆಸೆ ಪಟ್ಟವರಲ್ಲ, ಬದುಕಲು ಬೇಕಾದ ವಸ್ತಗಳನ್ನು ಮಾತ್ರ ಬಯಸುವಂತವರು. ಇಂದು ಬಹುತೇಕ ಮಂದಿ ಪುಗಸಟ್ಟೆಯದ್ದಾದರೆ ನನಗಿರಲಿ, ನಮ್ಮಪ್ಪಗಿರಲಿ, ನನ್ನ ಮಕ್ಕಳಿಗಿರಲಿ, ನನ್ನ ಸಂಬಂಧಿಕರಿಗಿರಲಿ ಎಂಬ ದುರಾಸೆಯಿಂದ ಬದುಕುತ್ತಿರುವವವರ ನಡುವೆ, ಸರಳ ಜೀವನ ಸಾಗಿಸುತ್ತಾ ಸಕಲಜೀವರಾಶಿಗಳಿಗೆ ನೆರವಾಗುವಂತಹ ಕಾಯಕದಲ್ಲಿ ನಿರತರಾಗಿ, ಈ ಜೀವನವನ್ನು ಸಾರ್ಥಕಪಡಿಸಿಕೊಳ್ಳಬೇಕೆಂಬ ಚಿಂತನೆ ಸದಾ ದಂಪತಿಗಳಿಬ್ಬರ ಮನದಾಳದಲ್ಲಿ ಪುಟಿದೇಳುತ್ತಿತ್ತು. ಅದನ್ನು ಅನುಷ್ಠಾನಗೊಳಿಸಿದ ಚಿಕ್ಕಯ್ಯ–ತಿಮ್ಮಕ್ಕರು ಪರೋಪಕಾರಿಗಳು.

# ೭. ಮರೆಯಾದ ಮಹಾಶಯ

“ನಮ್ಮ ಸುತ್ತ ಕಾಣುವ ಪ್ರತಿಯೊಂದು ಒಂದು ಕೀಟದಿಂದ ಮಾನವನವರೆಗೆ ಅಚೇತನವಾದ ಜಡದ್ರವ್ಯದಿಂದ ಹಿಡಿದು ಅತಿಶ್ರೇಷ್ಠವಾದ ಆತ್ಮನವರೆಗೆ ಪ್ರತಿಯೊಂದು ಮುಕ್ತಿಗಾಗಿ ಹೋರಾಡುತ್ತಿದೆ. ಇಡೀ ಸೃಷ್ಟಿಯೇ ಮುಕ್ತಿಯನ್ನು ಪಡೆಯಬೇಕೆಂಬ ಹೋರಾಟದ ಪ್ರತಿಫಲ......ಮುಕ್ತಿ ಎಂದರೆ ಸ್ವತಂತ್ರನಾಗುವುದು. ಎಲ್ಲದರಿಂದಲೂ ಸ್ವತಂತ್ರನಾಗಬೇಕು. ಸುಖವಾಗಲಿ, ದುಃಖವಾಗಲಿ, ಇಂದ್ರಿಯದ ಯಾವ ವೇದನೆಯಾಗಲಿ, ಪಾಪವಾಗಲಿ, ಪುಣ್ಯವಾಗಲಿ ಎಲ್ಲದರಿಂದಲೂ ಪಾರಾಗಬೇಕು. ಇದಕ್ಕಿಂತಲೂ ಹೆಚ್ಚು ಆಗಬೇಕು. ನಾವು ಸಾವಿನಿಂದಲೂ ಪಾರಾಗಬೇಕು. ಸಾವಿನಿಂದ ಪಾರಾಗಬೇಕಾದರೆ ಜನನದಿಂದಲೂ ಪಾರಾಗಬೇಕು. ಜೀವನವೇ ಒಂದು ಮೃತ್ಯು ಚಿಂತನೆ. ಜೀವನವಿರುವ ಕಡೆ ಮರಣವಿದ್ದೇ ಇರುವುದು. ನೀವು ಮರಣದಿಂದ ಪಾರಾಗಬೇಕಾದರೆ ಜೀವನದಿಂದಲೂ ಪಾರಾಗಬೇಕು.” ಎಂಬ ಸ್ವಾಮಿವಿವೇಕಾನಂದರ ವಾಣಿಯು ಜೀವನ್ಮುಕ್ತರಾಗಲು ಸರಿದಾರಿಯನ್ನು ದರ್ಶನ ಮಾಡಿಸುತ್ತದೆ. ಕಾಯಕ ಜೀವಿ ಬಿಕ್ಕಲುಚಿಕ್ಕಯ್ಯ ಜೀವನ್ಮುಕ್ತನಾಗಿ ತನ್ನ ಕಾಯವನ್ನು ಕಳೆದುಕೊಳ್ಳಬೇಕೆಂಬ ಉತ್ಕಟವಾದ ಇಚ್ಛಾಶಕ್ತಿಯನ್ನು ಪಡೆದುಕೊಂಡು, ಅಂತೆಯೇ ಬಾಲ್ಯ, ಯೌವನ, ಮುಪ್ಪನ್ನು ಸಾತ್ವಿಕ ದುಡಿಮೆಗೆ, ಸಕಲ ಜೀವರಾಶಿಯ ಹಿತಕ್ಕೆ ಮುಡುಪಾಗಿಟ್ಟ ಮಹಾ ಶ್ರದ್ಧಾವಂತ.

ಚಿಕ್ಕಯ್ಯರು ಇಹಲೋಕದ ತನ್ನ ಕಾರ್ಯ ಮುಗಿದ ಮೇಲೆ ಆಗೋಚರವಾದ ದಾಯಾದಿಗಳ ಮತ್ಸರದ ನೆಪದಲ್ಲಿ ಅನಾರೋಗ್ಯಪೀಡಿತರಾಗಿ ೧೯೯೧ರ ಜನವರಿಯಲ್ಲಿ ಈ ಲೋಕದಿಂದ ಕಣ್ಮರೆಯಾದರು. ಚಿಕ್ಕಯ್ಯ ತನ್ನ ತನುಮನಕ್ಕೆ ಅವಿಭಾಜ್ಯವಾಗಿದ್ದ ಪ್ರಿಯ ಸತಿ ತಿಮ್ಮಕ್ಕನೊಡನೆ, ಮಾತಾನಾಡುತ್ತಲೆ, ಮರಗಳೆಂಬ ಮಕ್ಕಳಾಶ್ರಯದಲ್ಲಿ ಸುಖವಾಗಿರೆಂದು, ಒಳ್ಳೆಯ ಕೆಲಸ ಮಾಡೆಂದು, ಆಕೆಯ ತಲೆಯ ಮೇಲೆ ಹಸ್ತವನ್ನಿಟ್ಟು, ಹಾರೈಸಿದರು. ಪತ್ನಿ ಕುಡಿಸಿದ ನೀರು ಕುಡಿದು ಮಹಾಚೇತನದೊಳಗೆ ಲೀನವಾಗಿ ಬಿಟ್ಟರು ಚಿಕ್ಕಯ್ಯ.

ಆಗ ತಿಮ್ಮಕ್ಕ ‘ಓ ನನ್ನ ದೇವರೆ, ನನ್ನನ್ನು ಅನಾಥ ಮಾಡಿ ಹೋಗಿ ಬಿಟ್ಟೆಯಾ, ನಾನು ನಿನ್ನ ಬಿಟ್ಟು ಇರಲಾರೆ ನನ್ನನ್ನು ನಿನ್ನ ಜತೆಗೆ ಕರೆದ್ಕೊ. ಇನ್ನು ನಾ ಬದುಕಿರಲಾರೆ. ನನ್ನ ಕರೆದ್ಕೊ’ ಎಂದೆಲ್ಲ ಹೆಣದ ಮೇಲೆ ಬಿದ್ದು ಗೋಳಾಡಿದರು. ಹೊಟ್ಟೆಯೊಳಗೆ ಬೆಂಕಿ ಸುರಿದ್ದಂಗೆ

ಗಂಡ್ನ ಕಳೆದುಕೊಂಡ ಸಂಕಟ ಅನುಭವಿಸತೊಡಗಿದರು. ಅಷ್ಟೊತ್ತಿಗೆ ತಿಮ್ಮಕ್ಕನ ಗೆಳತಿ ಚಂದ್ರಮ್ಮ ಬಂದು ‘ಏ ತಿಮ್ಮಕ್ಕ ಯಾಕೆ ಹಿಂಗೆ ಅಳ್ತಿ? ನಿನ್ಗಂಡ ಸಾರ್ಥಕವಾಗಿ ಬಾಳಿ, ಮುಕ್ತಿ ಪಡೆದವರೆ. ಖುಷಿಯಿಂದಲೇ ಅವರ ಶವಸಂಸ್ಕಾರ ಮಾಡು. ಎಲ್ಲರೂ ಒಂದಿಲ್ಲೊಂದು ದಿನ ಸಾಯಲೇಬೇಕು. ಈವೊತ್ತು ಚಿಕ್ಕಯ್ಯ ನಾಳೇನೋ ನಾಡದೋ ನಾವು’ ಎಂದು ಬುದ್ಧಿಹೇಳಿದ್ರು. ಸಂಬಂಧಿಕರು ತಿಮ್ಮಕ್ಕನನ್ನು ಸಮಾಧಾನ ಪಡಿಸಿದ್ರು. ಆಗ ತಿಮ್ಮಕ್ಕನಿಗೆ ಸೋಲೂರಿನಲ್ಲಿ ಹರಿಕಥೆ ದಾಸರು ಹೇಳಿದ ರಬಿಯಾಳ ಕಥೆ ನೆನಪಾಯಿತು. ಸಾವು ಈ ಜೀವನಕ್ಕೆ ಅಂಟಿಕೊಂಡೇ ಬಂದಿರುವಂತಹದ್ದು ಅದರ ಕರೆ ಬಂದಾಗ ತೆರಳುವುದು ಅನಿವಾರ್ಯ ಅಲ್ಲವೇ? ಎಂಬ ಅರಿವು ಉಂಟಾಯಿತು. ಧೈರ್ಯ ತೆಗೆದುಕೊಂಡು ಮುಂದಿನ ಕಾರ್ಯಕ್ಕೆ ಅಣಿಯಾದ್ರು. ತನ್ನ ತವರೂರಿಗೆ, ನೆಂಟರುಗಳ ಊರಿಗೆ, ಸಂಬಂಧಿಗಳ ಊರಿಗೆಲ್ಲ ಸುದ್ದಿ ಮುಟ್ಟಿಸಲು ಕವಡೆ ಆಳುಗಳನ್ನು ಕಳುಹಿಸಿದ್ರು. ತಿಮ್ಮಕ್ಕನ ತವರು ಮನೆಯವರು ಬಂದ್ರು. ಹತ್ತಿರವಿರುವ ಸಂಬಂಧಿಕರು ಬಂದ್ರು. ದೂರದ ಸಂಬಂಧಿಗಳು ಬರಬೇಕಾಗಿತ್ತು. ಸಂಜೆ ಆಗ ತೊಡಗಿತು. ನಾಳೆ ಶವಸಂಸ್ಕಾರ ಮಾಡೋದು ಅಂತ ತೀರ್ಮಾನಿಸಿದ್ರು. ಚಿಕ್ಕಯ್ಯನ ಗೆಳೆಯರು. ಸಾಧು–ಸಂತರು ಬಂದ್ರು ಭಜನೆ ಮಾಡತೊಡಗಿದ್ರು.

‘ಮಾಡಲಿಲ್ಲವೇ ತಪವನು ಮಾಡಲಿಲ್ಲವೆ।
ಕೂಡೆ ಸುಗಣದೊಡನೆ ತಿಳಿದು।
ನೋಡಿ ತ್ರಿವಿಧಕರಣದಲ್ಲಿ।
ಗುರಭಜನೆ ಸುಕರ್ಮವೃತ್ತಿ।
ಹರನ ಪೂಜೆ ಶರಣಸೇವೆ।
ಪರಮ ಸಾತ್ವಿಗಳೆಂಟು।
ನೆರೆದು ನೆಲಸಿ ತನುವಿನಲ್ಲಿ।’

ಎಂಬ ನಿಜಗುಣಶಿವಯೋಗಿಗಳ ತತ್ತ್ವಪದ, ‘ಮನವೆಂಬ ಮರ್ಕಟನ ತಡೆಯಲಾರೆನು ದೇವ। ಏನಿದರ ಚಪಲ ಚೇಷ್ಟೆಗಳ ವರ್ಣಿಸಲಿ।’, ‘ಶರೀರವೆಂದೆಂಬುವ ಹೊಲನ ಹಸನ ಮಾಡಿ। ಪರತತ್ತ್ವ ಬೆಳಯನೆ ಬೆಳೆದುಣ್ಣಿರೋ’ ಎಂಬ ಸರ್ಪಭೂಷಣ ಶಿವಯೋಗಿಗಳ ತತ್ತ್ವಪದಗಳನ್ನು, ‘ಸೋರುತಿಹುದು ಮನೆಯ ಮಾಳಿಗೆ । ಅಜ್ಞಾನದಿಂದ ಸೋರುತಿಹುದು ಮನೆಯ ಮಾಳಿಗೆ’, ‘ಅತ್ತ–ಇತ್ತ ಹರಿದಾಡುವ ಮನಸ್ಸಿಗೆ। ಮಚ್ಚಿಲೊಡೆದು ನಿಲ್ಲಿಸು ಜಾಣ।’, ‘ಶತ್ರುವಲ್ಲವೋ ಹೊನ್ನು ಹೆಣ್ಣು ಮಣ್ಣು। ತಿಳಿದರೆ ಅವು ಮೂರು ಗುರು ಕೊಟ್ಟ ಕಣ್ಣು’ ‘ಹೋಗುತಿಹುದು ಕಾಯವ್ಯರ್ಥ ಇದರ। ಲಾಘವ ತಿಳಿದವ ಯೋಗಿ ಸಮರ್ಥ।’, ‘ತೊಗಲಿ ಮಲಿಯ ಹಾಲು ಕುಡಿದು ದೊಡ್ಡವರಾಗಿ। ಶೀಲ ಮಾಡುತೀರಿ ನಾಡೆಲ್ಲಾ। ತೊಗಲಿನ ಆಟಾ ತಿಳಿಯದೋ ತಮ್ಮಾ। ತಗಲು ಮಾತು ಚೂರಿಲ್ಲಾ। ಅಸ್ಥಿರ ತೊಗಲ್ಹುಟ್ಟಿ ಬಂತು ಸಾಯುದಕ। ಗೊತ್ತು ಹತ್ತಲ್ಲಿಲ್ಲೊ ಸವಿಸುಖ।’ ಎಂಬ ಶಿಶುನಾಳ ಶರೀಫರ ತತ್ತ್ವ ಪದಗಳನ್ನು ಹಾಡುತ್ತಾ ರಾತ್ರಿಯಿಡಿ ಭಜನೆ ಮಾಡಿದ್ರು. ಬೆಳಗ್ಗೆ ಎಂಟು ಗಂಟೆಯ ಹೊತ್ತಿಗೆ ಸಂಬಂಧಿಕರೆಲ್ಲಾ ಸೇರಿದ್ರು.



ತವರ್ಮನೆಯವರು ತಿಮ್ಮಕ್ಕನಿಗೆ ಹೊಸ ಸೀರೆ ಉಡುಸಿ, ಹೆಣದ ಜೊತೆಗೆ ಕುಳ್ಳಿರಿಸಿ, ಒಡ್ಲಕ್ಕಿ ಹಾಕಿದ್ರು. ಹೆಣಕ್ಕೆಲ್ಲಾ ಪೂಜೆ ಮಾಡಿ, ಚಟ್ಟದ ಮೇಲಿಟ್ಟುಕೊಂಡು, ಹೊತ್ತುಕೊಂಡು ಸ್ಮಶಾನಕ್ಕೆ ಹೋದ್ರು. ಅಲ್ಲಿ ಪೂಜೆ ಮಾಡಿ ಗುದ್ದಿನೊಳಕ್ಕೆ ಇಟ್ಟು, ಬಂದವರೆಲ್ಲ ನಾಲ್ಕು ಹಿಡಿ ಮಣ್ಣು ಹಾಕಿದ್ರು. ಅನಂತರ ತಿಮ್ಮಕ್ಕನ ಬಳೆಗಳನ್ನೆಲ್ಲ ಹೊಡೆದ್ರು, ಮೂಗುತಿ, ಒಲೆಗಳನ್ನ ತೆಗೆದರು. ಆಗ ತಿಮ್ಮಕ್ಕನ ಗೋಳು ಆಕಾಶವನ್ನೆ ಮುಟ್ಟುವಂತಿತ್ತು. ‘ನನ್ನ ಸೌಭಾಗ್ಯ ಹೋದೆಯಲ್ಲ, ನನ್ನ ಅನಾಥ ಮಾಡಿಬಿಟ್ಟೆ. ನಂಗೆ ಯಾರಪ್ಪ ದಿಕ್ಕು? ನಾ ಹ್ಯಾಂಗೆ ಜೀವಿಸಲಿ... ಅಂತೆಲ್ಲ ಗೋಳಾಡಿದ್ರು. ಸಂಬಂಧಿಕರು ಸಮಾಧಾನಪಡಿಸಿಕೊಂಡು ಮನೆಗೆ ಕರೆದುಕೊಂಡು ಬಂದ್ರು.

ಎರಡು ದಿನ ಹೊತ್ತಾದರೂ ಅನ್ನ ತಿಂದಿಲ್ಲ ನೀರು ಕುಡಿದೇ ಜೀವ ಹಿಡ್ಕೊಂಡ ತಿಮ್ಮಕ್ಕ ಹಸಿವಿನ ತಾಪಕ್ಕೆ ಮಲಗಿದ್ದರೆ ಇದಕ್ಕಿಂದ್ದಂತೆ ‘ರಬಿಯಾಳ ಕಥೆ’ ಕಣ್ಮುಂದೆ ಬಂದು, ಎದ್ದು ಒಂದಿಷ್ಟು ಅನ್ನ ತಿಂದು ನೀರು ಕುಡಿದ್ರು. ತಿಮ್ಮಕ್ಕನ ತಂಗಿ–ಮಕ್ಕಳು ಅಲ್ಲಿಯೇ ಇದ್ರು. ಮೂರು ದಿನಕ್ಕೆ ಎಲ್ಲ ಸಂಬಂಧಿಕರು ಬಂದ್ರು. ಕೋಳಿಗಳನ್ನ ಕೊಯ್ದು, ಸಾಂಬಾರು ಮಾಡಿದ್ರು ಅನ್ನ–ಮುದ್ದೆ ಮಾಡಿದ್ರು. ಬಾಳೆ ಹಣ್ಣು, ತೆಂಗಿನಕಾಯಿ, ಊದುಬತ್ತಿ, ಹೂವು, ತಾಂಬೂಲದ ಜೊತೆಗೆ ಮಾಡಿದ ಅಡುಗೆಯನ್ನು ತೆಗೆದುಕೊಂಡು ಬಿಕ್ಕಲುಚಿಕ್ಕಯ್ಯನ ಸಮಾಧಿ ಹತ್ತಿರಕ್ಕೆ ಸಂಜೆ ಐದುವರೆ ಗಂಟೆ ಹೊತ್ತಿಗೆ ಹೋದ್ರು. ಸಮಾಧಿಯ ಮೇಲೆ ಎಡೆ ಹಾಕಿ, ಪೂಜೆ ಮಾಡಿದ್ರು, ಕಾಗೆ ಮುಟ್ಲಿ ಅಂತ, ಸಮಾಧಿ ಬಿಟ್ಟು, ಸ್ವಲ್ಪ ದೂರದಲ್ಲಿ ಎಲ್ಲರೂ ಕುಳಿತುಕೊಂಡು ಚಿಕ್ಕಯ್ಯನ ಸೌಮ್ಯ ವ್ಯಕ್ತಿತ್ವದ ಬಗ್ಗೆ ಮಾತಾಡತೊಡಗಿದ್ರು. ಸಮಾಧಿ ಮೇಲೆ ಹಾಕಿದ ಎಡೆಯನ್ನ ಕಾಗೆಗಳು ಬಹುಬೇಗ ಬಂದು ತಿಂದರೆ ಸತ್ತವರು ಸ್ವರ್ಗಕ್ಕೆ ಹೋಗಿದರೆ ಅಂತ, ಕಾಗೆಗಳು ಬಂದು ತಿನ್ನಲಿಲ್ಲ ಅಂದರೆ ಅವ್ರು ಸ್ವರ್ಗಕ್ಕೆ ಹೋಗಿಲ್ಲ, ನರಪಿಶಾಚಿಗಳಾಗಿದವೆಂಬ ನಂಬಿಕೆ ಇದೆ. ಚಿಕ್ಕಯ್ಯನ ಸಮಾಧಿ ಮೇಲೆ ಎಡೆ ಹಾಕಿ, ಸ್ವಲ್ಪ ದೂರ ಜನ ಬಂದುದ್ದೆ ತಡ, ಕಾ....ಕಾ....ಕಾ... ಅಂತ ಹಿಂಡಗಟ್ಲೆ ಕಾಗೆಗಳು ಬಂದು ಎಡೆಯನ್ನು ತಿಂದುವು. ಬಂದ ಸಂಬಂಧಿಕರಿಗೆಲ್ಲ ಬಹು ಸಂತಸ ಆಯಿತು. ಅಲ್ಲಿಯೇ ತಂದ ಅಡುಗೆಯನ್ನು ಪ್ರಸಾದ ಅಂತ ಊಟ ಮಾಡಿದ್ರು. ಕೆಲವರು ನಮಗೆ ಕೂಡಿಲ್ಲ ಅಂತ ಊಟ ಮಾಡದೆ ಇದ್ದರು. ಅವರಿಗೆ ತೆಂಗಿನ ಕಾಯಿ ಬಾಳೆಹಣ್ಣು ಕೊಟ್ರು. ಅನಂತರ ಎಲ್ಲರೂ ಮನೆಗೆ ಬಂದ್ರು. ರಾತ್ರಿ ಒಂಬತ್ತು ಗಂಟೆ ಹೊತ್ತಿಗೆ ಎಲ್ಲರಿಗೂ ಊಟಕ್ಕೆ ಬಡಿಸಿದ್ರು. ಸಂತೃಪ್ತವಾಗಿ ಊಟ ಮಾಡಿ ಮಾರನೆಯ ದಿನ ಅವರವರ ಊರಿಗೆ ಹೋಗುವ ಸಂಬಂಧಿಕರಿಗೆಲ್ಲ ೧೬ನೇ ದಿನದಲ್ಲಿ ತಿಥಿ ಇದೆ. ಅದಕ್ಕೆ ಬರಬೇಕೆಂದು ತಿಮ್ಮಕ್ಕನವರು ಹೇಳಿದ್ರು.

ತಿಮ್ಮಕ್ಕ ಒಂಟಿಯಾಗಿ ತುಂಬಾ ಮಾನಸಿಕ ತಳಮಳಕ್ಕೊಳಗಾದ್ರು. ತಾವು ಹಾಕಿದ ಮರಗಳ ಹತ್ತಿರ ಹೋಗಿ ಅವುಗಳ ಕೊಂಬೆ–ರಂಬೆಗಳನ್ನು, ಕಾಂಡವನ್ನು ತಬ್ಬಿಕೊಂಡು ನಿಮ್ಮ ಅಪ್ಪ ಇಲ್ಲ, ನಿಮಗೆಲ್ಲ ಗಡಿಗೆಯಲ್ಲಿ ನೀರು ಹೊತ್ತುಕೊಂಡು ಬಂದು ಹಾಕುತ್ತಿದ್ದರಲ್ವಾ? ಅವರು ಈವೊತ್ತಿಲ್ಲ? ಎಂದು ನಾನಾ ರೀತಿ ಗೋಳಾಡುತ್ತಿದ್ದರು.

ಅಷ್ಟೊತ್ತಿಗೆ ವಯಸ್ಸಾದ ದಾರಿಹೋಕರೊಬ್ಬ ಬಂದು ‘ಅಜ್ಜಿ ಯಾಕೆ ಹಿಂಗೆಲ್ಲಾ ಅಳ್ತಿ’

ಎಂದ. 'ಸ್ವಾಮಿ ನನ್ಗಂಡ ಈ ಮರಗಳ್ನ ನೆಟ್ಟವರು. ಬೆಳೆಸಿದವ್ರು. ಸತ್ತು ಈವೊತ್ತಿಗೆ ಒಂದು ವಾರ ಆಯಿತು. ಅವರಿಲ್ಲದ್ದು ನಾ ಹ್ಯಾಂಗೆ ಬದುಕಲಿ? ನಮಗೆ ಮಕ್ಕಳಿಲ್ಲ ಮರಗಳನ್ನೇ ಮಕ್ಕಳಂತ ಸಾಕಿದ್ವಿ. ನನ್ಗಂಡ ಇಲ್ದೆ, ಇರುವ ತ್ರಾಣ ನನ್ನಲಿಲ್ಲ' ಎಂದ ತಿಮ್ಮಕ್ಕನ ನೋವಿನ ನುಡಿಗಳಿಗೆ ತಲೆದೂಗಿದ ಆ ಅಜ್ಜ ಮನದೊಳಗೆ 'ಪತ್ನಿ ಅಂದ್ರ ಹಿಂಗ ಇರಬೇಕು. ಎಷ್ಟು ದಿನಕ್ಕೆ ಸತ್ತನಪ್ಪೊ ಅನ್ನುವ ಹೆಂಡತಿಯರು, ಗಂಡ ಸತ್ತ ತಕ್ಷಣವೇ ಅವನ ಶವಸಂಸ್ಕಾರಕ್ಕಿಂತ ಮೊದಲೆ ಅವನಿಟ್ಟಿದ್ದ ದುಡ್ಡು ದುಗ್ಗಾಣಿಯನ್ನು ಕೂಡಿಟ್ಟುಕೊಳ್ಳಬೇಕೆಂಬ ಹೆಬ್ಬಯಕೆಯ ಹೆಂಡತಿಯರು, ಗಂಡ ಸತ್ತರೆ ಶನಿ ತೊಲಗತು ಅನ್ನುವಂಥ ಹೆಂಡತಿಯರು, ಸತ್ತನಪ್ಪ ಇನ್ಮೇಲೆ ನಾನು ಫ್ರೀಯಾಗಿ, ಹಾಯಾಗಿ ಇರಬಲ್ಲೆ ಅನ್ನುವ ಹೆಂಡತಿಯರು ಇರುವಂತಹ ಈ ಕಾಲದಲ್ಲಿ ಗಂಡನಿಗಾಗಿ ತಮ್ಮ ಪ್ರಾಣವನ್ನೇ ಕಳೆದುಕೊಳ್ಳುವಂತವರು ಅಪರೂಪ. ಅಂಥ ಅಪರೂಪದ ಪತಿವ್ರತೆ ತಿಮ್ಮಕ್ಕನಿಗೆ ವಯೋವೃದ್ಧ, ಜ್ಞಾನ ವೃದ್ಧ ಆ ಅಜ್ಜ ' ನೋಡಮ್ಮ ತಿಮ್ಮಕ್ಕ ಡಿ.ವಿ.ಗುಂಡಪ್ಪನಂತಹ ಚಿಂತಕರು ಏನ್ ಹೇಳ್ತರೆ ಗೊತ್ತೇನು?

'ತಿರು ತಿರುಗಿ ತಿರುಗುತ್ತೆ ಬುಗುರಿ ತಾನೆ ಸೋತು।
ತಿರೆಗುರುಳುವುದು ತನ್ನ ಬಲವ ತಾಂ ಕಳೆದು।
ನರನುಮಂತೆಯ ಸುತ್ತಿ ಸುತ್ತಿ ಕಡೆಗೊಂದು ದಿನ
ತೆರುವನಸ್ಥಿಯ ಧರೆಗೆ–ಮಂಕುತಿಮ್ಮ।'

ಎಂತಹ ಅದ್ಭುತವಾದ ತಿಳಿವು ಈ ಪದ್ಯದಿಂದ ಸಿಗುತ್ತವ್ವ. ಬುಗುರಿ ತಿರುಗಿದಂಗೆ ಈ ಜೀವನ. ಅದರ ಕೆಲಸ ಮುಗಿದ ಮೇಲೆ ಧರೆಗೆ ಹೇಗೆ ಉರುಳುವುದೋ ಹಾಗೆಯೇ ಈ ಜೀವನ ಕೂಡ. ನಿನ್ಗಂಡ ನಿಜವಾಗ್ಲು ಮುಕ್ತಿ ಪಡೆದಿದ್ದಾರೆ. ನಾನು ಕೂಡ ಚಿಕ್ಕಯ್ಯನ್ನ ನೋಡಿದ್ದೆ. ಪರೋಪಕಾರಿ, ನಿರುಪದ್ರವಿಯಾದ ಚಿಕ್ಕಯ್ಯ ಸಾರ್ಥಕವಾಗಿ ಬಾಳಿ, ಮೋಕ್ಷ ಪಡೆದಿದ್ದಾರೆ. ನೀನು ಅಂತಹ ಗಂಡನಿಗೆ ತಕ್ಕ ಸತಿಯಾಗಿ ಬಾಳಿದಿಯ. ಗಂಡನ್ನ ಪತಿಯೇ ಪರದೈವವೆಂದು ಹೃನ್ಮನಪೂರ್ವಕವಾಗಿ ನೋಡಿಕೊಂಡ ಸಾರ್ಥಕ ಸತಿ ಕಣವ್ವ ನೀನು. ಚೆನ್ನಾಗಿ ನೋಡಿಕೊಂಡಿದಿಯ ಎಲ್ಲರೂ ಸಾಯೋರು. ಇಲ್ಲಿ ಯಾರು ಇರುವರಲ್ಲ ತಾಯಿ, ಹಿಂದೆ–ಮುಂದೆ ಸಂತೆ ದಾರಿ ಅನ್ನುವಂಗೆ ಹಿಂದೆ–ಮುಂದೆ ಹೋಗುತ್ತಿರಬೇಕು. ಅದಕ್ಕೆಲ್ಲ ಅಳುಬಾರದವ್ವ. ಈ ಮರಗಳಲ್ಲಿಯೇ ನಿನ್ನ ಗಂಡನ್ನ ಜೀವ ಇದೆ. ಆತ ಸತ್ತಿಲ್ಲ ನೋಡು, ಈ ಮರಗಳೇ ನಿನ್ನ ಸಾಕ್ತಾವೆ ನೋಡ್ತಾ ಇರು. ಚಿಂತೆ ಮಾಡಬೇಡ, ಅಂತ ಹೇಳಿ ಹೊರಟು ಹೋದ್ರು. ತಿಮ್ಮಕ್ಕನಿಗೆ ಏನೋ ಒಂದು ಥರ ಧೈರ್ಯ ಬಂತು. ಮನೆಗೆ ಬಂದು ಗಂಡನ ತಿಥಿ ಕಾರ್ಯಕ್ಕೆ ಬೇಕಾದ ಸಾಮಾನುಗಳನ್ನು ಜೋಡಿಸತೊಡಗಿದರು.

ಚಿಕ್ಕಯ್ಯನಿಗೆ ಬಿಕ್ಕಳಿಕೆ ಆಗಾಗ ಬರುತ್ತಿದ್ದರಿಂದ ಬಿಕ್ಕಲುಚಿಕ್ಕಯ್ಯ ಅಂತಲೇ ಜನ ಕರೆಯತೊಡಗಿದ್ರು. ಚಿಕ್ಕಯ್ಯ ತುಂಬಾ ಸ್ವಾಭಿಮಾನಿ, ಯಾರ ಹಂಗಿನೊಳು ಬದುಕಿದವರಲ್ಲ. ದುಡಿದು ತಿಂದವರು. ಯಾರಿಗೂ ಹೊರೆಯಾಗಿ ಬಾಳಿದವರಲ್ಲ. ಸತ್ತ ಮೇಲೆಯೂ ಕೂಡ ನಾನು ಇನ್ನೊಬ್ಬರಿಗೆ ಹೊರೆಯಾಗಬಾರದೆಂದು ತನ್ನ ಸಾವು ಸಮೀಪಿಸುತ್ತಿರುವುದನ್ನು ಅರಿತ ಚಿಕ್ಕಯ್ಯ ತಾನು ಸಾಕಿದ ಹಸುವೊಂದನ್ನು ಮಾರಿ ಒಂದು ಸಾವಿರ ರೂಪಾಯಿ ಹಣವನ್ನು



ತನ್ನ ತಿಥಿ ಕಾರ್ಯಕ್ಕಾಗಿ ಅಂತಲೇ ತನ್ನ ಹಾಸಿಗೆ ಅಡಿಯಲ್ಲಿ ಇಟ್ಟುಕೊಂಡವರು. ತಿಮ್ಮಕ್ಕ ಆ ದುಡ್ಡನ್ನು ಹಿಡಿದುಕೊಂಡು ಗಂಡನ ಸ್ವಾಭಿಮಾನವನ್ನು ನೆನೆದುಕೊಂಡು ಅಳುತ್ತಿರುವರು. ಮತ್ತೇ ಕರ್ತವ್ಯದ ಕೂಗು ಎಚ್ಚರಿಸಿದ ತಕ್ಷಣ ಕೆಲಸದಲ್ಲಿ ನಿರತರಾಗುತ್ತಿದ್ದರು.

ಶುಕ್ರವಾರ ೧೬ನೇ ದಿನದ ತಿಥಿಗೆ ಮೇಕೆ, ಅಕ್ಕಿ, ರಾಗಿ, ಸಾಂಬಾರ ಪದಾರ್ಥಗಳನ್ನೆಲ್ಲಾ ತಿಮ್ಮಕ್ಕ ಜೋಡಿಸಿದ್ರು. ಸಂಬಂಧಿಕರೆಲ್ಲ ಸೇರಿಕೊಂಡು ತಿಥಿ ಕಾರ್ಯವನ್ನು ಚೆನ್ನಾಗಿಯೇ ಮಾಡಿದರು. ಚಿಕ್ಕಯ್ಯನ ಭಾವಚಿತ್ರಕ್ಕೆ ಹೂವಿನ ಹಾರ ಹಾಕಿ, ವಿಭೂತಿ ಲೇಪಿಸಿ ಕುಂಕುಮ, ಅಕ್ಷತೆಗಳಿನ್ನಿಟ್ಟು ಎಡೆ ಹಾಕಿ ಹಣ್ಣು ಕಾಯಿ ನೈವೇದ್ಯ ಮಾಡಿದ್ರು. ಬಂದವರಿಗೆಲ್ಲ ಊಟಕ್ಕೆ ಹಾಕಿದ್ರು. ಚಿಕ್ಕಯ್ಯ ಕಟ್ಟು ಮಸ್ತಾದ ಆಳು, ಎಣ್ಣೆಗೆಂಪು, ಕುರುಚಲುಗಡ್ಡ, ಹಸನ್ಮುಖಿ, ನಿತ್ಯ ಹಣೆಯ ಮೇಲೆ ವಿಭೂತಿ ಧಾರಣೆ ಮತ್ತು ಭೃಕುಟಿಯ ಮಧ್ಯದಲ್ಲಿ ಕುಂಕಮವನ್ನಿಡುತ್ತಿದ್ದರು. ವಿನಯಶಾಲಿ. ಯಾರಾದರೂ ಬೈದರೂ ಮನದೊಳಗೆ ನೊಂದುಕೊಳ್ಳತ್ತಿದ್ದರೆ ವಿನಃ ಬಾಯಿ ಬಿಟ್ಟು ಬೈದವರಲ್ಲ . ಹಿತಮಿತವಾದ ಮಾತು. ಸುಮ್ಮನೆ ಹರಟೆ ಹೊಡೆಯಲಿಕ್ಕೆ ಹೋದವರಲ್ಲ. ಏನಿದ್ದರೂ ಕೆಲಸ ಕೆಲಸ. ಮಲಗುವ ಆರೇಳು ಗಂಟೆ ಸಮಯ ಬಿಟ್ಟರೆ ಉಳಿದೆಲ್ಲ ಸಮಯವನ್ನು ಒಂದಿಲ್ಲೊಂದು ಕೆಲಸ ಮಾಡುತ್ತಲೇ ಕಳೆದವರು. ಅವಸರದ ಜಾಯಮಾನದವರಲ್ಲ. ನಿಧಾನವಾದರೂ ಕೆಲಸದಲ್ಲಿ ಪರಿಪೂರ್ಣತೆಯನ್ನು ಸಾಧಿಸಿದವರು. ದನಕರುಗಳ ಕುಡಿಯುವ ನೀರಿಗಾಗಿ ಕಟ್ಟಿರುವ ಕೆರೆಕಟ್ಟೆಗಳೇನಾದರೂ ಒಡೆದು ಹೋಗಿದ್ದರೆ, ಅವುಗಳಿಗೆ ಮಣ್ಣು ಹಾಕಿ ನೀರು ನಿಲ್ಲಿಸಿ, ದನಕರುಗಳು ನೀರು ಕುಡಿದು ಆನಂದವಾಗಿರುವುದನ್ನು ಕಂಡು ಆನಂದ ಪಡುತ್ತಿದ್ದರು. ತಾವು ಹಾಕಿದ ಆಲದ ಮರಗಳಲ್ಲಿ ಗಿಳಿ, ಕೋಗಿಲೆ, ಕಾಗೆ, ಗುಬ್ಬಿಗಳು ಆಲದ ಹಣ್ಣು ತಿಂದು ಕಿಚಪಿಚ ಎನ್ನುತ್ತಿದ್ದರೆ ಅದನ್ನು ಕೇಳಿ ಆನಂದಿಸುತ್ತಿದ್ದ ನಿಸರ್ಗ ಪ್ರೇಮಿ.

ಚಿಕ್ಕಯ್ಯನ ಸಮಾಧಿ ಹತ್ತಿರ ಹಲಸಿನ ಮರವನ್ನು ಸಮಾಧಿ ಮಾಡುವ ದಿನವೇ ತಿಮ್ಮಕ್ಕನವರು ನೆಟ್ಟಿರುವರು. ಆ ಮರವಿಂದು ಹಲಸಿನ ಹಣ್ಣು ಬಿಡುತ್ತಿದೆ. ಆ ಹಣ್ಣಗಳಲ್ಲಿ ನನ್ನ ಇನಿಯ ಇರುವನೆಂಬ ಅಚಲ ನಂಬಿಕೆ ತಿಮ್ಮಕ್ಕನವರದು.

"ಹುಲ್ಲಾಗು ಬೆಟ್ಟದಡಿ ಮನೆಗೆ ಮಲ್ಲಿಗೆಯಾಗು।
ಕಲ್ಲಾಗು ಕಷ್ಟಗಳ ಮಳೆಯ ವಿಧಿ ಸುರಿಯೆ।
ಬೆಲ್ಲ ಸಕ್ಕರೆಯಾಗು ದೀನ ದುರ್ಬಲರಿಂಗೆ।
ಎಲ್ಲರೊಳಗೊಂದಾಗು–ಮಂಕುತಿಮ್ಮ"

ಎಂಬ ಡಿ.ವಿ.ಜಿ.ಯವರ ಕವಿ ವಾಣಿಯಂತೆಯೇ ಬಾಳಿ ಬೆಳಗಿ, ಬೆಳಕಾದವರು ಚಿಕ್ಕಯ್ಯ. ಅವರ ಹೆಸರು ಮಾತ್ರ ಚಿಕ್ಕಯ್ಯ, ಸಾಧನೆ ಮತ್ತು ಘನವ್ಯಕ್ತಿತ್ವದಿಂದ ದೊಡ್ಡಯ್ಯ ಆಗಿರುವರು. ಶಾಲೆಯ ಮುಖವನ್ನೇ ನೋಡದ ಚಿಕ್ಕಯ್ಯನವರಲ್ಲಿ ಓದು ಬರಹವಿಲ್ಲದಿದ್ದರೂ ಅಪಾರವಾದ ಜ್ಞಾನವಿತ್ತು. ಹೊಂದಾಣಿಕೆ ಇತ್ತು. ಏನೇ ಸಮಸ್ಯೆಗಳು ಬಂದರೂ ಶಾಂತವಾಗಿಯೇ ಎದುರಿಸುವ ಚೈತನ್ಯಶಾಲಿಗಳಾಗಿದ್ದರು. ಪ್ರಾಣಿಪಕ್ಷಿಗಳೆಂದರೆ ಪಂಚಪ್ರಾಣ. ಬೆಳಿಗ್ಗೆ ರಾತ್ರಿ ಊಟ ಮಾಡುವಾಗ ಮೊದಲ ತುತ್ತು ನಾಯಿಗೆ ಹಾಕಿ, ಉಣ್ಣುತ್ತಿದ್ದ ದಯಾಳು. ಯಾವುದೇ ದುರಭ್ಯಾಸಗಳಿಲ್ಲದೆ

ಸದಾ ಸತ್‌ಚಿಂತನೆ ಮಾಡುತ್ತಾ ಸತ್ಕಾರ್ಯದಲ್ಲಿಯೇ ತೊಡಗಿಕೊಂಡು ಅರ್ಥಪೂರ್ಣವಾಗಿ ಬದುಕಿದ ಸತ್ಪುರುಷರು. ಚಿಕ್ಕಯ್ಯನವರ ಕಾರ್ಯಶೀಲತೆ, ಸಹನೆ, ನೀತಿಯುಕ್ತ ಗಂಭೀರ ಮಾತುಗಳು, ವಿನಯಶೀಲವಾದ ವರ್ತನೆ, ಘನವ್ಯಕ್ತಿತ್ವ ಆದರ್ಶ ಹಾಗೂ ಅನುಕರಣೀಯವಾದುದು.

**ಒಂಟಿಯಾದ ತಿಮ್ಮಕ್ಕನಿಗೆ ಬಂದ ಸಂಕಷ್ಟಗಳು:**

'ಇನ್ನೇನು ಮತ್ತೇನು ಗತಿಯೆಂದು ಬೆದರದಿರು
ನಿನ್ನ ಕೈಯೊಳಗಿಹುದೆ ವಿಧಿಯ ಲೆಕ್ಕಣಿಕೆ?।
ಕಣ್ಣಿಗೆಟುಕದೆ ಸಾಗುತಿಹುದು ದೈವದ ಸಂಚು।
ತಣ್ಣಗಿರಿಸಾತ್ಮವನು–ಮಂಕುತಿಮ್ಮ॥

ಎಂಬ ಕವಿ ವಾಣಿಯಂತೆಯೇ ತನ್ನ ಆತ್ಮ ಶಕ್ತಿಯನ್ನು ವರ್ಧಿಸಿಕೊಂಡು ಬಾಳುತ್ತಿದ್ದ ತಿಮ್ಮಕ್ಕನಿಗೆ ಗಂಡನ ಸಾವಿನ ನಂತರವೂ ದಾಯಾದಿಗಳು ಕೊಡುವ ಸಂಕಷ್ಟಗಳು ಇಮ್ಮಡಿಯಾಗ ತೊಡಗಿದವು.

ಚಿಕ್ಕಯ್ಯನು ಸತ್ತ ತರುವಾಯ ಆತನ ನಾಲ್ಕು ಎಕರೆ ಹತ್ತು ಗುಂಟೆ ಜಮೀನನ್ನು ಆತನ ದಾಯಾದಿಗಳು ಕಬಳಿಸುವ ಸಂಚನ್ನು ಹೂಡಿದರು. ತಿಮ್ಮಕನಿಗೆ ಹೇಳದೆ ಆ ಹೊಲವನ್ನು ಉಳುಮೆ ಮಾಡಿ ಬಿತ್ತಿ ಬೆಳೆದರು. ಜೀವನ ನಿರ್ವಹಣೆಗೇನಾದರೂ ದವಸ–ಧಾನ್ಯಗಳನ್ನು ಕೊಡುವರೇನೂ ಎಂದು ತಿಮ್ಮಕ್ಕ ಕಾದು ನೋಡಿದ್ರು. ಒಂದು ಪಾವು ಕಾಳುಗಳನ್ನು ಕೊಡಲಿಲ್ಲ. ದಾಯಾದಿಗಳ ದೌರ್ಜನ್ಯ ತಿಮ್ಮಕ್ಕನ ತಾಳ್ಮೆಯನ್ನು ಮೀರಿತು. ತಿಮ್ಮಕ್ಕ ಕುದೂರು ಪೊಲೀಸ್ ಸ್ಟೇಷನ್‌ಗೆ ಹೋಗಿ ತಮಗಾದ ಅನ್ಯಾಯವನ್ನು ತೋಡಿಕೊಂಡ್ರು. ನ್ಯಾಯಯುತವಾಗಿ ಆ ಜಮೀನು ತಿಮ್ಮಕ್ಕನ ವಶಕ್ಕೆ ಬಂತು. ಆ ಜಮೀನು ಇದ್ದಂತೆಲ್ಲ ಕಿರುಕುಳ ಹೆಚ್ಚಾಗುವುದೆಂಬುದನ್ನು ಅರಿತ ತಿಮ್ಮಕ್ಕ ೨೦ಸಾವಿರ ರೂಪಾಯಿಗಳಿಗೆ ಮಾರಿ, ತಮ್ಮ ಜೀವನ ನಿರ್ವಹಣೆಗಾಗಿ ಆ ಹಣವನ್ನಿಟ್ಟುಕೊಂಡರು. ಸಾಕಲಿಕ್ಕೆ ಮಾತ್ರ ಬೇಡ, ಅವರು ಸಂಪಾದಿಸಿದ ಆಸ್ತಿ–ಪಾಸ್ತಿ ಬೇಕೆನ್ನುವ ಗಂಡನ ಸಂಬಂಧಿಕರು ಮತ್ತು ತನ್ನ ತವರಿನ ಸಂಬಂಧಿಕರ ಬಗ್ಗೆ ತಿಮ್ಮಕ್ಕ ಬೇಸರಪಡುವರು.

'ಕುಲಕ್ಕೆ ಕುಲ ಮೂಲ, ಕುಂಟೆತ್ತು ಹೊಲಕ್ಕೆ ಮೂಲ' ಎಂಬ ಗಾದೆಯಂತೆ ಸಂಬಂಧಿಕರ ಕಿರುಕುಳವೇ ತಿಮ್ಮಕ್ಕನಿಗೆ ಹೆಚ್ಚು ನೋವನ್ನುಂಟುಮಾಡಿದೆ. ಆದರೂ ಅದಕ್ಕೆಲ್ಲ ಹೆದರದೆ ಎದುರಿಸಿ ಬಾಳುತ್ತಿರುವ ಧೀರ ಮಾತೆ.

೧

# ೮. ಮರಗಳು ಕೊಟ್ಟ ಮಂದಹಾಸ

**ಮಾ**ನವ ಪ್ರಾಣಿಸಮೂಹದಲ್ಲಿ ಅತ್ಯಂತ ಶ್ರೇಷ್ಠ ಪ್ರಾಣಿಯೂ ಹೌದು, ಅಂತೆಯೇ ದುಷ್ಟ ಪ್ರಾಣಿಯೂ ಹೌದು. ಆತನ ಬುದ್ಧಿಯಿಂದ ವಿಶಿಷ್ಟವೆನಿಸಿದರೆ, ಆತನ ಕ್ರೌರ್ಯಗಳಿಂದ ದುಷ್ಟತನದಲ್ಲಿ ಮೊದಲಿಗನಾಗುತ್ತಾನೆ. ಆತನಿಗಿರುವ ಬುದ್ಧಿ, ವರ ಮತ್ತು ಶಾಪವಾಗಿದೆ. ಮನುಕುಲದ ಆರಂಭಿಕ ಬದುಕಿನಲ್ಲಿ ಪ್ರಕೃತಿಗೆ ಹತ್ತಿರವಾಗಿ ಬದುಕಿದ್ದವ, ಬುದ್ಧಿವಂತಿಕೆಯಿಂದ ವಿಕಾಸದ ಹಾದಿಯಲ್ಲಿ ನಾಗರಿಕ ಅನ್ನಿಸಿಕೊಂಡಂತೆಲ್ಲ, ಪ್ರಕೃತಿ ಸಂಪತ್ತನ್ನು ಕೊಳ್ಳೆ ಹೊಡೆಯ ತೊಡಗಿದ. ಸ್ವಾರ್ಥ ತೆವಲುಗಳಿಗಾಗಿ ನಿಸರ್ಗಸಿರಿಯನ್ನು ಹಾಳು ಮಾಡತೊಡಗಿದ. ಇಂದು ಪ್ರಕೃತಿಸಿರಿಗೆ ಬಗೆಯುತ್ತಿರುವ ದ್ರೋಹಗಳನ್ನು ನೆನೆದರೆ ಮೈಜುಮ್ಮೆನ್ನುತ್ತೆ. ಗಣಿಗಾರಿಕೆ, ಕಾರ್ಖಾನೆ, ಅಣೆಕಟ್ಟುಗಳ ಮೂಲಕ ಶೀಘ್ರ ಪ್ರಗತಿಯಾಗುತ್ತವೆಂಬ ಆರ್ಭಟದಲ್ಲಿ ತನಗರಿವಿಲ್ಲದಂತೆಯೇ ತನ್ನ ನಾಶವನ್ನು ತಾನೇ ಮಾಡಿಕೊಳ್ಳಲು ಭರದಿಂದ ಸಿದ್ಧನಾಗುತ್ತಿರುವುದು ವಿಷಾದದ ಸಂಗತಿ. ಈ ಕ್ಷಣದಿಂದಲೇ ಎಚ್ಚೆತ್ತುಕೊಂಡರೆ ಮಾತ್ರ ಮುಂದಿನ ನಮ್ಮ ಮಕ್ಕಳು ಮೊಮ್ಮಕ್ಕಳಿಗೆ ಈ ಭೂಮಿಯನ್ನು ಉಳಿಸಿದಂತೆ ಆಗುತ್ತೆ. ಇಲ್ಲವೆಂದರೆ ನಮ್ಮ ಆಯುಷ್ಯದ ಅರ್ಧಕ್ಕೆ ಸರ್ವನಾಶವಾಗುವುದರಲ್ಲಿ ಸಂಶಯವಿಲ್ಲ. ಇಂತಹ ಯಾವುದೇ ವೈಚಾರಿಕವಾದ, ವೈಜ್ಞಾನಿಕ ವಾದ, ತಿಳುವಳಿಕೆಯಿಲ್ಲದ ಅನಕ್ಷರಸ್ಥರಾದರೂ, ಆಗಾಧವಾದ ಸೇವಾ ಮನೋಧರ್ಮದ ಮುತ್ತಿನ ಮಣಿಗಳಂತಿರುವ ಬಿಕ್ಕಲುಚಿಕ್ಕಯ್ಯ–ತಿಮ್ಮಕ್ಕ ದಂಪತಿಗಳು ಪ್ರಕೃತಿಸಿರಿ ಕಳೆಗುಂದದೆ ವರ್ಧಿಸಬೇಕೆಂಬ ಮಹಾದಾಸೆಯಿಂದ ಆಲದ ಕೊಂಬೆಗಳನ್ನು ನೆಟ್ಟು, ಪೋಷಿಸಿ, ಸಹಸ್ರಾರು ಹೆಮ್ಮರಗಳನ್ನಾಗಿಸಿದ ಸಾತ್ವಿಕರು.

ಸಸ್ಯ ವಿಜ್ಞಾನಿಗಳ ಲೆಕ್ಕಚಾರದಂತೆ ತಿಮ್ಮಕ್ಕ–ಬಿಕ್ಕಲುಚಿಕ್ಕಯ್ಯ ಬೆಳೆಸಿರುವ ಮರವೊಂದರ ಜೀವಿತಾವಧಿಯ ಬೆಲೆ ಒಂದು ಕೋಟಿ ಎಪ್ಪತ್ತೈದು ಲಕ್ಷ ರೂಪಾಯಿಗಳಾದರೆ, ಇಂದು ಬೆಳೆದು ಹೆಮ್ಮರಗಳಾಗಿರುವ ಸುಮಾರು ಎರಡು ನೂರ ಎಂಬತ್ತು ನಾಲ್ಕು ಮರಗಳ ಒಟ್ಟು ಬೆಲೆ ನಾಲ್ಕುನೂರ ತೊಂಬತ್ತೇಳು ಕೋಟಿ ರೂಪಾಯಿ. ಇದರ ಒಡತಿ ತಿಮ್ಮಕ್ಕ–ಚಿಕ್ಕಯ್ಯ ಇದನ್ನೆಲ್ಲ ಲೋಕಾರ್ಪಣೆ ಮಾಡಿರುವುದು ಅವರ ಅಪೂರ್ವ ತ್ಯಾಗಕ್ಕೆ ಹಿಡಿದ ಕನ್ನಡಿಯಾಗಿದೆ. ವಾತಾವರಣವನ್ನು ತಂಪಾಗಿಸಿ ಲೋಕವನ್ನು ಇಂಪಾಗಿಸಿರುವ ದಂಪತಿಗಳು ಆ ಪರೋಪಕಾರ ಕಾರ್ಯ ಸಹಸ್ರಾರು ಪಶು–ಪಕ್ಷಿಗಳು, ಕ್ರಿಮಿಕೀಟಗಳು, ಜೀವಜಂತುಗಳು, ಸಕಲ ಪ್ರಾಣಿಸಮೂಹಗಳು ಸಂತಸದಿಂದ ಬದುಕಲು ಪ್ರೇರಕಶಕ್ತಿಯಾಗಿದೆ.

ನಿಸ್ವಾರ್ಥ ದಂಪತಿಗಳ ಘನಕಾರ್ಯವನ್ನು ಜಗತ್ತಿಗೆ ಪರಿಚಯಿಸುವ ಮುನ್ನ ಇಹಲೋಕ ತ್ಯಜಿಸಿದ ಬಿಕ್ಕಲುಚಿಕ್ಕಯ್ಯ ತನ್ನ ಹೃದಯ ಸಾಮ್ರಾಜ್ಞಿ ತಿಮ್ಮಕ್ಕನಿಗೆ 'ಮಕ್ಕಳಿಲ್ಲ, ನನ್ನ ಪತಿಯು ಇನ್ನಿಲ್ಲ ಅಂತ ಕೊರಗಬೇಡ, ಮರಗಳೇ ನಮ್ಮ ಮಕ್ಕಳು. ಈವೊತ್ತಿನಿಂದ ಅವೇ ನಿಂಗೆ ದಿಕ್ಕು. ಇನ್ನೂ ಒಳ್ಳೆ ಕೆಲ್ಸ ಮಾಡು, ಆ ದೇವನ ಕರೆ ಬಂದಾಗ ಬಾ ಅಂತ' ಹೇಳಿ ಕೊನೆ ಉಸಿರು ಬಿಟ್ಟರು. ಸಂಗಾತಿ ಕಳೆದುಕೊಂಡ ದುಃಖವನ್ನು ಮರಗಳನ್ನು ನೋಡಿ ನೋಡಿ ಸಮಾಧಾನಪಟ್ಟುಕೊಂಡು ಜೀವಿಸುತ್ತಿದ್ದ ತಿಮ್ಮಕ್ಕರ ಜೀವನ ಮತ್ತು ಸಾಧನೆಯನ್ನು ನೋಡಿ ಅಚ್ಚರಿಗೊಂಡ ಜಲಾಯನ ಅಭಿವೃದ್ಧಿ ಯೋಜನೆಯ ನಿರ್ದೇಶಕರಾದ ಕೆ.ವಿ.ಸರ್ವೇಶ್ ಅವರು ಎಂ.ವಿ.ನೆಗಳೂರ ಅವರಿಗೆ ಪರಿಚಯಿಸಿದರು. ಉತ್ತಮ ಉಪನ್ಯಾಸಕರು, ಲೇಖಕರು ಆಗಿರುವ ಎಂ.ವಿ.ನೆಗಳೂರು ಅವರು. ಜಗತ್ತಿನ ಜನರ ಹೃನ್ಮನಮಂದಿರಕ್ಕೆ ತಿಮ್ಮಕ್ಕನವರನ್ನು ಮೊಟ್ಟಮೊದಲಿಗೆ ಪರಿಚಯಿಸಿದವರು. ಶ್ರೀಯುತರು ಬರೆದ 'ಸಾಲುಮರಗಳ ಸಂಗಾತಿ ತಿಮ್ಮಕ್ಕ' ಎಂಬ ಲೇಖನ ೧೯೯೪ರ ಜೂನ್ ೧೯ರಂದು ರಾಜ್ಯದ ಪ್ರತಿಷ್ಠಿತ ಪತ್ರಿಕೆಗಳಲ್ಲಿ ಒಂದಾದ ಪ್ರಜಾವಾಣಿ ಪತ್ರಿಕೆಯ ಸಾಪ್ತಾಹಿಕ ಪುರವಣಿಯಲ್ಲಿ ಪ್ರಕಟಗೊಂಡು, ಪ್ರಕೃತಿಪ್ರಿಯರಿಗೆ ಸಂತಸ, ನೂರಾರು ಮಂದಿ ಪ್ರಕೃತಿ ಸೇವೆಗೆ ನಿರತರಾಗಲು ಉತ್ತೇಜಕವಾಯಿತು. ಅಲ್ಲದೇ ಎಂ.ವಿ.ನೆಗಳೂರ ಅವರು 'Thimmakka and her 284 Children' ಎಂಬ ಲೇಖನವನ್ನು ಆಂಗ್ಲ ಭಾಷೆಯಲ್ಲಿ ಬರೆದರು. ಅದು ೧೯೯೫ರ ಏಪ್ರಿಲ್ ೩೦ರಂದು 'Deccan Herald' ಪತ್ರಿಕೆಯಲ್ಲಿ ಪ್ರಕಟಗೊಂಡಿತು. ನೆಗಳೂರ ಅವರ ಬರಹ ಎಲೆ ಮರೆಯ ಕಾಯಿಯಂತಿದ್ದ ತಿಮ್ಮಕ್ಕ ಅವರ ಭವ್ಯವಾದ ಬದುಕನ್ನು ಜಗದ ಜನತೆಗೆ ಪರಿಚಯಸಿತು. ಸಾವಿರಾರು ಅಭಿನಂದನೆಗಳು, ಪ್ರಶಂಸೆಗಳು, ಬಿರುದು, ಬಹುಮಾನಗಳು, ಸಾಲುಗಟ್ಟಿ ಬಂದವು. ಆ ಪ್ರಶಂಸೆಗಳ ಬಿಗುಮಾನವಾಗಲಿ, ನಾನಿಷ್ಟು ದೊಡ್ಡ ವ್ಯಕ್ತಿಯಾಗಿದ್ದನೆಂಬ ಅಹಂ ಆಗಲಿ ತಿಮ್ಮಕ್ಕನವರ ಮನದಲ್ಲಿ ಎಳ್ಳಷ್ಟು ಇಲ್ಲದಿರುವುದು ಅವರ ಘನ ವ್ಯಕ್ತಿತ್ವಕ್ಕೆ ಪ್ರತ್ಯೇಕ್ಷ ಸಾಕ್ಷಿಯಾಗಿದೆ.

ಈವೊತ್ತು ಪ್ರಶಸ್ತಿಗಳ–ಬಹುಮಾನಗಳ ಯುಗ ಅಂತಲೇ ಕರೆಯಬಹುದು. ಅಷ್ಟೊಂದು ಸಂಘ–ಸಂಸ್ಥೆಗಳು ಪ್ರಶಸ್ತಿಯನ್ನು ಕೊಡುತ್ತಿರುವುದನ್ನು ಗಮನಿಸಿದರೆ ಆ ಪ್ರಶಸ್ತಿಗಳಿಗೆ ಬೆಲೆ ಇಲ್ಲದಂತಾಗಿದೆ. ಪ್ರಶಸ್ತಿ ಕೊಡಲಿಕ್ಕೆ ಅಂತಲೇ ಕೆಲವು ಸಂಘ–ಸಂಸ್ಥೆಗಳು ಹುಟ್ಟಿಕೊಂಡಿವೆ. ಇನ್ನೂ ಕೆಲವು ಸಂಸ್ಥೆಗಳು ಪ್ರಶಸ್ತಿ ಕೊಡುವ ನೆಪದಲ್ಲಿ ಸಾರ್ವಜನಿಕರಿಂದ ವಂತಿಗೆ ಸಂಗ್ರಹ ಮಾಡುವ ಮೂಲಕ ಹಗಲು–ದರೋಡೆ ಮಾಡುತ್ತಿವೆ. ಕೆಲವು ವ್ಯಕ್ತಿಗಳು ಏನು ಸಾಧನೆ ಮಾಡದಿದ್ದರು ಮಹಾಸಾಧನೆ ಮಾಡಿರುವ ಸಾಧಕರೂ ಅಂತ ಫೋಟೊ, ವಿಡಿಯೋ ತೆಗೆಸಿಕೊಂಡು ಅದನ್ನೆಲ್ಲ ದಾಖಲೆಗಳು ಅಂತ ನಕಲಿ ಸಂಸ್ಥೆಗಳಿಗೆ ನೀಡಿ, ತಾವೇ ಹಣಕೊಟ್ಟು ನನ್ನ ಇಂದ್ರ–ಚಂದ್ರ 'ಸೇವಾರತ್ನ' 'ಸೇವಾಭೂಷಣ' ಇತ್ಯಾದಿ ಬಿರುದು–ಪ್ರಶಂಸೆಗಳನ್ನು ಪಡೆಯುತ್ತಿರುವುದನ್ನು ಕಾಣುತ್ತಿದ್ದೇವೆ. ಬೆತ್ತಲೆ ತಿರುಗುವವರ ನಡುವೆ ಬಟ್ಟೆ ತೊಟ್ಟವರು ಬೆರಳಿಕೆಯಷ್ಟು ಮಂದಿ ಇದ್ದು, ಅವರೇ ನಾಚಿಕೆಪಡುವಂತಹ ಸ್ಥಿತಿ ಒದಗಿರುವಂತೆ ಇಂದು ಬೆರಳಣಿಕೆಯಷ್ಟು ಇರುವ ಸತ್ಯನಿಷ್ಠರಿಗೆ, ಕಾಯಕನಿಷ್ಠರಿಗೆ, ಸೇವಾನಿಷ್ಠರಿಗೆ ಒದಗಿದೆ. ಅದು ಏನೇ ಇರಲಿ ಒಳ್ಳೆ ಕೆಲಸ ಮಾಡಿದ ಮುಗ್ದೆ ತಿಮ್ಮಕ್ಕನವರಿಗೆ ಅದೆಷ್ಟೋ ಸಂಘ–ಸಂಸ್ಥೆಗಳು



ಸನ್ಮಾನಿಸಿವೆ. ಅಭಿನಂದಿಸಿವೆ. ರಾಶಿ ರಾಶಿ ನೆನಪಿನ ಫಲಕಗಳನ್ನು, ಪೆಂಡೆಗಟ್ಟಲೇ ಪ್ರಶಸ್ತಿಪತ್ರ, ಸನ್ಮಾನ ಪತ್ರಗಳನ್ನು ನೀಡಿವೆ. ಕೆಲವೊಂದಿಷ್ಟನ್ನು ಮಾತ್ರ ಜೋಪಾನವಾಗಿ ಪ್ರದರ್ಶನಕ್ಕಿಟ್ಟಿರುವು ದನ್ನು ಬಿಟ್ಟರೆ ಉಳಿದವುಗಳನ್ನೆಲ್ಲ ಗೋಣಿಚೀಲಕ್ಕೆ ತುಂಬಿ ಅಟ್ಟದ ಮೇಲೆ ಕಟ್ಟಿ ಇಟ್ಟಿರುವರು.

ಕೆಲವು ಸಂಘ–ಸಂಸ್ಥೆಗಳು ತಮ್ಮ ವರ್ಚಸ್ಸನ್ನು ಹೆಚ್ಚಿಸಿಕೊಳ್ಳಲು, ಒಂದು ಸಮಾರಂಭ ಮಾಡಿ, ಒಂದು ಪ್ರಶಸ್ತಿ ಪತ್ರ ನೀಡಿ ಕೈತೊಳೆದುಕೊಂಡಿವೆ. ಕೆಲವು ಸಂಘ–ಸಂಸ್ಥೆಗಳು ಬಹಳ ಪ್ರೀತಿ–ಗೌರವಗಳಿಂದ ತಿಮ್ಮಕ್ಕನವರನ್ನು ಕರೆಯಿಸಿ, ಫಲ–ಪುಷ್ಪ ತಾಂಬೂಲ ಶಾಲಿ ನೊಂದಿಗೆ ಬಿರುದು ನೀಡಿ ಸನ್ಮಾನಿಸಿ, ಅಭಿನಂದಿಸುವುದರೊಂದಿಗೆ ಅಜ್ಜಿಯ ಜೀವನ ನಿರ್ವಹಣೆಗೆ ತಮ್ಮ ಕೈಲಾದಷ್ಟು ಧನಸಹಾಯವನ್ನು ಮಾಡಿವೆ.

ದೂರದರ್ಶನದವರು, ಆಕಾಶವಾಣಿಯವರು ತಿಮ್ಮಕ್ಕನವರನ್ನು ಸಂದರ್ಶಿಸಿ ಪ್ರಸಾರ ಮಾಡಿದ್ದಾರೆ. 'ಅರಣ್ಯೀಕರಣದಲ್ಲಿ ಮಹಿಳೆಯ ಪಾತ್ರ' ವಿಷಯ ಕುರಿತು ಟರ್ಕಿಯಲ್ಲಿ ನಡೆದ ಅಂತರರಾಷ್ಟ್ರೀಯ ಮಟ್ಟದ ವಿಚಾರ ಸಂಕೀರಣದಲ್ಲಿ ತಿಮ್ಮಕ್ಕನವರ ಸಾಧನೆಯನ್ನು ಪ್ರಶಂಸಿಸಲಾಗಿದೆ. ದೂರದರ್ಶನದವರು ಸಾಕ್ಷ್ಯ ಚಿತ್ರ ಮಾಡಿದ್ದಾರೆ. ಚಿತ್ರದುರ್ಗದ ನಾಟ್ಯರಂಜನಿ ನೃತ್ಯಕಲಾ ಕೇಂದ್ರದ ಜಿ.ಕಿರಣ್‌ಗುಜ್ಜರ್‌ರವರು 'ವೃಕ್ಷೋ ರಕ್ಷತಿ ರಕ್ಷಿತಃ' ಎಂಬ ನೃತ್ಯ ರೂಪಕವನ್ನು ನಿರ್ಮಿಸಿದ್ದಾರೆ.

ಕರ್ನಾಟಕ ಸರ್ಕಾರದ ಅರಣ್ಯ ಇಲಾಖೆಯ ಸಂರಕ್ಷಣಾಧಿಕಾರಿಯಾದ ದಾಸೇಗೌಡರು ಮುಗ್ದೆ ತಿಮ್ಮಕ್ಕನ ನಿಸ್ವಾರ್ಥ ಸೇವೆಯನ್ನು ಇಲಾಖೆಯ ಉನ್ನತ ಅಧಿಕಾರಿಗಳ ಗಮನಕ್ಕೆ ತಂದರು. ಅವರು ಪರಿಶೀಲಿಸಿ **'ವನಶ್ರೀ'** ಪ್ರಶಸ್ತಿಗೆ ಆಯ್ಕೆ ಮಾಡಿದರು. ಅಂದು ಮುಖ್ಯ ಮಂತ್ರಿಯಾಗಿದ್ದ ಶ್ರೀ ವೀರಪ್ಪ ಮೊಯಿಲಿ ಅವರು 'ಸಾಲುಮರದ ತಿಮ್ಮಕ್ಕ'ನವರಿಗೆ ಫಲಪುಷ್ಪ ತಾಂಬೂಲ, ಶಾಲಿನೊಂದಿಗೆ ಸನ್ಮಾನಿಸಿ. **'ವನಶ್ರೀ'** ಪ್ರಶಸ್ತಿ ನೀಡಿ ಗೌರವಿಸಿದರು. 'ಡೆಕ್ಕನ್ ಹೆರಾಲ್ಡ್' ಎಂಬ ಆಂಗ್ಲ ಭಾಷಾ ಪತ್ರಿಕೆಯಲ್ಲಿ ಪ್ರಕಟವಾದ 'Thimmakka and her 284 Children' ಎಂಬ ಎಂ.ವಿ.ನೆಗಳೂರು ಅವರ ಲೇಖನವನ್ನು ಓದಿದ ರಾಜ್ಯಸಭಾ ಸದಸ್ಯರಾದ ಶ್ರೀ ಸಚ್ಚಿದಾನಂದಸ್ವಾಮಿಯವರು 'ರಾಷ್ಟ್ರೀಯ ನಾಗರೀಕ ಪ್ರಶಸ್ತಿ' ಸಮಿತಿಯ ಅಧ್ಯಕ್ಷರಾದ ನಿವೃತ್ತ ಸುಪ್ರೀಂಕೋರ್ಟ್ ನ್ಯಾಯಾಧೀಶರಾದ ಪಿ.ಎನ್.ಭಗವತಿ ಮತ್ತು ಆ ಸಮಿತಿಯ ಸದಸ್ಯರ ಗಮನಕ್ಕೆ ತಂದರು. ಕೂಲಂಕಷವಾಗಿ ಪರಿಶೀಲಿಸಿದ ಆ ಸಮಿತಿಯವರು ತಿಮ್ಮಕ್ಕನವರಿಗೆ ಆ ಪ್ರಶಸ್ತಿಯನ್ನು ಘೋಷಿಸಿದರು. ಅಂದು ಪ್ರಧಾನ ಮಂತ್ರಿಯಾಗಿದ್ದ ಎಚ್.ಡಿ.ದೇವೇಗೌಡರು ದೆಹಲಿಯಲ್ಲಿ ತಿಮ್ಮಕ್ಕನವರಿಗೆ ೧೯೯೫ನೇ ಡಿಸೆಂಬರ್ ೨೩ರಂದು ಫಲಪುಷ್ಪ ತಾಂಬೂಲ ಗಂಧದಹಾರ ಶಾಲಿನೊಂದಿಗೆ **'ರಾಷ್ಟ್ರೀಯ ನಾಗರೀಕ'** ಪ್ರಶಸ್ತಿ ನೀಡಿ ಸನ್ಮಾನಿಸಿದರು.

ಕೇಂದ್ರ ಸರ್ಕಾರ **'ಇಂದಿರಾ ಪ್ರಿಯದರ್ಶಿನಿ ವೃಕ್ಷ ಮಿತ್ರ ಪುರಸ್ಕಾರ–೧೯೯೭'** ಪ್ರಶಸ್ತಿ ನೀಡಿ ಸನ್ಮಾನಿಸಿದೆ. ಕರ್ನಾಟಕ ಸರ್ಕಾರ **'ರಾಜ್ಯ ಪ್ರಶಸ್ತಿ–೧೯೯೭'** ಪ್ರಶಸ್ತಿ ನೀಡಿ ಗೌರವಿಸಿದೆ. ಕರ್ನಾಟಕ ಸರ್ಕಾರದ ಅರಣ್ಯ ಇಲಾಖೆ ೨೦೦೭ರಲ್ಲಿ ನಡೆದ ೫೩ನೇ ವನ್ಯ ಜೀವಿ ಸಪ್ತಾಹ ಆಚರಣೆಯಲ್ಲಿ ಸನ್ಮಾನಿಸಿದೆ. ಸಮಾಜ ಕಲ್ಯಾಣ ಇಲಾಖೆ ಸನ್ಮಾನಿಸಿದೆ.

ಸಾಲು ಮರದ ತಿಮ್ಮಕ್ಕನವರನ್ನು ರಾಜ್ಯ ಮತ್ತು ಕೇಂದ್ರ ಸರ್ಕಾರದ ವಿವಿಧ ಇಲಾಖೆಗಳು ಸನ್ಮಾನಿಸಿರುವುದಲ್ಲದೆ ನೂರಾರು ಖಾಸಗಿ ಸಂಘ ಸಂಸ್ಥೆಗಳು ಗೌರವಿಸಿವೆ. **'ಮಾಗಡಿ ವ್ಯಕ್ತಿ-೧೯೯೭'** ಪ್ರಶಸ್ತಿಯನ್ನು. ಮಾಗಡಿ ಸಿದ್ದಲಿಂಗೇಶ್ವರಸ್ವಾಮಿ ವಿದ್ಯಾಸಂಸ್ಥೆ ಹಾಗೂ ಮಾಗಡಿ ತಾಲ್ಲೂಕು ಯುವಜನ ವೇದಿಕೆ ನೀಡಿದೆ. **'ಇಂಡುವಾಳು ಎಚ್.ಹೊನ್ನಯ್ಯ ಸಮಾಜ ಸೇವಾ ಪ್ರಶಸ್ತಿ'**ಯನ್ನು ಮಂಡ್ಯನಗರದ ಜನದನಿ ಸಾಂಸ್ಕೃತಿಕ ಸಂಘಟನೆ, **'ಭಾರತ ರತ್ನ ಡಾ. ಬಾಬಾ ಸಾಹೇಬ್ ಅಂಬೇಡ್ಕರ್'** ಪ್ರಶಸ್ತಿಯನ್ನು ಸಹರಾ ಲೇಖ್ ಸಿಟಿ, **'ತ್ಯಾಗದ ಪ್ರತಿರೂಪ ಸಾಲು ಮರದತಿಮ್ಮಕ್ಕ'** ಪ್ರಶಸ್ತಿಯನ್ನು ಚೈತನ್ಯ ಯುವಕ ಸಂಘ, **'ಸೇವಾ ರತ್ನ'** ಪ್ರಶಸ್ತಿಯನ್ನು ಮಾಗಡಿ ತಾಲ್ಲೂಕು ಛಲವಾದಿ ಸಂಘ, **'ಶ್ರೀಮಾತಾ'** ಪ್ರಶಸ್ತಿಯನ್ನು ಶ್ರೀರಾಮಚಂದ್ರಪುರ ಮಠದ ಶ್ರೀ ಮದ್ರಾಘವೇಶ್ವರ ಭಾರತೀಸ್ವಾಮಿಜಿಯವರು, **'ಸಾಧನಾ ಪ್ರಶಸ್ತಿ'**ಯನ್ನು ಅಖಿಲ ಭಾರತೀಯ ಜೈನ್ ಮಹಿಳಾ ಸಂಘ, **'ವನಮಾತಾ'** ಪ್ರಶಸ್ತಿಯನ್ನು ಬಳ್ಳಾರಿಯ ಪರಿಸರ ವೇದಿಕೆ, **'ಮಹಿಳಾ ರತ್ನ'** ಪ್ರಶಸ್ತಿಯನ್ನು ಚಿಕ್ಕಮಂಗಳೂರಿನ ಮಹಿಳಾ ಜಾಗೃತಿ ಸಂಘ, **'ಪಂಪಾಪತಿ ಪರಿಸರ ಪ್ರಶಸ್ತಿ'**ಯನ್ನು ದಾವಣಗೆರೆಯ ಗ್ರೀನ್ ಇಂಡಿಯಾ ವಾಲೆಂಟರ್ಸ್ ಫಾರ್ ಎನ್ವಿರಾನ್‌ಮೆಂಟ್‌ರವರು, **'ಸಮಾಜ ರತ್ನ'** ಪ್ರಶಸ್ತಿಯನ್ನು ಬಳ್ಳಾರಿಯ ಸ್ಪೂರ್ತಿ ಚಾರಿಟಬಲ್ ಟ್ರಸ್ಟ್‌ನವರು ಸನ್ಮಾನ ಪತ್ರ, ಶ್ರೀಮದ್ ವಿಭೂತಿಪುರ ವೀರಸಿಂಹಾಸನ ಸಂಸ್ಥಾನದ ಮಠವು **'ಸುವರ್ಣಶ್ರೀ'** ಪ್ರಶಸ್ತಿ ಫಲಕ, ಫಲಪುಷ್ಪ ಶಾಲುಗಳೊಂದಿಗೆ ನೀಡಿ ಗೌರವಿಸಿವೆ.

ಗುಬ್ಬಿ ತಾಲ್ಲೂಕು ಗುಬ್ಬಿಹೊಸಹಳ್ಳಿ ಗ್ರಾಮದ ಕನ್ನಡ ಯುವಕ ಸಂಘ, ಬೆಂಗಳೂರಿನ ಪೀಣ್ಯ ದಾಸರಹಳ್ಳಿಯಲ್ಲಿರುವ ಕೆಂಗಲ್ ಹನುಮಂತಯ್ಯ ವಾಲಿಬಾಲ್ ಸಂಸ್ಥೆ, ಬೆಂಗಳೂರಿನ ಕಾರ್ಮಿಕ ಕನ್ನಡ ಯುವಕ ಸಂಘ, ಲಯನ್ಸ್ ಕ್ಲಬ್, ಬೆಂಗಳೂರಿನ ಬಸವೇಶ್ವರ ನಗರದಲ್ಲಿರುವ ಅಖಿಲ ಕರ್ನಾಟಕ ಒಕ್ಕಲಿಗರ ಹಿತರಕ್ಷಣಾ ವೇದಿಕೆ, ಶ್ರವಣಬೆಳಗೊಳದ ಜೈನಮಠ, ಬೆಂಗಳೂರಿನ ಭಾಗೀರಥಿಭಾಯಿ ನಾರಾಯಣರಾವ್ ಮಾನೆ ಎಜುಕೇಷನಲ್ ಇನ್‌ಸ್ಟಿಟ್ಯೂಟ್, ಬೆಂಗಳೂರಿನ ಆಚಾರ್ಯ ಶಿಕ್ಷಣ ಸಂಸ್ಥೆ, ಸಿಟಿಇನ್ಸಿಟ್ಯೂಟ್ ಮೈಕೋ ಕಂಪನಿ, ಆದಿಪರಾಶಕ್ತಿ ಅಮ್ಮನ ಪೀಠದ ಕರ್ನಾಟಕ ಕಮಿಟಿ, ಪೆಪ್ಸಿಕೋ ಇಂಡಿ ಹೋಲ್ಡಿಂಗ್ ಪ್ರೈವೇಟ್ ಲಿಮಿಟೆಡ್, ನವಭಾರತ ನಿರ್ಮಾಣ ವಿದ್ಯಾಮಂದಿರ, ಜಾಗೃತಿ ಸೇನೆ, ಜ್ಞಾನವಾಹಿನಿ ಪಬ್ಲಿಕ್ ಸ್ಕೂಲ್, ಸೊಲ್ಲಾಪುರದಮ್ಮ ಕ್ಷೇಮಾಭಿವೃದ್ಧಿ ಸಂಘ, ಬಂಡೇಪಾಳ್ಯದ ಹೊಯ್ಸಳ ಕ್ರೀಡಾ ಮತ್ತು ಕಲಾವಿದರ ಸಂಘ, ಚಿತ್ರದುರ್ಗದ ಮುರುಘಾರಾಜೇಂದ್ರ ಬೃಹನ್ಮಠ, ಗೊರೆಗುಂಟೆಪಾಳ್ಯದ ಯೂತ್ ಅಸೋಷಿಯೆಷನ್, ತುಮಕೂರಿನ ನೇತಾಜಿ ಯುವಕ ಸಂಘ, ಹಾಸನದ ಕೆಸಿಟಿಎಸ್ ಸಂಘ ಮೊದಲಾದ ಸಂಘ-ಸಂಸ್ಥೆಗಳು ಹೃನ್ಮನಪೂರ್ವಕವಾಗಿ ತಿಮ್ಮಕ್ಕನವರನ್ನು ಆಹ್ವಾನಿಸಿ ಸನ್ಮಾನಪತ್ರ, ಫಲಪುಷ್ಪ ತಾಂಬೂಲದೊಂದಿಗೆ ಅಭಿನಂದಿಸಿವೆ.

ಅಪಾರ ಅಭಿಮಾನ ಗಳಿಸಿರುವ ತಿಮ್ಮಕ್ಕನವರಿಗೆ ಬೆಳ್ಳಿಕಡಗ, ಚಿನ್ನದ ಸರ, ಚಿನ್ನದ ಪದಕ, ಬೆಳ್ಳಿಪದಕ, ಉಂಗುರ ನೀಡಿ ಅಭಿನಂದಿಸಿರುವ ಅಭಿಮಾನಿಗಳೂ ಇದ್ದಾರೆ. ಲಿಂಗೈಕ್ಯರಾದ ಶಾಸಕ ಬಸವೇಗೌಡರ ವಾರ್ಷಿಕ ಶಿವಗಣಾರಾಧನ ಕಾರ್ಯಕ್ರಮಕ್ಕೆ ಅವರ ಪತ್ನಿ ಗೌರಮ್ಮನವರು ತಿಮ್ಮಕ್ಕನವರನ್ನು ಆಹ್ವಾನಿಸಿ, ಬೆಳ್ಳಿಕಡಗ ಕೈಗೆ ತೊಡಿಸಿ, ಮೂವತ್ತು ಸಾವಿರ ರೂಪಾಯಿ



ಹಣ ನೀಡಿ ಗೌರವಿಸಿರುವರು. ತಿಮ್ಮಕ್ಕನವರು ಮಾಡಿದ ಸೇವೆಗೆ ಸಂದ ಗೌರವ, ಅಭಿನಂದನೆ, ಸನ್ಮಾನಗಳು ಅಪಾರ. ಮೂಟೆ ಕಟ್ಟಿ ಅಟ್ಟದ ಮೇಲೆ ಹಾಕುವಷ್ಟು ಫಲಕಗಳು ಬಂದಿರುವುದು ತಿಮ್ಮಕ್ಕ ಮಾತೆಯ ಸಾಧನೆಗೆ ಸಂದ ಗೌರವವಾಗಿದೆ.

ಯಾರೆ ಹೋಗಲಿ ಅವರನ್ನು ತುಂಬು ಪ್ರೀತಿಯಿಂದ ಮಾತನಾಡಿಸುವ ತಿಮ್ಮಕ್ಕ, ತಮ್ಮೂರಿನ ಹಿರಿಯರನ್ನು ಗ್ರಾಮಪಂಚಾಯಿತಿ, ತಾಲ್ಲೂಕು ಪಂಚಾಯಿತಿ, ಜಿಲ್ಲಾ ಪಂಚಾಯಿತಿ ಸದಸ್ಯರನ್ನು, ಸಚಿವರನ್ನು, ಶಾಸಕರನ್ನು ಕೃತಜ್ಞತೆಯಿಂದ ನೆನೆಯುವರು. ಅವರ ಹೃದಯ ವೈಶಾಲ್ಯ ಔದಾರ್ಯ, ಸಹನೆ, ತಾಳ್ಮೆ ಅಭಿನಂದಾರ್ಹವಾದುದು, ಅನುಕರಣೀಯವಾದುದು.

೪

# ೯. ತಿಮ್ಮಕ್ಕನವರ ವ್ಯಕ್ತಿತ್ವ

ದೇಶದ ಪ್ರಗತಿಗೆ ಸ್ವಾರ್ಥರಹಿತ, ನೀತಿಯುತವಾದ ಪ್ರಾಮಾಣಿಕ ಸರಳ ಜೀವನ ಅಗತ್ಯವಾಗಿದೆ. ದೇಶ ಎದುರಿಸುತ್ತಿರುವ ಹಲವು ಸಮಸ್ಯೆಗಳಲ್ಲಿ ಭ್ರಷ್ಟಚಾರವೂ ಒಂದು. ಇದರಿಂದ ರಾಷ್ಟ್ರದ ಅಭಿವೃದ್ಧಿಗೆ ಕೊಡಲಿ ಏಟು ಬೀಳುವುದು ಅಲ್ಲದೆ, ರಾಷ್ಟ್ರವು ಆರ್ಥಿಕವಾಗಿ ದುರ್ಬಲಗೊಳ್ಳುವುದು. ದರೋಡೆಕೋರರು, ಮೋಸಗಾರರು, ಕೊಲೆಗಾರರು, ಅಸತ್ಯ, ಅನೀತಿ, ಅನ್ಯಾಯ, ಅಕ್ರಮ ಮೊದಲಾದ ದುರ್ಗುಣಗಳ ಗಣಿಗಳಾಗಿರುವವರು ಇಂದು ಈ ದೇಶದ ಆರ್ಥಿಕ ಸಂಪತ್ತಿನ ದಣಿಗಳಾಗಿರುವುದು ಈ ಜಗತ್ತಿಗೆ ಒದಗಿದ ದೊಡ್ಡ ದುರಂತ. ದುಷ್ಟತೆಯು ವಿಜೃಂಭಿಸುತ್ತಿರುವುದನ್ನು ಕರಗಿಸಲು, ಶಿಷ್ಟರ ಸಾಧನೆಗಳನ್ನು ಅರಿತಾಗ ಸಮಷ್ಟಿ ಸಮೃದ್ಧಿಯಾಗುವುದು.

ನೊಂದವರ ನೋವು ನಿವಾರಿಸಲು ಪ್ರಪಂಚದಲ್ಲೇ ಪ್ರಥಮ ಬಾರಿಗೆ ಪ್ರಯತ್ನಿಸಿದವರು ಮಹಾನ್‌ಪುರುಷ ಬುದ್ಧ. ಈತ ತನಗೆ ಸಕಲ ಸಂಪತ್ತುಗಳಿದ್ದರೂ ಅವುಗಳನ್ನೆಲ್ಲ ತೊರೆದು ಈ ಜೀವ–ಜೀವನದ ಗುರಿ–ಉದ್ದೇಶಗಳನ್ನು ಶೋಧನೆ ಮಾಡಿ, ಬದುಕುವುದಾದರೂ ಏಕೆ? ಹೇಗೆ ಬದುಕಬೇಕೆಂಬುದನ್ನು ಕಲಿಸಿಕೊಟ್ಟ ದಾರ್ಶನಿಕ. ನಿಸ್ವಾರ್ಥವಾಗಿ ಸಮಾಜ, ದೇಶವನ್ನು ಉದ್ಧಾರ ಮಾಡುವ ಮಾರ್ಗವನ್ನು ತೋರಿಸಿದ ಮಹಾತ್ಮ. ಬುದ್ಧನ ಜೀವನ ಮತ್ತು ಸಾಧನೆಗಳನ್ನು ಅವಲೋಕನ ಮಾಡಿದಾಗ ನಮ್ಮ ಬಾಳು ಹೇಗಿರಬೇಕು? ಹೇಗಿದ್ದರೆ ಅಂದ–ಚೆಂದವಾಗುವುದೆಂಬ ಅರಿವು ಮೂಡುವುದು.

೧೨ನೇ ಶತಮಾನದ ವಚನಕಾರರ ಕ್ರಾಂತಿಯು ಮನುಕುಲದ ಇತಿಹಾಸದಲ್ಲಿ ಸುವರ್ಣ ಅಕ್ಷರಗಳಿಂದ ಬರೆದಿಡುವಂತಹದ್ದು. ಸಾಮಾಜಿಕ ಅಸಮಾನತೆಯಿಂದ ಆರ್ಥಿಕತೆಯ ಅಭದ್ರತೆ, ರಾಜಕೀಯದ ರಾಕ್ಷಸ ನರ್ತನ, ಆಧ್ಯಾತ್ಮಿಕತೆಯಲ್ಲಿನ ಅದ್ವಾನಗಳು, ಧಾರ್ಮಿಕ ಕ್ಷೇತ್ರದಲ್ಲಿನ ದೌಲತ್ತು ಮತ್ತು ಶೋಷಣೆಗಳಿಗೆ ತಿಲಾಂಜಲಿಯನ್ನಿಡಬೇಕೆಂದು ಹೋರಾಡಿದವರು ಬಸವಣ್ಣ.

> "ಛಲಬೇಕು ಶರಣಂಗೆ ಪರಧನವನೊಲ್ಲೆನೆಂಬ
> ಛಲಬೇಕು ಶರಣಂಗೆ ಪರಸತಿಯನೊಲ್ಲೆನೆಂಬ
> ಛಲಬೇಕು ಶರಣಂಗೆ ಪರದೈವನೊಲ್ಲೆನೆಂಬ
> ಛಲಬೇಕು ಶರಣಂಗೆ ಲಿಂಗಜಂಗಮವನೊಂದೆನೆಂಬ
> ಛಲಬೇಕು ಶರಣಂಗೆ ಪ್ರಸಾದ ದಿಟವೆಂಬ
> ಛಲವಿಲ್ಲದವರ ಮೆಚ್ಚಕೂಡಲಸಂಗಮದೇವ"



ಎಂದು ಬಸವಣ್ಣನವರು ಹೇಳಿದಂತೆಯೇ ತನ್ನ ಸಾಮಿಪ್ಯ ಬಂದವರನ್ನೆಲ್ಲ ಸುರಸುಂದರ ಮೂರ್ತಿಯಾಗುವಂತೆ ರೂಪಿಸಿದ ಮಹಾಚೇತನ. ಬಸವಣ್ಣನವರು ಅಶುದ್ಧ, ಅಪ್ರಾಮಾಣಿಕ, ಅಜ್ಞಾನದ ಕೂಪ, ಅಂಧಶ್ರದ್ಧೆಗಳ ತಾಪದಿಂದ ತಲ್ಲಣಿಸುವವರಿಗೆ ಬದುಕುವ ದಾರಿದೀಪ ತೋರಿಸಿದ ಜಗಜ್ಜ್ಯೋತಿ. ಸಹಸ್ರ ಸಹಸ್ರ ಪ್ರೀತಿ–ನೀತಿ–ಶಾಂತಿ ಜ್ಯೋತಿಗಳನ್ನು ಹೊತ್ತಿಸಿ, ಬೆಳಗುವಂತೆ ಮಾಡಿದ ಬಸವಣ್ಣನವರ ಬದುಕನ್ನು ಅನುಕರಿಸಬೇಕು.

ಪುರಂದರದಾಸರು ವ್ಯಷ್ಠಿ–ಸಮಷ್ಠಿಯ ಉದ್ಧಾರಕ್ಕಾಗಿ ತಮ್ಮ ಜೀವನ ಸವೆಸಿದ ಮಹಾದಾರ್ಶನಿಕ. ಅವರ ಕರ್ತವ್ಯವನ್ನು ಅರಿತು ಆಚರಿಸುವುದು ಅತಿ ಅಗತ್ಯ. ಹಾಗೆಯೇ "ಕುಲ ಕುಲವೆಂದು ಹೊಡೆದಾಡದಿರಿ ನಿಮ್ಮ ಕುಲದ ನೆಲೆಯೇನಾದರೂ ಬಲ್ಲಿರಾ?" ಎಂದು ಕುಲದ ಕಟು ಸತ್ಯವನ್ನು ಸಾರಿದ ಕನಕದಾಸರು ಸಮಷ್ಠಿಯ ಸಾಮರಸ್ಯಕ್ಕಾಗಿ ಹೋರಾಡಿದ ಅವರು ಮಹಾಚೇತನ. ಮನುಕುಲದ ಒಳಿತಿಗಾಗಿ ತಂಬೂರಿ ಹಿಡಿದು ಭಕ್ತಿ, ಜ್ಞಾನ, ವೈರಾಗ್ಯ, ಸಮಾನತೆ, ಸ್ವಾತಂತ್ರ್ಯ, ಭ್ರಾತೃತ್ವ ಮತ್ತು ಶೀಲದ ಬಗ್ಗೆ ಉಪದೇಶವನ್ನು ಧಾರೆಯೆರೆದು ಅಂತೆಯೇ ಬದುಕಿದವರು.

> 'ಸರ್ವಜ್ಞನೆಂಬುವನು ಗರ್ವದಿಂದಾದವನೆ
> ಸರ್ವರೊಳು ಒಂದೊಂದು ನುಡಿಗಲಿತು
> ವಿದ್ಯೆಯ ಪರ್ವತವೆ ಆದ ಸರ್ವಜ್ಞ"

ಎಂದು ಹೇಳಿ ಕೊಳ್ಳುವುದರೊಂದಿಗೆ ಜನತೆಯೊಂದಿಗೆ ಬೆರೆತು ಜನತೆಯ ಜಾಡ್ಯಗಳಿಗೆಲ್ಲ ಪರಿಹಾರ ತೋರಿಸಿದ ವಿಶ್ವಮಾನ್ಯ ಸರ್ವಜ್ಞನ ಜೀವನ ಪರಮಪಾವನ.

ಅಂತೆಯೇ 'ಶ್ರೀಗುರು ವಚನೋಪದೇಶವನಾಲಿಸಿ ದಾಗಳುಹುದು ನರರಿಗೆ ಮುಕುತಿ'ಎಂದ ನಿಜಗುಣ ಶಿವಯೋಗಿಗಳು 'ನಾನಾರು?' ಎಂಬುದನ್ನು ಮನವರಿಕೆ ಮಾಡಿ ಬೆಳಗಿದ ಚೇತನ. 'ನೀ ಮಾಡೋದು ಘಳಿಗಿ ಸಂತಿ। ಮೇಲು ಮಾಳಗಿ ಕಟ್ಟಿ ಬೇಕಂತಿ। ಆನೆ ಅಂಬಾರಿ ಏರ ಬೇಕಂತಿ। ಮಣ್ಣಲಿ ಇಳಿಯಾದ ತಣ್ಣಗ ಮರತಿ। ಬದುಕ ಬಾಳೆವು ನಂದೇ ಅಂತೀ। ನಿಧಿ ಸೇರಿದಷ್ಟು ಸಾಲದು ಅಂತಿ। ಕದವ ತೆರೆದು ಕಡೆ ಯಾತ್ರೆಗೆ ನಡೆವಾಗ ಒದಗದು ಯಾವುದು ಸುಮ್ಮನೆ ಅಳತಿ।'–ಎಂಬ ಜೀವನಮರ್ಮವನ್ನು ಬೋಧಿಸಿದಂತೆಯೇ ನಿಶ್ಚಿಂತೆಯಿಂದ ನಿರ್ಲಿಪ್ತವಾಗಿ, ನಿರ್ಮಲವಾಗಿ ಗುರು ಗೋವಿಂದಭಟ್ಟರು ತೋರಿದ ದಾರಿಯಲ್ಲಿಯೇ ಬಾಳಿ ಬೆಳಗಿದ ಮಹಾಚೇತನ ಶಿಶುನಾಳ ಶರೀಫರು. ಅವರ ದಿವ್ಯ ಬದುಕು, ಭವ್ಯ ವ್ಯಕ್ತಿತ್ವ ಅಜರಾಮರ.

ಸರ್ವೋದಯಕ್ಕಾಗಿ ಹಗಲಿರುಳು ಶ್ರಮಿಸಿ ಪರತಂತ್ರ ಬದುಕಿನಿಂದ ಮುಕ್ತಗೊಳಿಸಿದ ಮಹಾತ್ಮ ಗಾಂಧೀಜಿ, ಸರ್ವಸಮಾನತೆಗಾಗಿ ಹೋರಾಡಿ, ಬಾಯಿ ಇಲ್ಲದವರಿಗೆ ಬಾಯಿಕೊಟ್ಟು, ಶೋಷಿತರ ಬದುಕಿನ ಹೊಂಗಿರಣವಾದ ಸಮಾನತೆಯ ಶಿಲ್ಪಿ ಅಂಬೇಡ್ಕರ್‌ರವರ ಬದುಕೇ ಒಂದು ದರ್ಶನ.

"ಏನು ಪ್ರಪಂಚವಿದು ಏನುಧಾಳದಾಳಿ।
ಏನದ್ಭುತ ಅಪಾರ ಶಕ್ತಿ ನಿರ್ಘಾತ।
ಮಾನವನ ಗುರಿಯೇನು? ಬೆಲೆಯೇನು
ಮುಗಿವೇನು? ಏನರ್ಥವಿದಕೆಲ್ಲ!'

ಎನ್ನುವ ಡಿ.ವಿ.ಗುಂಡಪ್ಪನವರು ಸಮಷ್ಟಿಯ ಉನ್ನತಿಗಾಗಿ ಲೇಖನಿ ಮೂಲಕ ಹೋರಾಡಿದ ಸಾತ್ವಿಕ ಕವಿಮಹಾಶಯರು.

'ಕಾಲಿಲ್ಲದ ಅಶ್ವಗೂನಾದರೇನು?
ನಾನಿಲ್ಲದ ಈ ವಿಶ್ವ ಏನಾದರೇನು?'

ಎಂದು ಹೇಳುವ ಮೂಲಕ ಈ ಜಗಕ್ಕೆ ಬಂದು ಸುಮ್ಮನೆ ಹೋಗುವುದಲ್ಲ ನಮ್ಮದೇ ಆದ ಕಾಣ್ಕೆಗಳನ್ನು ಸಲ್ಲಿಸಿ, ಸಾರ್ಥಕವಾಗಿ ಬದುಕಬೇಕೆಂಬ ದಿವ್ಯ ಸಂದೇಶ ನೀಡಿದಂತೆಯೇ ತನ್ನ ಬೆರಳುಗಳ ಮೂಲಕವೇ ಕೊರಳುಗಳನ್ನು ಕಳೆದುಕೊಳ್ಳುತ್ತಿದ್ದವರನ್ನು ಎಚ್ಚರಿಸಿ ಉದಾತ್ತವಾಗಿ ಬಾಳುವಂತೆ ಪ್ರೇರೇಪಿಸಿದ ರಾಷ್ಟ್ರಕವಿ ಕುವೆಂಪು ಮೊದಲಾದ ಮಹಾತ್ಮರ ಜೀವನ ಮತ್ತು ಸಾಧನೆಯನ್ನು ಅರಿತು ಆಚರಿಸಬೇಕು. ನಮ್ಮ ಕಣ್ಮುಂದೆಯೇ ಇದ್ದು ಸದ್ದುಗದ್ದಲವಿಲ್ಲದಂತೆಯೇ ಸರ್ವರ ಹಿತಕ್ಕಾಗಿ ತನ್ನ ತನುಮನವನ್ನು ಅರ್ಪಿಸಿಕೊಂಡು ಬಾಳುತ್ತಿರುವ ಸಾಲುಮರದ ತಿಮ್ಮಕ್ಕನವರನ್ನು ನೋಡಿ ಕಲಿಯಬೇಕು.

"ಒಳಗಣ್ಣು ತೆರೆಯಬೇಕಾದರೆ ಹೊರಗಣ್ಣು ಮುಚ್ಚಬೇಕು. ಹೊರಗಣ್ಣು ಮುಚ್ಚಿ ಒಳಗಣ್ಣು ತೆರೆಯಬೇಕು. ಒಳಮರ್ಮ ಅರಿಯಬೇಕು ಒಳಗಿಂದ ಒಳಗೆ ಇಳಿಯಬೇಕು. ಇದುವರೆಗೂ ಬಂದ ದಾರಿಯನ್ನು ಅಳೆಯಬೇಕು. ಮನದ ಚಂಚಲತೆಯನ್ನು ಕಳೆಯಬೇಕು. ಒಳಗಣ್ಣು ತೋರಿಸುವ ದಾರಿಯಲ್ಲಿ ಕಸಕಡ್ಡಿ ಹೋಗಿ ತಿಳಿಗಣ್ಣು ಆಗಬೇಕು. ಕತ್ತಲು ಕಳೆದು ಬೆಳಕು ಉಳಿದು ಹೊಳೆಗಣ್ಣು ಆಗಬೇಕು. ಹೃದಯ ಕಮಲದಿ ಮಧ್ಯ ಇರುವ ಬಗೆಗಣ್ಣು ಗೋಚರಿಸಬೇಕು. ಬಗೆಗಣ್ಣಿನೊಳಗೆ ಇರುವ ಭಗವಂತ ಕಾಣಿಸಬೇಕು. ಅದಕ್ಕೆ ಗುರುವಿನ ಅನುಗ್ರಹವಾಗಬೇಕು. ಗುರು ತೋರಿದ ದಾರಿಯಲ್ಲಿ ಒಳಗೆ ಇಳಿಯಬೇಕು. ದುಷ್ಕರ್ಮ ಕಳೆಯಬೇಕು. ಮನದ ಕೊಳೆ ತೊಳೆಯಬೇಕು. ಸಾತ್ವಿಕ ಬೆಳೆ ಬೆಳೆಯಬೇಕು. ಚಂಚಲ ಇಂದ್ರಿಯಗಳನ್ನು ಸೆಳೆಯಬೇಕು. ಒಳಗೆ ಇಳಿಯುತ್ತಲೇ ಭಗವಂತನ ದರ್ಶನಕ್ಕಾಗಿ ಕಾತರಿಸಬೇಕು... ಸತ್ಸಂಗ ಇರಬೇಕು ಸಜ್ಜನರ ಸಂಗದಲ್ಲಿ ಇರಿಸೆನ್ನರಂಗ ಎಂದು ಮೊರೆಯಿಡಬೇಕು.... ಈ ದೇಹ ಇರುವಾಗ ಈ ಜನ್ಮ ಇರುವಾಗ ಕಾಣಬೇಕು ಅವನನ್ನು, ಕಾಣಲೇ ಬೇಕು ಅವನನ್ನು ಎಂಬ ದೃಢ ನಿಲುವಿರಬೇಕು. ಬದುಕಿದ್ದಕ್ಕೆ ಒಮ್ಮೆ ಅವನ ದರ್ಶನ ಮಾಡಿಬಿಡಬೇಕು. ಆಗ ಬದುಕು ಸಾರ್ಥಕವಾಗುತ್ತದೆ. ಜನ್ಮ ಧನ್ಯವಾಗುತ್ತದೆ. ಮಾನ್ಯವಾಗುತ್ತದೆ" ಎಂದು ಡಾ. ಅರಳು ಮಲ್ಲಿಗೆ ಪಾರ್ಥಸಾರಥಿಯವರು ಹೇಳುವಂತೆ ಜ್ಞಾನಮಾರ್ಗವಾಗಲಿ, ಭಕ್ತಿಮಾರ್ಗವಾಗಲಿ ಇಲ್ಲವೇ ಕರ್ಮಮಾರ್ಗವಾಗಲಿ, ಯಾವುದಾದರೊಂದರಲ್ಲಿ ತಲ್ಲೀನರಾಗಿ ಈ ಜನ್ಮವನ್ನು ಸಾರ್ಥಕಗೊಳಿಸಬೇಕು.



ಕರ್ಮಮಾರ್ಗದಲ್ಲಿ ಸಾಗಿ ಸಫಲತೆಯನ್ನು ಕಂಡ ತಿಮ್ಮಕ್ಕನವರಿಗೆ ಮರಗಳೇ ಮಹಾದೇವ. ಹೆಮ್ಮರಗಳಾಗಿ ಬೆಳೆದು ದೇವರ ದರ್ಶನವನ್ನು ತಿಮ್ಮಕ್ಕನವರಿಗೆ ನೀಡಿದ್ದಾವೆ. ಬರಿಹುಳು ಹುಪ್ಪಡಿಯಂತೆ ಬಾಳೊದಲ್ಲ. ಬಾಳಿದರೆ ಬೆಳಗಬೇಕು ಬೆಳಗುವಂತಾಗಲು ಅಹಂ ತೊರೆಯಬೇಕು. ತನಗರಿವಿಲ್ಲದಂತೆಯೇ ಸರ್ವರಿಗೆ ಹಿತೈಷಿಯಾಗಿ ಬಾಳುವಂತಗಾಲು ತಿಮ್ಮಕ್ಕನವರ ಜನಹಿತದೃಷ್ಟಿಯನ್ನು ಅನುಸರಿಸಬೇಕು. ತಿಮ್ಮಕ್ಕ ಅನಕ್ಷರಸ್ಥೆಯಾದರೂ ಅವರಿಗೆ ಅಗಾಧವಾದ ಜೀವನಾನುಭವವಿದೆ. ಸಾಕಷ್ಟು ಕಷ್ಟಕಾರ್ಪಣ್ಯಗಳನ್ನು ಅನುಭವಿಸಿದರು ಅದಕ್ಕೆ ಜಗ್ಗದೆ ಜಗಜ್ಯೋತಿಯಾದ ಮಹಾಮಾತೆ.

'ಡಿಂಬದೊಳಗೆ ಒಂದು ಪ್ರಾಣ
ಕಂಭಸೂತ್ರ ಬೊಂಬೆಯಂತೆ
ಎಂದಿಗಾದರೊಂದು ದಿನ ಸಾವು ತಪ್ಪದು ॥
ಹುಟ್ಟತೇನು ತರಲಿಲ್ಲ । ಸಾಯುತೇನು ಒಯ್ಯಲಿಲ್ಲ
ಸುಟ್ಟು ಸುಟ್ಟು ಸುಣ್ಣದರಳು ಆಗಿಹೋಯಿತೆ'

ಎಂಬ ಕವಿವಾಣಿಯಂತೆ ಹುಟ್ಟುವಾಗ ಏನು ತರದ, ಸಾಯುವಾಗ ಏನು ಒಯ್ಯದ ಈ ಪ್ರಾಣ ಎಷ್ಟೆಲ್ಲಾ ಆಸೆ ಆಕಾಂಕ್ಷೆಗಳಿಂದ ಅಲೆಯುತ್ತದೆ ಅಲ್ಲವೇ? ಸಮಾಜಜೀವಿಯಾದ ಮಾನವ ಸಮಾಜದಿಂದ ಏನೆಲ್ಲಾ ಪಡೆದಿರುವನು. ಸಮಾಜದ ಋಣವಿದೆ. ಅದನ್ನು ತೀರಿಸಿದರೆ ಜನ್ಮಸಾರ್ಥಕವಾಗುವುದು. ಯಾವುದೇ ರೂಪದಲ್ಲಿಯಾದರೂ ಏನೇ ಪಡೆದರು ತನಗೆ ಅಗತ್ಯವಿರುವಷ್ಟು ಮಾತ್ರ ಇಟ್ಟುಕೊಂಡು ಉಳಿದಿದ್ದನ್ನು ದಾನ ಮಾಡುವ ಸದ್ಗುಣವನ್ನು ಬೆಳೆಸಿಕೊಳ್ಳಬೇಕು. ದಾನ ಮಾಡದವರಲ್ಲಿ ಎಷ್ಟೇ ಸಂಪತ್ತು ಇದ್ದರೂ ಅದು ವ್ಯರ್ಥ ವಾಗುವುದಲ್ಲದೇ ಅವನ ಸರ್ವನಾಶಕ್ಕೆ ಮೂಲಧಾತುವಾಗುವುದು ಅದು. ಹಾಗಾಗಿ ದಾನ ಮಾಡಿ ಶಾಂತಿ ಪಡೆಯಬೇಕು ಭವದ ರೋಗಗಳನ್ನು ಗೆಲ್ಲಬೇಕು.

ಗೂನಜ್ಜಿ ದೇವರನ್ನು ಬೇಡಿದ್ಲಂತೆ ದೇವರು ಪ್ರತ್ಯಕ್ಷವಾಗಿ ಏನ್ ವರ ಬೇಕಜ್ಜಿ ಅಂತ ಕೇಳ್ತು. ಅದ್ಕೆ ಗೂನಜ್ಜಿ 'ಓ ದೇವರೆ ಪ್ರಪಂಚದಲ್ಲಿ ಇರುವವರಿಗೆಲ್ಲ ಗೂನು ಬರುವಂತೆ ಮಾಡು' ಎಂಬ ವರವನ್ನು ಬೇಡಿದ್ಲು. ಇಂದು ಬಹುತೇಕರು ಗೂನಜ್ಜಿ ತರದವರೇ ಇರೋದು. ಇಂತಹ ಸ್ವಾರ್ಥ ಹಾಗೂ ಭಯಾನಕವಾದ ಚಿಂತನೆಗಳನ್ನು ಮಾಡುತ್ತಾ, ಇಡೀ ವ್ಯವಸ್ಥೆಯನ್ನು ಭಯಾನಕ ವಾತಾವರಣದಲ್ಲಿರಿಸಿರುವವರ ನಡುವೆ ಸಾಲುಮರದ ತಿಮ್ಮಕ್ಕನಂತವರು ಸಮಾಜಹಿತ ಪ್ರಕೃತಿಯಹಿತಕ್ಕಾಗಿ ಬಾಳಿ ಬೆಳಗುತ್ತಿರುವರು.

ತಿಮ್ಮಕ್ಕನವರು ಗರ್ಭಿಣಿಯಾಗಲಿಲ್ಲ, ಹೆರಿಗೆಯಾಗಲಿಲ್ಲವಾದರೂ, ತನ್ನೂರಿನ ಹೆಣ್ಣು ಮಕ್ಕಳಿಗೆ ಅನುಕೂಲವಾಗಲೆಂದು ಹೆರಿಗೆ ಆಸ್ಪತ್ರೆ ಕಟ್ಟಿಸಿರೆಂದು ಸರ್ಕಾರಕ್ಕೆ ಮನವಿ ಸಲ್ಲಿಸಿದ್ದರ ಜೊತೆಗೆ ತನಗೆ ಬಂದ ಪ್ರಶಸ್ತಿಯೊಂದಿಗೆ ಅಲ್ಪಸ್ವಲ್ಪ ನೀಡಿದ ಹಣವನ್ನೆಲ್ಲ ಕೂಡಿಟ್ಟು ಒಂದು ಲಕ್ಷ ರೂಪಾಯಿಗಳನ್ನು ದಾನವಾಗಿ ನೀಡಿರುವುದು ಅವರ ದಾನದ ಗುಣಕ್ಕೆ, ಸ್ತ್ರೀಪರ ಕಾಳಜಿಗೆ ಸಾಕ್ಷಿಯಾಗಿದೆ.

ಹೆರಿಗೆಯಾಗುವುದೆಂದರೆ ಹೆಣ್ಣಿಗೆ ಜೀವ ಗಂಡಾಂತರವಿದ್ದಾಗೆ. ಆ ಸಂದರ್ಭದಲ್ಲಿನ ನೋವು ಯಾತನೆ ವರ್ಣಿಸಲು ಅಸದಳವಾದುದು. ಎಷ್ಟೋ ಮಂದಿ ಹೆಣ್ಮಕ್ಕಳು ಹೆರಿಗೆಯ ಸಂದರ್ಭದಲ್ಲಿ ಜೀವ ಕಳೆದುಕೊಂಡಿರುವರು. ‘ಹೆರಿಗೆ ನೋವಿನಿಂದ ತಲ್ಲಣಿಸುತ್ತಿದ್ದಾಗ ಬಸಕ್ಕನ್ನ ಸೂಲಗಿತ್ತಿ ಕಂಪಳ್ಳಮ್ಮ ಹೆರಿಗೆ ಮಾಡಿಸುವಾಗ ಕೂಸು ಹೊರಬಂದ ನಂತರ ಮಾಸ ಬೀಳಲಿಲ್ಲವೆಂದು ಕೈಯನ್ನು ಒಳಗಡೆ ಹಾಕಿ ಮಾಸವೆಂದೇ ಕರುಳನ್ನೇ ಕಿತ್ತು ಬಸಕ್ಕನ ಪ್ರಾಣ ಪಕ್ಷಿ ಹಾರಿಹೋಗುವಂತೆ ಮಾಡಿದ ಘಟನೆ’ ತವರೂರಿನ ಸಮೀಪದಲ್ಲಿನ ಊರೊಂದರಲ್ಲಿ ನಡೆದಿದ್ದನ್ನು ಬಾಲ್ಯದಲ್ಲಿದ್ದಾಗ ಕೇಳಿದ್ದ ತಿಮ್ಮಕ್ಕನಿಗೆ ತನ್ನೂರಿಗೆ ಹೆರಿಗೆ ಆಸ್ಪತ್ರೆ ಬೇಕೆಂಬ ಕಾಳಜಿಗೆ ಆ ಘಟನೆಯ ಪ್ರಭಾವ ಬಹುಮುಖ್ಯ ಕಾರಣವಾಗಿದೆ. ತಿಮ್ಮಕ್ಕನ ಆಸೆಯಂತೆ ಹುಲಿಕಲ್ಲಿನ ‘ಹೆರಿಗೆ ಆಸ್ಪತ್ರೆ’ ನಿರ್ಮಾಣ ಕಾರ್ಯ ಪ್ರಗತಿಯಲ್ಲಿದೆ.

ಮನೆಯು ಸೊಬಗಿನ ಸೊಡರಾಗಿ ಬೆಳಗಲು, ಮನೆಯು ಸುಖದೀಪ್ತಿಯಾಗಿರಲು, ಮನೆಯು ವೈಭವದಿಂದ ವೈಜಯಂತಿಯನ್ನಾಚರಿಸುವಂತಾಗಲು, ಮನೆಯು ನೀತಿಯ ಗಣಿಯಾಗಲು, ಮನೆಯು ಪ್ರೀತಿಯ ಕಡಲಾಗಲು ಆ ಮನೆಯ ಮಹಿಳೆಯ ನಡೆ–ನುಡಿಯನ್ನು ಅವಲಂಬಿಸಿದೆ. ಒಳ್ಳೆ ಮಗಳಾಗಿ, ಒಳ್ಳೆ ಹೆಂಡತಿಯಾಗಿ, ಒಳ್ಳೆ ಸೊಸೆಯಾಗಿ, ಒಳ್ಳೆ ತಾಯಿ, ಒಳ್ಳೆ ಅಜ್ಜಿಯಾಗಿ ಬಾಳುವುದು ಮಹಿಳೆಯ ಆದರ್ಶಜೀವನವಾಗಿದೆ. ಭಾರತೀಯ ಸಂಸ್ಕೃತಿಯನ್ನು ಪ್ರತಿನಿಧಿಸುವ ಪುರಾಣ, ಕಾವ್ಯಗಳಲ್ಲಿನ ಪಾರ್ವತಿ, ಸಾವಿತ್ರಿ, ಸೀತೆ, ದ್ರೌಪದಿ, ಮಂಡೋದರಿ, ಅರುಂಧತಿ ಮೊದಲಾದ ಮಹಾ ಮಹಿಳಾ ಮಣಿಯರ ತ್ಯಾಗಜೀವನ ಇಂದು ಮಹಿಳೆಯರು ಸರಿದಾರಿಯಲ್ಲಿ ಸಾಗುವಂತಾಗಲು ಪ್ರೇರಕಶಕ್ತಿಯಾಗಿದೆ. ಅಜ್ಜ–ಅಜ್ಜಿಯ ಪ್ರಾಮಾಣಿಕ ಬದುಕು, ಅಪ್ಪನ ಕಾಯಕ ನಿಷ್ಠೆ, ಅವ್ವನ ಕಾಳಜಿ ತಿಮ್ಮಕ್ಕನ ಬದುಕಿನ ಮೇಲೆ ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಪ್ರಭಾವ ಬೀರಿದೆ. ಹಾಗಾಯೇ ಅವರು ಅಲ್ಪದರಲ್ಲೆ ಆನಂದ ಕಾಣುವ ಮನೋಧರ್ಮವನ್ನು ಬೆಳೆಸಿಕೊಂಡಿರುವುದು.

ತಿಮ್ಮಕ್ಕನ ಉತ್ಸಾಹ, ನಿಸ್ವಾರ್ಥಸೇವಾ ಭಾವನೆ, ಗಂಡ–ಚಿಕ್ಕಯ್ಯನನ್ನು ಉತ್ತೇಜಿಸಿದ ರೀತಿ, ಗಂಡನಿಗೆ ಹೆಗಲೆಣೆಯಾಗಿ ದುಡಿದ ರೀತಿ ಮೆಚ್ಚುವಂತಹದ್ದು. ಚಿಕ್ಕಯ್ಯನಿಗೆ ಮಕ್ಕಳಿಲ್ಲವೆಂಬ ಒಂದು ಕೊರತೆಯನ್ನು ಬಿಟ್ಟರೆ ಉಳಿದಂತೆ ಹೆಂಡತಿಯ ನೀತಿಯುತ ನಡವಳಿಕೆ, ಸೌಜನ್ಯವಾದ ಮುತ್ತಿನಂಥ, ಮಾಣಿಕ್ಯದಂತಹ ಮಾತುಗಳು ಗಂಡನಿಗೆ ಕೊಡುತ್ತಿದ್ದ ಗೌರವ ಅಪೂರ್ವವಾದುದು. ಉಪಟಳವನ್ನು ನೀಡಿದ ಅತ್ತೆ–ಮಾವ, ಮೈದುನ ಮೊದಲಾದ ಸಂಬಂಧಿಕರನ್ನು ಪ್ರೀತಿಯಿಂದ ಕಾಣುತ್ತಿದ್ದ ತಿಮ್ಮಕ್ಕನವರು ಸೈ ಸೈ ಎನ್ನುವಂತೆ ಬಾಳಿದ, ಬಾಳುತ್ತಿರುವ ಸಹನಾಮೂರ್ತಿ.

“ಪ್ರಪಂಚದ ದುಃಖಕ್ಕೆಲ್ಲ ಕಾರಣ ದೌರ್ಬಲ್ಯ. ದೌರ್ಬಲ್ಯವೊಂದೆ ನಮ್ಮ ಸಂಕಟಕ್ಕೆಲ್ಲ ಕಾರಣ. ನಾವು ದುರ್ಬಲರಾಗಿರುವುದರಿಂದ ಸುಳ್ಳು ಹೇಳುತ್ತೇವೆ ಕದಿಯುತ್ತೇವೆ ಕೊಲ್ಲುತ್ತೇವೆ. ಮತ್ತು ಇನ್ನೂ ಅನೇಕ ಪಾತಕಗಳನ್ನು ಮಾಡುತ್ತೇವೆ” ಎನ್ನುವ ವೀರ ಸಂನ್ಯಾಸಿ ಸ್ವಾಮಿ ವಿವೇಕಾನಂದರ ನುಡಿಮುತ್ತಿನಂತೆ ದುಶ್ಚಟಗಳಿಗೆ ದಾಸರಾಗಿಸುವುದು ದೌರ್ಬಲ್ಯಗಳೇ. ಅಂತಹ ದೌರ್ಬಲ್ಯಗಳನ್ನು ವ್ಯಕ್ತಿಯ ಸುತ್ತಮುತ್ತ ಸುಳಿಯದಂತೆ ನೋಡಿಕೊಳ್ಳಲು ಉತ್ತಮ ಕೌಟುಂಬಿಕ



ಪರಿಸರ ಬೇಕು. ಪತಿಯೇ ಪರದೈವವೆಂದು ನಂಬಿ, ಅಂತೆಯೇ ಗಂಡ ಚಿಕ್ಕಯ್ಯನ ಜೊತೆಗೂಡಿ ಬಾಳುತ್ತಿದ್ದ ತಿಮ್ಮಕ್ಕ ತನ್ನ ಪತಿ ಯಾವುದೇ ದುಶ್ಚಟಗಳಿಗೆ ದಾಸನಾಗದಂತೆ ನೋಡಿಕೊಂಡ ಸಾಧ್ವಿಮಣಿ.

ಮಾನವನಾಗಿ ಹುಟ್ಟಿ ಬಂದ ಮೇಲೆ ಗಟ್ಟಿಯಾಗಿ ಬದುಕಬೇಕು. ಮಾಡುವ ಕಾಯಕದಲ್ಲಿ ನಿಷ್ಠೆ ನೀತಿಯಿರಬೇಕು. ‘ಇಲ್ಲಿ ಸಲ್ಲುವರು, ಅಲ್ಲಿಯೂ ಸಲ್ಲುವರಯ್ಯ’ ವಚನ ವಾಣಿಯಂತೆ ಈ ಇಹದ ಬದುಕು ಇಳೆಯು ಮೆಚ್ಚುವಂತಾಗಬೇಕು. ಅಂತಹ ಕಾಯಕದಲ್ಲಿ ತೊಡಗಿಕೊಂಡು ಯಶಸ್ವಿಯಾದ ಸಾಲುಮರದ ತಿಮ್ಮಕ್ಕ ಮಹಾಮಹಿಳಾ ಮಣಿ. ಬಾಲ್ಯ, ಯೌವನ ಅವಸ್ಥೆಯಲ್ಲಿ ಬಂದೊದಗಿದ ದುಃಖ ಅವಮಾನಗಳನ್ನು ಮರೆತು ಹೊಸ ಇತಿಹಾಸ ಬರೆದ ಮುಗ್ದೆ ತಿಮ್ಮಕ್ಕ ಲೋಕಸೇವೆಗಾಗಿ ಕರ್ಪೂರದಂತೆ ಉರಿದು, ಪರಿಮಳ ಬೀರಿದ ಪ್ರಕೃತಿ ಪ್ರೇಮಿ.

ಅಮ್ಮ, ಅತ್ತೆ ಮೈದುನ ನೆರೆಮನೆಯ ಹೊಟ್ಟೆಕಿಚ್ಚಿನ ಹೆಂಗಸರು ವಾಚಾಳಿಗಳಾಗಿ ಬೈದರು ಬೆಚ್ಚದೆ, ಬೆದರದೆ ಮೌನ ತಳೆದ ತಿಮ್ಮಕ್ಕ ಮೌನದಿಂದಲೇ ವಿಸ್ಮಯಕರವಾದ ಸಾಧನೆಯನ್ನು ಪತಿಗೂಡಿ ಸಾಧಿಸಿದ ಛಲಗಾರ್ತಿ. ಸಹಸ್ರಾರು ವರ್ಷಗಳಿಂದ ಬೆಳಕು ನೀಡುತ್ತಿರುವ ಸೂರ್ಯ ನಾನು ಬೆಳಕು ಕೊಡುತ್ತಿರುವೆನೆಂದು ಎಂದೂ ಡಂಗೂರ ಹೊಡೆಸಿಕೊಳ್ಳುತ್ತಿಲ್ಲ. ಇಳೆಯನ್ನು ಪಳ ಪಳನೆ ಹೊಳೆಯಿಸುವ ಮಳೆ ಎಂದೂ ಅಹಂಕಾರ ಮಾಡಿಲ್ಲ. ನದ–ನದಿಗಳ ಠೇಂಕಾರವಿಲ್ಲ. ಅಂತೆಯೇ ಚಿಕ್ಕಯ್ಯ–ತಿಮ್ಮಕ್ಕ ಸಾಲುಮರಗಳನ್ನು ನೆಟ್ಟಿದ್ದೇವೆ. ಬೆಳೆಸಿದ್ದೇವೆ, ನೆರಳಾಗಿಸಿದ್ದೆವೆಂದು ಎಂದೂ ಅಹಂಕಾರ ಪಟ್ಟವರಲ್ಲ. ಯಾರಾದರೂ ಅಭಿನಂದಿಸಿದರೆ ಆತ್ಮಪೂರ್ವಕವಾಗಿ ವಂದನೆ ಸಲ್ಲಿಸುತ್ತಾರೆ. ಅದರಲ್ಲಿ ಬೀಗುವಿಲ್ಲ. ‘ಬಾಗಿ ನಡೆದರೆ ಬಾಳುತ್ತೇವೆ. ಬೀಗಿ ನಡೆದರೆ ಬೀಳುತ್ತೇವೆ. ಎಂಬಂತೆ ‘ತಿಮ್ಮಕ್ಕ ಬಾಳೆಯ ಗೊನೆಯಂತೆ ಬಾಗಿ ಬಾಳಿದವರು, ಬಾಳುತ್ತಿರುವರು. ತೆಂಗಿನ ಮರ ಒಂದೊಂದು ಮಟ್ಟೆ ಕಳಚಿಕೊಂಡಂತೆ ಮೇಲಕ್ಕೆ ಬೆಳೆಯುತ್ತಾ ಹೋಗುತ್ತದೆ. ಆ ಮಟ್ಟೆಯ ಗುರುತುಗಳೇ ಆ ಮರದ ಬೆಳವಣಿಗೆಗೆ ಸಾಕ್ಷಿಯಾಗಿವೆ. ಕಾಮಧೇನು ಕಲ್ಪವೃಕ್ಷವಾದ ತೆಂಗಿನ ಮರದಂತೆಯೇ ತಿಮ್ಮಕ್ಕನವರು ನಿಸರ್ಗಸಿರಿಯ ಸಂವರ್ಧನೆಗಾಗಿ, ಸರ್ವೋದಯ ಸಮಾಜದ ನಿರ್ಮಾಣಕ್ಕಾಗಿ ತಮ್ಮ ಅಮೂಲ್ಯವಾದ ಬದುಕನ್ನು ಸಮರ್ಪಿಸಿಕೊಂಡಿರುವ ಸೇವಾರತ್ನ.

ಗೆಡ್ಡೆ–ಗೆಣಸು ಹಣ್ಣು ಹಂಪಲು ತಿಂದು ಕೊಂಡು, ತೊಗಟೆಯನ್ನು ಸುತ್ತಿಕೊಂಡು, ಪೊಟರೆಯಲ್ಲಿ ಅವಿತುಕೊಂಡು ಬಾಳಿದ ಆದಿಮಾನವನ ಆಸರೆ ಮರಗಳು. ಅವುಗಳೇ ಮಾನವನನ್ನು ಸಕಲ ಜೀವಸಂಕುಲಕ್ಕೆ ಕಿರೀಟ ಪ್ರಾಯವಾಗಿಸಿದವಷ್ಟೇ ಅಲ್ಲ, ಆತನ ಸಕಲ ಸಾಧನೆಗೆ ಸಾಮಾಗ್ರಿಯಾಗಿ ಮಹಾದೆತ್ತರಕ್ಕೆ ಬೆಳೆಸಿದವು. ಅಂತಹ ಮರಗಳನ್ನು ಬೆಳೆಸಿದ ಮಹಾಮಾತೆ ಸಾಲುಮರದ ತಿಮ್ಮಕ್ಕನ ಜೀವನ ಒಂದು ಸೌಭಾಗ್ಯ. ಜನತೆಗೊಂಡು ಪಾಠವಾಗಿದೆ. ಆ ಸೌಭಾಗ್ಯವನ್ನು ಸದುಪಯೋಗಪಡಿಸಿಕೊಳ್ಳುವ, ಆ ಪಾಠವನ್ನು ಕಲಿತು ಉತ್ತಮ ವ್ಯಕ್ತಿಗಳಾಗುವ ಜಾಣರಾಗಬೇಕು.

೧

## ೧೦. ಅಂದು ಗುಡಿಸಲು; ಇಂದು ಗುಡಿ

**ವೃ**ಕ್ಷಮಾತೆ ಸಾಲುಮರದ ತಿಮ್ಮಕ್ಕನವರು ಇಂದಿಗೆ ೭೮ ವರ್ಷಗಳನ್ನು ಪೂರೈಸಿ ೭೯ನೇ ವರ್ಷದಲ್ಲಿರುವ ವಯೋವೃದ್ಧೆ. ‘ನಾನು ಶಾಶ್ವತವಲ್ಲ; ನಾ ಮಾಡಿದ ಸೇವೆ ಶಾಶ್ವತ’ ಎಂಬಂತೆ ಶಾಶ್ವತವಾದ ಸೇವೆಯನ್ನು ಮಾಡಿದ ಸೇವಾರತ್ನ ತಿಮ್ಮಕ್ಕ ಇಂದು ಅಚ್ಚುಕಟ್ಟಾದ ಕಾಂಪೌಂಡಿನೊಳಗೆ ಆರ್.ಸಿ.ಸಿ. ಮನೆಯಲ್ಲಿ ವಾಸವಾಗಿದ್ದಾರೆ. ಇಂತಹ ಮನೆಯನ್ನು ಕಟ್ಟಿ ಶಾಂತವಾಗಿ ಬಾಳೆಂದು ಹಾರೈಸಿದವರು ಆಕೆಯ ೨೮೪ ಮರಗಳೆಂಬ ಮಕ್ಕಳು. ಅಂತರ್‌ರಾಷ್ಟ್ರೀಯ ಮತ್ತು ರಾಷ್ಟ್ರೀಯ ಮಟ್ಟದಲ್ಲಿ ‘ಸಾಲುಮರದ ತಿಮ್ಮಕ್ಕ’ ಎಂದೇ ಪ್ರಸಿದ್ಧರಾಗಿರುವರು. ಹುಲಿಕಲ್ಲು ಜಗತ್ತಿನ ಭೂಪಟದಲ್ಲಿ ಗುರುತಿಸುವಂತಾಗಲು ತಿಮ್ಮಕ್ಕನವರೇ ಕಾರಣವೆಂಬ ಅಭಿಮಾನ, ಗೌರವ ಆ ಊರಿನ ಜನತೆಯ ಹೃನ್ಮನ ಮಂದಿರದಲ್ಲಿದೆ. ಹುಲಿಕಲ್ಲು ಮಾಗಡಿ ತಾಲ್ಲೂಕು ಪಂಚಾಯ್ತಿಯ ಕ್ಷೇತ್ರವಾಗಿದೆ. ಆ ಕ್ಷೇತ್ರದ ತಾಲ್ಲೂಕು ಪಂಚಾಯಿತಿ ಸದಸ್ಯರು, ಜಿಲ್ಲಾ ಪಂಚಾಯಿತಿ ಸದಸ್ಯರು, ಸಚಿವರಾಗಿದ್ದ ಎಚ್.ಎಂ. ರೇವಣ್ಣ ಆಗಿನ ಗ್ರಾಮಪಂಚಾಯಿತಿ ಸದಸ್ಯರೆಲ್ಲರು ಸೇರಿ ಕುದೂರು ಹುಲಿಕಲ್ಲು ರಸ್ತೆಯಲ್ಲಿ ತಿಮ್ಮಕ್ಕನಿಗೆ ಮನೆ ನಿರ್ಮಿಸಬೇಕು. ತಿಮ್ಮಕ್ಕನ ನಂತರ ಆ ಮನೆಯನ್ನು ಸ್ಮಾರಕವಾಗಿಸಬೇಕೆಂದು ತೀರ್ಮಾನಿಸಿ, ಮಂತ್ರಿ ಮಹೋದಯರೆಲ್ಲ ಸೇರಿ ಅದ್ದೂರಿಯಾಗಿ ಶಂಕುಸ್ಥಾಪನೆ ಮಾಡಿದರು. ನಂತರ ಮನೆಯನ್ನು ಕಟ್ಟಿದರು. ತಿಮ್ಮಕ್ಕನವರು ನೋಡಲೆಂದೆ ಟಿ.ವಿಯನ್ನು ಕೊಟ್ಟಿದ್ದಾರೆ. ಗುಡಿಸಲಲ್ಲಿ ಇದ್ದ ತಿಮ್ಮಕ್ಕನವರು ಇಂದು ಆರ್.ಸಿ.ಸಿ. ಮನೆಯಲ್ಲಿ ಇದ್ದಾರೆ. ತಿಮ್ಮಕ್ಕನವರ ಮನೆ ಅಂದು ಗುಡಿಸಲಾಗಿತ್ತು; ಸಾಧನೆಯ ಹಾದಿಯಲ್ಲಿ ಯಶಸ್ವಿಯಾದ್ದರಿಂದ ಇಂದು ಗುಡಿಯಾಗಿದೆ. ಸರ್ವರು ಬಂದು ಸಂತೃಪ್ತಿಯನ್ನು ಪಡೆಯಲು ಸರಿದಾರಿ ತೋರಿಸುವ ಗುಡಿಯಾಗಿದೆ.

೭೯ ವರ್ಷದಲ್ಲೀಗ ನಡೆಯುತ್ತಿದ್ದರೂ ತುಂಬಾ ಗಟ್ಟಿಯಾಗಿಯೇ ಇರುವ ತಿಮ್ಮಕ್ಕನವರಿಗೆ ಕಿವಿ ಚೆನ್ನಾಗಿ ಕೇಳಿಸುತ್ತದೆ. ಒಂದೇ ಕಣ್ಣಿನ ದೃಷ್ಟಿಯಿದ್ದರೂ ಕಣ್ಣು ಚೆನ್ನಾಗಿ ಕಾಣುತ್ತಿದೆ. ಒಂದಿಷ್ಟು ಸಕ್ಕರೆ ಕಾಯಿಲೆಯಿದೆ ಅಂತ ಸ್ವಲ್ಪ ಕೊರಗು ಇದೆ. ಅಜ್ಜಿಯನ್ನು ಪಾಲನೆ ಮಾಡುವಂತವರು ಇಲ್ಲದಿರುವುದೊಂದು ಬಹುದೊಡ್ಡ ಕೊರತೆಯಾಗಿದೆ. ಸಂಬಂಧಿಕರು ಈ ಹಿಂದೆ ಮಾಡಿದ ಅವಮಾನ, ಅಗೌರವ, ಮೋಸಗಳನ್ನು ಆಗಾಗ್ಗೆ ನೆನಪು ಮಾಡಿಕೊಳ್ಳುತ್ತಾ ಅವರು ನನ್ನ ಸಾಕಲ್ಲ ಅನ್ನುವಂತಹ ಅಚಲ ನಂಬಿಕೆ ಮನೆ ಮಾಡಿದೆ. ಏಕೆಂದರೆ ಸ್ವಂತ ತನ್ನ ತಂಗಿ ಮಗನ ಮತ್ತು ಆತನ ಹೆಂಡತಿ ಮಕ್ಕಳ್ನ ಮನೆಯಲ್ಲಿ ಆಸರೆಗಾಗಿ ಕರೆದುಕೊಂಡು



ಬಂದ್ರು. ಅವರ ನಡವಳಿಕೆಯು ಅಜ್ಜಿಗೆ ನೋವನ್ನುಂಟು ಮಾಡಿದೆ. ಹಾಗಾಗಿ ಅಜ್ಜಿಯು ಅಕ್ಕ–ಪಕ್ಕದ ಮನೆಯವರೇ ನನ್ನ ಆಶ್ರಯದಾತರೆಂದು ನಂಬಿಕೊಂಡಿದೆ. ಅವರು ಅಜ್ಜಿಯೊಡನೆ ತುಂಬಾ ಅನ್ಯೋನ್ಯವಾಗಿ ಬೆರೆತು, ಅಜ್ಜಿಗೆ ಊಟಕ್ಕೆ ಕೊಡುತ್ತಾ ಪೋಷಿಸುತ್ತಿರುವುದು ಸಂತಸದ ಸಂಗತಿಯಾಗಿದೆ.

‘ಸಾಲುಮರದ ತಿಮ್ಮಕ್ಕ ಟ್ರಸ್ಟ್’ನ್ನು ಸ್ಥಾಪಿಸಿದ್ದಾರೆ. ಅದು ಕಾರ್ಯಶೀಲವಾಗಿದೆ. ಅಜ್ಜಿಯನ್ನು ಈಗಲೂ ಸಾಕಷ್ಟು ಸಂಘ–ಸಂಸ್ಥೆಗಳು ಕರೆದುಕೊಂಡು ಹೋಗಿ ಸನ್ಮಾನಿಸುತ್ತಿವೆ. ಅಜ್ಜಿಯ ಕೈಯಿಂದ ಸಸಿ ನೆಡಿಸಿ, ಸಸ್ಯ ನೆಟ್ಟು ಪೋಷಿಸುತ್ತೇವೆಂದು ಪ್ರತಿಜ್ಞೆ ಮಾಡಿದಂತೆ ಸಸ್ಯ ಸಂವರ್ಧನೆ ಮಾಡುತ್ತಿದ್ದಾರೆ. ಅಜ್ಜಿಯು ಸಮಾರಂಭಕ್ಕೆ ಹೋದಲ್ಲಿ ಗಿಡ ನೆಡಿ, ಪೋಷಿಸಿ ನಿಮ್ಮ ಜೀವನ ಒಳ್ಳೆಯದು ಆಗುತ್ತೆಂದು ಸಂದೇಶ ನೀಡುತ್ತಾರೆ. ಅಜ್ಜಿಯು ತುಂಬಾ ಚೆನ್ನಾಗಿಯೆ ವಾಸ್ತವದ ನೆಲೆಯಲ್ಲಿ ಮಾತಾನಾಡುತ್ತೆ. ಹೆಣ್ಣು ಮಕ್ಕಳು ತಮ್ಮ ಗಂಡನ್ನ ಚೆನ್ನಾಗಿ ನೋಡಕೊ ಬೇಕು, ತಮ್ಮ ಕೈಲಾದಷ್ಟು ಸಾರ್ವಜನಿಕ ಸೇವೆ ಮಾಡಬೇಕು ಎನ್ನುವ ತಿಮ್ಮಕ್ಕನವರು ಹುಡುಗ–ಹುಡುಗಿಯರು ಒಳ್ಳೆ ನಡೆತೆಯುಳ್ಳವರಾಗಿ ಬಾಳಲಿ. ಗಿಡಗಳನ್ನು ನೆಟ್ಟು, ಮರಗಳಂತೆ ಪರೋಪಕಾರಿಗಳಾಗಲೆಂದು ಹಾರೈಸುವರು.

ಮನೆಗೆ ಇರುವ ಕಾಂಪೌಂಡಿನೊಳಗೆ ಬಾಳೆ ಗಿಡಗಳನ್ನು ಹೂವಿನ ಗಿಡಗಳನ್ನು ಜೊತೆಗೆ ಒಂದು ಆಲದ ಮರವನ್ನು ಬೆಳೆಸಿದೆ. ಅವುಗಳಿಗೆ ಈಗಲೂ ನೀರು ಹಾಕುತ್ತಾ, ಪಾತಿ ಮಾಡುತ್ತಾ, ಪೋಷಣೆ ಮಾಡುತ್ತಿದೆ. ಕಂಚಿನಕಂಠ, ಗಟ್ಟಿದೇಹ, ನಾಲ್ಕು ಅಡಿ ಎತ್ತರವಿದ್ದರು ತನ್ನ ಕಾರ್ಯಸಾಧನೆಯಿಂದ ಬಹು ಎತ್ತರಕ್ಕೆ ಬೆಳೆದಿರುವ ಸಾಲುಮರದ ತಿಮ್ಮಕ್ಕನವರು ಜಗತ್ತಿನ ಇತಿಹಾಸದಲ್ಲಿಯೇ ಚಿರಾಯು.

ರಾಜ–ರಾಣಿಯರು, ಮಂತ್ರಿ–ಮಹೋದಯರು ಒಂದಿಲ್ಲೊಂದು ಅಧಿಕಾರದ ಆಸೆಗೂ, ಹಣ ಕೀರ್ತಿಯ ಆಸೆಗಾಗಿಯೇ ಘನಕಾರ್ಯ ಮಾಡಿರುವುದನ್ನು ಇತಿಹಾಸದಲ್ಲಿ ಓದಿದ್ದೆವೆ. ಅವಿದ್ಯಾವಂತೆ, ಮುಗ್ದೆ, ಹಣ ಕೀರ್ತಿಯ ಬಗ್ಗೆ ತಿಳುವಳಿಕೆ ಇಲ್ಲದ ತಿಮ್ಮಕ್ಕನವರು ಸಾರ್ವಜನಿಕ ರಸ್ತೆಯಲ್ಲಿ ತಾನೇ ತನ್ನ ಪತ್ನಿಯ ಜೊತೆಗೂಡಿ ಆಲದ ಕೊಂಬೆಗಳನ್ನು ನೆಟ್ಟು, ಪೋಷಿಸಿ, ಬೆಳೆಸಿರುವುದು ಜಗತ್ತಿಗೆ ಮಾದರಿಯಾಗಿದೆ.

ಕ್ರಿಸ್ತಪೂರ್ವದಲ್ಲಿ ಸಾಮ್ರಾಟ ಅಶೋಕ ಸಾಲುಮರಗಳನ್ನು ನಡೆಸಿದ್ದನೆಂಬುದನ್ನು ಇತಿಹಾಸದಲ್ಲಿ ಓದುತ್ತಿದ್ದೇವೆ. ಒಬ್ಬ ಮಹಾರಾಜ ತನ್ನ ಅಧಿಕಾರ ಬಲದಿಂದ ಪ್ರಜೆಗಳ ಸಹಕಾರ ಪಡೆದು ಸಾಲುಮರಗಳನ್ನು ನೆಡೆಸಿದರೆ, ಯಾವ ಅಧಿಕಾರದ ಬಲವಿಲ್ಲದೆ ‘ತನ್ನ ಬಲವೇ ಬಲ, ಬಾವಿ ಜಲವೇ ಜಲ’ ಎಂಬಂತೆ ತನ್ನ ಪತಿಯ ತೋಳ್ಬಲವನ್ನು ಆಶ್ರಯಿಸಿ ಸಾರ್ವಜನಿಕ ರಸ್ತೆಯಲ್ಲಿ ಸಾಲುಮರಗಳನ್ನು ನೆಟ್ಟಿರುವುದು ತಿಮ್ಮಕ್ಕನವರ ಅಪೂರ್ವ ಸಾಧನೆಗೆ ಹಿಡಿದ ಕನ್ನಡಿಯಾಗಿದೆ. ಅಂತೆಯೇ ಜನತೆಯು ಗೌರವ–ಅಭಿಮಾನ ಸಲ್ಲಿಸಿರುವುದು ತಿಮ್ಮಕ್ಕನವರ ಸಾಧನೆಗೆ ಸಂದ ಗೌರವವಾಗಿದೆ. ಇಂದಿನ ಯುವಜನತೆ ತಿಮ್ಮಕ್ಕ–ಚಿಕ್ಕಯ್ಯನವರಂತಹ ವ್ಯಕ್ತಿತ್ವ ರೂಪಿಸಿಕೊಂಡಾಗಲೇ ಅವರ ಬದುಕು ಸಾರ್ಥಕವಾಗುವುದು.

ತಮ್ಮ ತಮ್ಮ ಹೊಲಗಳಲ್ಲಿ, ಮನೆಗಳ ಮುಂದೆಯಾದರೂ ಗಿಡಮರಗಳನ್ನು ಬೆಳೆಸಿ ಕಣ್ಣಿಗೆ ಕಾಣದಂತೆ ಕರಗುತ್ತಿರುವ ಪ್ರಕೃತಿಯನ್ನು ರಕ್ಷಿಸುವ ಮೂಲಕ, ಮುಂದಿನ ಜನಾಂಗವನ್ನು ಭಯಂಕರ ಬದುಕಿನಿಂದ ಮುಕ್ತಗೊಳಿಸಬೇಕಾಗಿದೆ.

ಇಂದಿನ ಪೀಳಿಗೆಯ ಮೊದಲ ಕರ್ತವ್ಯ ಪ್ರಕೃತಿ ಸಂರಕ್ಷಣೆ. ಪರಿಸರ ಮಾಲಿನ್ಯ ನಿವಾರಣೆಯಾಗಬೇಕು. ಇಲ್ಲವಾದರೆ ಮುಂದಿನ ಜನಾಂಗಕ್ಕೆ ಉಳಿಗಾಲವೇ ಇಲ್ಲ, ಹಾಗಾಗಿ ಗಿಡಮರಗಳನ್ನು ಬೆಳೆಸಿ ಮುಂದಿನ ಪೀಳಿಗೆಗೆ ಮಹಾತ್ಮರಾಗಬೇಕು. ಅನುಕೂಲಕ್ಕೆ ತಕ್ಕಂತೆ ಪರಿಸರವನ್ನು ಬದಲಿಸಿಕೊಳ್ಳುವ ಸಾಮರ್ಥ್ಯ ಪಡೆದಿರುವ ಮಾನವ ಉಪಯೋಗಕ್ಕಿಂತ ಹೆಚ್ಚು ಅಪಾಯವನ್ನು ಸ್ವಾರ್ಥ ಕೃತ್ಯದಿಂದ ಪಡೆಯುತ್ತಿದ್ದಾನೆ. ಈತನ ದುರಾಸೆಯಿಂದ ಅರಣ್ಯಗಳು ಕಣ್ಮರೆಯಾಗುತ್ತಿವೆ. ನೀರಿನ ತಾಣಗಳು ಕಲುಷಿತಗೊಳ್ಳುತ್ತಿವೆ. ವಾಯುಮಂಡಲ ವಿಷಮಯವಾಗುತ್ತದೆ. ತತ್ಪರಿಣಾಮವಾಗಿ ಸಹಸ್ರ ಸಹಸ್ರ ಸಮಸ್ಯೆಗಳಿಂದ ತಲ್ಲಣಗೊಳ್ಳುತ್ತಿದ್ದಾನೆ. ಈ ಪಾಪ–ತಲ್ಲಣಗಳಿಗೆ ತತ್ವಜ್ಞಾನಿ ಫ್ರಾನ್ಸಿಸ್ ಬೇಕನ್ ಹೇಳುವಂತೆ 'ಪ್ರಕೃತಿಯನ್ನು ಗೆಲ್ಲಬೇಕು ಅದಕ್ಕೆ ಇರುವ ಒಂದೇ ಒಂದು ಮಾರ್ಗವೆಂದರೆ ಪ್ರಕೃತಿಯ ನಿಯಮಗಳಿಗೆ ವಿಧೇಯರಾಗಿ ನಡೆಯುವುದು ಆಗ ಮನುಕುಲದ ಬದುಕು ತೊಡಕುಗಳಿಲ್ಲದಂತೆ ಸಾಗಲು ಸಾಧ್ಯವಾಗುತ್ತದೆ.

ಶಾಲಾ–ಕಾಲೇಜು ವಿದ್ಯಾರ್ಥಿಗಳು, ಪ್ರಜ್ಞಾವಂತ ಪ್ರತಿಯೊಬ್ಬ ನಾಗರಿಕರು ಸಸಿ ನೆಟ್ಟು ಬೆಳೆಸುವ ಸಂಕಲ್ಪ ತೊಡಬೇಕು. ಅಷ್ಟೇ ಅಲ್ಲ ತಾನಿದ್ದ ಬಳಿಯೆಲ್ಲ ಗಿಡ–ಮರಗಳನ್ನು ಪೋಷಿಸುವುದೇ ಪ್ರತಿಯೊಬ್ಬನ ಪ್ರಾಥಮಿಕ ಹಾಗೂ ಕಡ್ಡಾಯ ಕರ್ತವ್ಯವಾಗಬೇಕು. ಪ್ರತಿಯೊಬ್ಬರು ಪ್ರಕೃತಿಯೇ ದೇವರೆಂದು ಭಯ–ಭಕ್ತಿಯಿಂದ ಆರಾಧಿಸಬೇಕು. ಹಸಿರಿದ್ದರೆ ನನ್ನ ಉಸಿರು ಇರುವುದೆಂದು ಹಸಿರಿನ ಸಂವರ್ಧನೆಗಾಗಿ ತನ್ನ ಬದುಕಿನರ್ಧ ಭಾಗವನ್ನು ಸಮರ್ಪಿಸಬೇಕು. ಆಗ ಪ್ರಾಕೃತಿಕ ಸಮತೋಲನದಿಂದಾಗಿ ಶಾಂತವಾಗಿ ಈ ಜೀವ ಜಗತ್ತು ಜೀವಿಸಲು ಸಾಧ್ಯವಾಗುತ್ತದೆ. ಸಾಲುಮರದ ತಿಮ್ಮಕ್ಕ–ಬಿಕ್ಕಲುಚಿಕ್ಕಯ್ಯನವರ ವ್ಯಕ್ತಿತ್ವ ಸಾಧನೆಗಳು ಕಣ್ಮುಂದೆ ನರ್ತಿಸಬೇಕು. ಅದು ಹೃದಯದೊಳಗೆ ನೆಲೆಯಾಗಿ ಕೈಯೊಳಗೆ ಅನುಷ್ಠಾನವಾಗುತ್ತಿರಬೇಕು.

ಒಂದು ವೃಕ್ಷ ಹೇಗೆ ತನ್ನ ಫಲವನ್ನು ಬಿಟ್ಟು ಸಾರ್ಥಕವಾಗಿಸಿಕೊಳ್ಳುತ್ತದೆಯೋ ಅಂತೆಯೇ ಈ ಜೀವನಸಾರ್ಥಕವಾಗುವಂತಹ ಸಾಧನೆಯನ್ನು ಮಾಡಬೇಕು. ಈ ಜೀವನವೆಂಬ ಸಂಪತ್ತನ್ನು ಸದ್ವಿನಿಯೋಗ ಮಾಡಬೇಕು. ಆಗ ಜೀವನ ಮಧುರವಾಗುವುದು.

ಗಿಡಬಳ್ಳಿ ಮರಗಳು, ಜುಳು–ಜುಳು ಹರಿಯುವ ಹಳ್ಳ ಕೊಳ್ಳ ತೊರೆಗಳು, ನದನದಿಗಳು, ಸಮುದ್ರ–ಸಾಗರಗಳು, ಬೆಟ್ಟ–ಗುಡ್ಡಗಳು, ಗಿರಿ–ಶಿಖರಗಳು ವ್ಯಕ್ತಿಯ ಹುಟ್ಟಿನಿಂದ ಚಟ್ಟದವರೆಗೂ ಒಂದಿಲ್ಲೊಂದು ಪ್ರಭಾವವನ್ನು ಬೀರಿರುತ್ತವೆ. ವ್ಯಕ್ತಿಯ ಮೈ ಕಣ ಕಣದಲ್ಲೂ ನಿಸರ್ಗದ ಋಣವಿರುತ್ತದೆ. ಅದನ್ನು ತೀರಿಸಿದಾಗಲೇ ಮಾನವ ಮಹಾತ್ಮನಾಗುತ್ತಾನೆ. ಚಿಕ್ಕಯ್ಯ–ತಿಮ್ಮಕ್ಕವರು ನಿಸರ್ಗದ ಋಣವನ್ನು ತೀರಿಸಿ ಮಹಾತ್ಮರಾಗಿರುವುದು. ಅವರ ಸಾಧನೆಯ ಸತ್ಪಥ ಇಂದು–ಮುಂದು ಎಂದೆಂದೂ ಆದರ್ಶ ಹಾಗೂ ಅನುಕರಣೀಯವಾದುದು.

೧

# ಅನುಬಂಧ

## ಅನುಬಂಧ : ೧

### ವೃಕ್ಷಮಾತೆ ತಿಮ್ಮಕ್ಕ ಬೆಳೆಸಿರುವ ಸಾಲಮರಗಳು







## ಅನುಬಂಧ : ೨

### ಛಾಯಚಿತ್ರಗಳಲ್ಲಿ ತಿಮ್ಮಕ್ಕ










ಸಂದರ್ಶಿಸುತ್ತಿರುವ ಲೇಖಕ ಡಾ. ನೆಲ್ಲಿಕಟ್ಟೆ ಎಸ್.ಸಿದ್ದೇಶ್



## ಅನುಬಂಧ : ೩

## ಪ್ರಶಸ್ತಿ ಪತ್ರಗಳು








ಕರ್ನಾಟಕ ಸರ್ಕಾರ
ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ
ಕರ್ನಾಟಕ ರಾಜ್ಯ ಪರಿಸರ ಪ್ರಶಸ್ತಿ
2007-08
ಶ್ರೀಮತಿ. ಸಾಲುಮರದ ತಿಮ್ಮಕ್ಕ.
ಇವರಿಗೆ ಪರಿಸರ ಸಂರಕ್ಷಣೆ ಮತ್ತು ಪರಿಸರ ಜಾಗೃತಿ ಕಾರ್ಯಕ್ರಮಗಳ ಸೇವೆಯನ್ನು
ಶ್ಲಾಘಿಸಿ ಈ ಪ್ರಶಸ್ತಿಯನ್ನು ನೀಡಿ ಗೌರವಿಸಲಾಗಿದೆ.
(ಅಭಿಜಿತ್ ದಾಸ್‌ಗುಪ್ತ ಭಾ.ಅ.ಸೇ)
ಪ್ರಧಾನ ಕಾರ್ಯದರ್ಶಿಗಳು,
ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ
(ಸಿ. ಚನ್ನಿಗಪ್ಪ)
ಸನ್ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು
(ಅರವಿಂದ್ ಜನ್ನು ಭಾ.ಅ.ಸೇ)
ಕಾರ್ಯದರ್ಶಿಗಳು (ಪರಿಸರ ಮತ್ತು ಜೀವಿಶಾಸ್ತ್ರ)
ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ
MELTING ICE - HOT TOPIC?
ಕರಗುತ್ತಿದೆ ಹಿಮಗಡ್ಡೆ ......ಗಂಭೀರ ವಿಷಯ?


ಕರ್ನಾಟಕ ಸರ್ಕಾರ
ಸಮಾಜ ಕಲ್ಯಾಣ ಇಲಾಖೆ
ಭಾರತರತ್ನ ಡಾ|| ಬಾಬಾ ಸಾಹೇಬ್ ಅಂಬೇಡ್ಕರ್ ಪ್ರಶಸ್ತಿ
ಶ್ರೀಮತಿ ಸಾಲುಮರದ ತಿಮ್ಮಕ್ಕ
ಬೆಂಗಳೂರು ಗ್ರಾಮಾಂತರ
ಸನ್ಮಾನ್ಯರೆ,
ತಾವು ಸಮಾಜ ಸೇವಾ ಕ್ಷೇತ್ರದಲ್ಲಿ
ಸಲ್ಲಿಸಿರುವ ಅನುಪಮ ಸೇವೆಗಾಗಿ




## ಅನುಬಂಧ : ೪

# ಸನ್ಮಾನ ಪತ್ರಗಳು
















ದಿ ಬೆಂಗಳೂರು ಸಿಟಿ ಇನ್ಸ್ಟಿಟ್ಯೂಟ್
ಸಾಲುಮರದ ತಿಮ್ಮಕ್ಕನವರಿಗೆ
ಸನ್ಮಾನ ಪತ್ರ


****ಸನ್ಮಾನ ಪತ್ರ****



ಜ್ಞಾನವಾಹಿನಿ ಪಬ್ಲಿಕ್ ಸ್ಕೂಲ್
ಅಭಿನಂದನಾ ಪತ್ರ


ಗ್ರೀನ್ ಇಂಡಿಯಾ ವಾಲಂಟೀರ್ ಫಾರ್ ಎನ್ವಿರಾನ್‌ಮೆಂಟ್
ದಾವಣಗೆರೆ.
ಪಂಪಾಪತಿ ಪರಿಸರ ಪ್ರಶಸ್ತಿ


ವಿಶ್ವ ಮಹಿಳಾ ದಿನಾಚರಣೆ ಸಮಿತಿ, ತುಮಕೂರು
ವಿಶ್ವ ಮಹಿಳಾ ದಿನಾಚರಣೆ-2001
ಸಾಲುಮರದ ತಿಮ್ಮಕ್ಕರವರಿಗೆ ಅರ್ಪಿಸಿದ
ಸನ್ಮಾನ ಪತ್ರ



ಆಚಾರ್ಯ ಶಿಕ್ಷಣ ಸಂಸ್ಥೆಗಳು
ಆಚಾರ್ಯ ಹಬ್ಬ
ಸನ್ಮಾನ ಪತ್ರ





ಸಾಂಸ್ಕೃತಿಕ ಸಂಘಟನೆ, ಮಂಡ್ಯ.
ಅಭಿನಂದನಾ ಪತ್ರ


ಕನ್ನಡ ಯುವಕ ಸಂಘ (ನೋಂ)
ಸಾಲು ಮರದ ತಿಮ್ಮಕ್ಕನಿಗೆ
ಸನ್ಮಾನ ಪತ್ರ


ದಿ ಬೆಂಗಳೂರು ಸಿಟಿ ಇನ್‌ಸ್ಟಿಟ್ಯೂಟ್
ಸನ್ಮಾನ ಪತ್ರ


ಜ್ಞಾನವಾಹಿನಿ ಪಬ್ಲಿಕ್ ಸ್ಕೂಲ್
ಅಭಿನಂದನಾ ಪತ್ರ




****ಸನ್ಮಾನ ಪತ್ರ****


GIVE
ಗ್ರೀನ್ ಇಂಡಿಯಾ ವಾಲಂಟಿಯರ್ಸ್ ಫಾರ್ ಎನ್‌ವಿರಾನ್‌ಮೆಂಟ್
ದಾವಣಗೆರೆ.
ಪಂಪಾಪತಿ ಪರಿಸರ ಪ್ರಶಸ್ತಿ


ಸಾಲುಮರದ ತಿಮ್ಮಕ್ಕ ನಮಗೆ ಆದರ್ಶವಾಗಲಿ
'ವನಸಿರಿ' ಬಳಗ
ಹಸಿರೇ ನಮ್ಮ ಜೀವನದ ಉಸಿರಾಗಿರಲಿ !
ಬಳ್ಳೂರು- ಬೇಲೂರು ತಾ.॥ ಹಾಸನ ಜಿ.॥
ಸನ್ಮಾನ ಪತ್ರ
'ಗಿಡನೆಟ್ಟು ಮರ ಬೆಳೆಸಿ ★ ಪರಿಸರ ಉಳಿಸಿ'
ಎಂಬ ಸಾಮಾಜಿಕ ಜಾಗೃತಿಯನ್ನು ಜೀವನವಿಡೀ ಶ್ರಮಿಸಿ ಜನತೆಯಲ್ಲಿ ಮೂಡಿಸಿದ
ಸನ್ಮಾನ್ಯರಾದ ಸಾಲುಮರದ ತಿಮ್ಮಕ್ಕ ನವರಿಗೆ
ಬಳ್ಳೂರು ಉಮೇಶ್ ನೇತೃತ್ವದ ವನಸಿರಿ ಕಾರ್ಯಕ್ರಮದಲ್ಲಿ ಗೌರವಪೂರ್ವಕವಾಗಿ
ಈ ಸನ್ಮಾನ ಪತ್ರ ವನ್ನು ಸಂಸ್ಮರಣಿಕೆಯೊಂದಿಗೆ ಅರ್ಪಿಸಲಾಗಿದೆ.
* ನಿಮ್ಮ ಪರಿಸರ ಕಾಳಜಿ ನಮಗೆಲ್ಲರಿಗೂ ಆದರ್ಶವಾಗಿರಲಿ ! *
ವನಸಿರಿ ಪರಿಸರ ಕಾರ್ಯಕ್ರಮ ★ ಕ್ಷೇತ್ರ- ಹಳ್ಳಿಡಿ ಗ್ರಾಮ ★ ತಾ. 05. 06. 2007
ಡಿ. ಎನ್. ರವೀಂದ್ರ ಕುಮಾರ್
ಸಾಮಾಜಿಕ ಅರಣ್ಯ ವಲಯಾಧಿಕಾರಿ, ಬೇಲೂರು
ಮ. ಶಿವಮೂರ್ತಿ,
ಅಧ್ಯಕ್ಷರು, ತಾ॥ಯುವಜನ ಒಕ್ಕೂಟ, ಬೇಲೂರು.
ಅನಂತ ಅರಸು,
ಪತ್ರಕರ್ತರು, ಬೇಲೂರು


ಪರಿಸರ ವೇದಿಕೆ (ರಿ) ಬಳ್ಳಾರಿ.
ಪ್ರಶಸ್ತಿ ಪತ್ರ
ನಿರ್ಮಲ ಪರಿಸರಕ್ಕಾಗಿ ಬದುಕನ್ನೆ ಮುಡಿಪಾಗಿಸಿ, ಮರಗಳೇ ತನ್ನ ಮಕ್ಕಳೆಂದು ಬಗೆದು ಸಾಲು ಮರಗಳನ್ನು ಬೆಳೆಸಿ ಪರಿಸರ ಪ್ರೇಮಿಯಾದ ಶ್ರೀಮತಿ ಸಾಲುಮರದ ತಿಮ್ಮಕ್ಕನವರ ಸಾಧನೆ ಅನುಪಮವಾದುದು.
ಮರಗಳಿಗಾಗಿಯೇ, ಮಳೆ ಗಾಳಿ ಬಿಸಿಲೆನ್ನದೇ ಬದುಕಿನುದ್ದಕ್ಕೂ ಹಸಿರೇ ಉಸಿರಾಗಿಸಿಕೊಂಡ ಶ್ರೀಮತಿ ಸಾಲುಮರದ ತಿಮ್ಮಕ್ಕನವರಿಗೆ ಬಳ್ಳಾರಿಯ ಪರಿಸರ ವೇದಿಕೆಯು "ವನಮಾತೆ" ಪ್ರಶಸ್ತಿಯನ್ನು ನೀಡಿ ಗೌರವಿಸಿದೆ.
ಎ. ಶ್ರೀನಿವಾಸುಲು
ಜಿಲ್ಲಾಧ್ಯಕ್ಷರು
ಪರಿಸರ ವೇದಿಕೆ (ರಿ) ಬಳ್ಳಾರಿ
ದಿನಾಂಕ : 16.04.2006
ಬಳ್ಳಾರಿ.




॥ ಓಂ ನವದುರ್ಗೈ ನಮಃ ॥
ಹಿರಿಯ ಶ್ರೀಗಳು
ಕಿರಿಯ ಶ್ರೀಗಳು
ಶ್ರೀ ದುರ್ದಂಡೇಶ್ವರ ಮಹಂತ ಶಿವಯೋಗಿಗಳವರ ಮಠ
ಬೇಬಿ ಗ್ರಾಮ, ಚಿನಕುರಳಿ ಹೋಬಳಿ, ಪಾಂಡವಪುರ ತಾಲ್ಲೂಕು, ಮಂಡ್ಯ ಜಿಲ್ಲೆ.
☎ : 9901479333, 08236-205918
ಶ್ರೀಮತಿ ಸಾಲುಮರದ ತಿಮ್ಮಕ್ಕ
ಕಾವೇರಿ ಪ್ರಶಸ್ತಿ
ತುಮಕೂರು ಜಿಲ್ಲೆಯ ಕಕ್ಕೆನಹಳ್ಳಿ ಗ್ರಾಮದಲ್ಲಿ ಶ್ರೀಯುತ ಚಿಕ್ಕರಂಗಯ್ಯ ಮತ್ತು ಶ್ರೀಮತಿ ವಿಜಯಮ್ಮನವರ ಆರು ಜನ ಹೆಣ್ಣುಮಕ್ಕಳಲ್ಲಿ ಮೂರನೆಯವರಾಗಿ ಶ್ರೀಮತಿ ತಿಮ್ಮಕ್ಕನವರು ಜನಿಸಿದರು.

## ಅನುಬಂಧ : ೫

## ನೆನಪಿನ ಕಾಣಿಕೆಗಳು

















ಮೂಟೆ ಕಟ್ಟಿಹಾಕಿರುವ ನೆನಪಿನ ಕಾಣಿಕೆಗಳು

**ಅನುಬಂಧ : ೬**

## ಗ್ರಂಥ ಋಣ


೧. ಅರಣ್ಯಶಾಸ್ತ್ರ –ಅಜ್ಜಂಪುರ ಕೃಷ್ಣಸ್ವಾಮಿ
೨. ಪರಿಸರ ಸ್ವರೂಪ –ಜಿ.ಎಸ್. ಜಯದೇವ
೩. ಪರಿಸರ ವಿಜ್ಞಾನ –ಹೆಚ್.ಆರ್. ಕೃಷ್ಣಮೂರ್ತಿ
೪. ಪರಿಸರ –ಹೆಚ್.ಆರ್. ಕೃಷ್ಣಮೂರ್ತಿ
೫. ಛಲಬೇಕು ಶರಣಂಗೆ –ನೆಲ್ಲಿಕಟ್ಟೆ ಎಸ್.ಸಿದ್ದೇಶ್
೬. ಸ್ವಾಮಿವಿವೇಕಾನಂದರ ಬೋಧನೆಯ ಸಾರ –ಶ್ರೀರಾಮಕೃಷ್ಣಾಶ್ರಮ
೭. ಸಾಲುಮರದ ತಿಮ್ಮಕ್ಕ –ಕೆ.ಎನ್. ಪ್ರಮೀಳಾ ಪಾಲನೇತ್ರ
೮. ಪಕ್ಷಿಕಾಶಿ –ಕುವೆಂಪು
೯. ಶ್ರೀಸಿದ್ದೇಶ್ವರಸ್ವಾಮಿಗಳವರ ಪ್ರವಚನಗಳಿಂದ ಆಯ್ದ ಕಥೆಗಳು –ಡಾ. ಶ್ರದ್ಧಾನಂದಾಸ್ವಾಮಿಗಳು
೧೦. ಗರತಿಯ ಹಾಡು –ಹಲಸಂಗಿ ಗೆಳೆಯರು
೧೧. ವ್ಯಕ್ತಿತ್ವ ವಿಕಾಸ ಹಾಗೂ ಕನ್ನಡ ಸಾಹಿತ್ಯ –ಡಾ. ನೆಲ್ಲಿಕಟ್ಟೆ ಎಸ್.ಸಿದ್ದೇಶ್
೧೨. ಮಂಕುತಿಮ್ಮನ ಕಗ್ಗ –ಡಿ.ವಿ.ಜಿ.
೧೩. ವಿವೇಕ ಸಂಪದ –ತ್ರೈಮಾಸಿಕ ಪತ್ರಿಕೆ
೧೪. ದವನ ದಂಡೆ –ಸೋ.ಮು. ಭಾಸ್ಕರಾಚಾರ್
೧೫. ದಿವ್ಯಜೀವನ –ಶ್ರೀ ಅರೋಬಿಂದೋ
೧೬. ವಿಶ್ವವಿಖ್ಯಾತ ಮಹಿಳೆಯರು –ಬೇ.ಗೋ. ರಮೇಶ್
೧೭. ಬೇರು ತೋರಿದ ಹಾದಿ –ಡಾ. ಕುಮಾರಚಲ್ಯ
೧೮. ಅಭಿನವಕಾಳಿದಾಸ ಬಸವಪ್ಪಶಾಸ್ತ್ರಿ –ಡಾ. ನೆಲ್ಲಿಕಟ್ಟೆ ಎಸ್.ಸಿದ್ದೇಶ್
೧೯. ಹಸಿರು ಹೊನ್ನು –ಬಿ.ಜಿ.ಎಲ್. ಸ್ವಾಮಿ
೨೦. ಭಾರತೀಯ ಆಧ್ಯಾತ್ಮಿಕ ಪರಂಪರೆ –ಸ್ವಾಮಿ ಪ್ರಭವಾನಂದ




ಇಂದು ಭಯಂಕರ ಬಯಕೆಗಳಿಂದ ಪ್ರಕೃತಿಯನ್ನು ವಿಕೃತಿಯನ್ನಾಗಿಸಿದ್ದರ ಫಲವಾಗಿ ಬದುಕು ಹಾಹಾಕಾರವಾಗುತ್ತಿದೆ. ಅದನ್ನು ಅಹ್ಲಾದಕರಗೊಳಿಸಲು ಪ್ರಕೃತಿಯನ್ನು ಸಂರಕ್ಷಿಸಬೇಕು. ಮಾನವನು ಇಳೆಯಲ್ಲಿ ಹೊಳೆಯುವಂತೆ ಮಾಡಿರುವ ಮರಗಳನ್ನೇ ಮಕ್ಕಳೆಂದು ಸಾಕಿ ಸಲುಹಿರುವ **ಸಾಲಮರದ ತಿಮ್ಮಕ್ಕ** ಮಾತೆಯ ಜೀವನ ಮತ್ತು ಸಾಧನೆಯನ್ನ ಕವಿ, ಲೇಖಕ, ಸಂಶೋಧಕ, ಪ್ರಗತಿಪರಚಿಂತಕ ಉತ್ತಮ ಉಪನ್ಯಾಸಕರಾದ ಡಾ. ನೆಲ್ಲಿಕಟ್ಟೆ ಎಸ್.ಸಿದ್ದೇಶ್‌ರವರು **"ಸಾಲುಮರದ ತಿಮ್ಮಕ್ಕ"** ಎಂಬ ಅಪೂರ್ವ ಕೃತಿಯಲ್ಲಿ ತಲಸ್ಪರ್ಶಿಯಾಗಿ, ಹೃದಯಂಗಮವಾಗಿ ಚಿತ್ರಿಸಿರುವರು.

ಮನುಕುಲದ ಮಹೋನ್ನತಿಗೆ ಮರಗಳ ಕಾಣಿಕೆ ಅಪೂರ್ವವಾದುದು. ಅಂತಹ ಮರಗಳನ್ನು ಬೆಳೆಸಿರುವ ಮಹಾಮಾತೆ ಸಾಲುಮರದ ತಿಮ್ಮಕ್ಕನವರ ವ್ಯಕ್ತಿತ್ವ ಅನುಪಮವಾದುದು. ಅವರ ಜೀವನ ಚಿತ್ರಣವನ್ನು ಎಳೆ ಎಳೆಯಾಗಿ ಲೇಖಕರು ಬಿಡಿಸಿಟ್ಟಿದ್ದಾರೆ. ಯುಕ್ತ ನುಡಿಮುತ್ತುಗಳೊಂದಿಗೆ ನಿರೂಪಣಾ ಶೈಲಿ ಆಪ್ಯಾಯಮಾನವಾಗಿದೆ. ಇಂತಹ ಅಪೂರ್ವ ಕೃತಿಗಳಿನ್ನೂ ಡಾ. ನೆಲ್ಲಿಕಟ್ಟೆ ಎಸ್. ಸಿದ್ದೇಶ್‌ರವರಿಂದ ಪ್ರಕಟವಾಗಲೆಂದು ಹಾರೈಸುತ್ತೇನೆ.

**ಅಶೋಕ ಎನ್.ಚಲವಾದಿ**
ಆಡಳಿತಾಧಿಕಾರಿಗಳು
**ಕನ್ನಡ ಪುಸ್ತಕ ಪ್ರಾಧಿಕಾರ**
ಕನ್ನಡ ಭವನ, ಬೆಂಗಳೂರು

# ಪರಿಸರಮಾತೆ

# ಸಾಲುಮರದ ತಿಮ್ಮಕ್ಕ



**ಡಾ. ನೆಲ್ಲಿಕಟ್ಟೆ ಎಸ್. ಸಿದ್ದೇಶ್**